ಸಂಪುಟ: 13 Volume ಸಂಚಿಕೆ: 235 Issue ಪುಟಗಳು: 08 Pages ಮಂಗಳವಾರ 04 ನವೆಂಬರ 2025 ₹2 PRGINO. 120927(RNINO:KARKAN/2011/48371) BDR/054/2026-2027 mallammanudi@gmail.com www.mallammanudi.in 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಮಾತುಗಳು ಪರಸ್ಪರ ಬೇರ್ಪಡಿಸಲು ಇರುವುದಲ್ಲ , ಪರಸ್ಪರಸೇರಿಸಲು ಇರುವುದಾಗಿದೆ
ಮಹಾತ್ಮ ಗಾಂಧೀಜಿ .

4 ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನಕ್ಕೆ ಕ್ರಮ
2 ಕನ್ನಡ ನಾಡು, ನುಡಿ ಉಳಿಸಿ ಬೆಳೆಸಿ
8 ವಿದ್ಯಾರ್ಥಿಗಳಿಗೆ ಅಪ್ರೆಂಟಿಸ್‌ಶಿಪ ಅವಕಾಶ

# 20 ಮಂದಿ ಸಾವು

## ಬಸ್ ಮೇಲೆ ಟಿಪ್ಪರ್ ಬಿದ್ದು ಹೈದರಾಬಾದ್–ಬಿಜಾಪುರ ಹೆದ್ದಾರಿಯ ರಂಗಾರೆಡ್ಡಿ ಜಿಲ್ಲೆಯಲ್ಲಿ ಭೀಕರ ಅಪಘಾತ



ಹೈದರಾಬಾದ್,ನ.3–ಸರ್ಕಾರಿ ಬಸ್‌ಮೇಲೆಜಲ್ಲಿತುಂಬಿದ್ದಟಿಪ್ಪರ್ ಪಲ್ಟಿಯಾಗಿ ಸಂಭವಿಸಿದ ಭೀಕರ ಅಪಘಾತದಲ್ಲಿಕನಿಷ್ಟ20 ಮಂದಿ ಪ್ರಯಾಣಿಕರುಸಾವನ್ನಪ್ಪಿಹಲವರು ಗಂಭೀರಗಾಯಗೊಂಡಿರುವದಾರುಣ ಘಟನೆಹೈದರಾಬಾದ್–ಬಿಜಾಪುರ ರಾಷ್ಟ್ರೀಯಹೆದ್ದಾರಿಯರಂಗಾರೆಡ್ಡಿ ಜಿಲ್ಲೆಯಲ್ಲಿಇಂದುಬೆಳಿಗ್ಗೆಸಂಭವಿಸಿದೆ.

ರಂಗಾರೆಡ್ಡಿ ಜಿಲ್ಲೆಯ ಚೆವೆಲ್ಲಾ ತಾಲೂಕಿನ ಮಿರಾಜಗುಡಾ ಬಳಿ ಆರ್‌ಟಿಸಿಬಸ್‌ಮೇಲೆಟಿಪ್ಪರ್‌ನಲ್ಲಿದ್ದ ಜಲ್ಲಿಕಲ್ಲುಬಿದ್ದಪರಿಣಾಮ20ಮಂದಿ ಪ್ರಯಾಣಿಕರುಮೃತಪಟ್ಟಿದ್ದರೆ,ಹಲವರು ಗಂಭೀರವಾಗಿಗಾಯಗೊಂಡಿದ್ದಾರೆ. ಪ್ರಯಾಣಿಕರು ಜಲ್ಲಿಕಲ್ಲಿನ ಅಡಿ ಸಿಲುಕಿದ್ದಪರಿಣಾಮಸ್ಥಳದಲ್ಲೇ20 ಮಂದಿಅಸುನೀಗಿದ್ದರೆ,ಹಲವರು ಗಂಭೀರವಾಗಿಗಾಯಗೊಂಡಿದ್ದಾರೆ.

2ನೇ ಪುಟನೋಡಿ


**ಪ್ರಧಾನಿ ಮೋದಿ ಪರಿಹಾರ ಘೋಷಣೆ**

ಪ್ರಧಾನಿನರೇಂದ್ರಮೋದಿಅವರು ಈಅಪಘಾತದಲ್ಲಿಸಾವನ್ನಪ್ಪಿದವರ ಕುಟುಂಬಗಳಿಗೆಸಂತಾಪಸೂಚಿಸಿದ್ದಾರೆ. ಅವರು ಮೃತರ ಕುಟುಂಬಗಳಿಗೆ ಪ್ರಧಾನಮಂತ್ರಿರಾಷ್ಟ್ರೀಯಪರಿಹಾರ ನಿಧಿಯಿಂದ ತಲಾ 2 ಲಕ್ಷ ಮತ್ತು ಗಾಯಗೊಂಡವರಿಗೆ 50 ಸಾವಿರ ರೂ. ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ.

**ತುರ್ತುಕ್ರಮಸಿಎಂಸೂಚನೆ:**

ರಸ್ತೆ ಅಪಘಾತದ ಬಗ್ಗೆ ಮುಖ್ಯಮಂತ್ರಿರೇವಂತ್‌ರೆಡ್ಡಿಆಘಾತ ವ್ಯಕ್ತಪಡಿಸಿದ್ದಾರೆ. ಘಟನಾಸ್ಥಳಕ್ಕೆ ತಕ್ಷಣ ತೆರಳಿರಕ್ಷಣಾಕ್ರಮಗಳನ್ನು ಕೈಗೊಳ್ಳುವಂತೆಅಧಿಕಾರಿಗಳಿಗೆಅವರು ಆದೇಶಿಸಿದರು. ರಕ್ಷಣಾಕ್ರಮಗಳನ್ನು ತೀವ್ರಗೊಳಿಸುವಂತೆಸಿಎಂಅವರು ರಂಗಾರೆಡ್ಡಿಜಿಲ್ಲಾಧಿಕಾರಿಗೆಸೂಚನೆ ನೀಡಿದರು.

## ಬ್ರಿಮ್ಸ್ ವಸತಿಗೃಹ ಆವರಣದಲ್ಲಿದ್ದ ಅನಧಿಕೃತ ಕಾಂಪೌಂಡ್ ತೆರವು



ಮಲ್ಲಮ್ಮ ನುಡಿ ವಾರ್ತೆ

ಬೀದರ್.ನ. 04 :– ಬೀದರ್‌ನಲ್ಲಿ ಬೆಳ್ಳಂಬೆಳಿಗ್ಗೆ ಬುಲ್ಡೋಜರ್ ಸದ್ದು ಕೇಳಿಬಂದಿದೆ. ಬ್ರಿಮ್ಸ್ ವಸತಿ ಗೃಹದ ಆವರಣದಲ್ಲಿ ಕಟ್ಟಿದ ಅನಧಿಕೃತ ಕಾಂಪೌಂಡ್‌ತೆರವುಮಾಡಲಾಗಿದೆ. ಬೀದರ್ ನಜನವಾಡರಸ್ತೆಯಲ್ಲಿರುವ ಬ್ರಿಮ್ಸ್ ಕ್ವಾಟ್ರಸ್ ನಲ್ಲಿ ಬ್ರಿಮ್ಸ್ ನಿರ್ದೇಶಕರ ದೂರಿನ ಹಿನ್ನೆಲೆ ಪಾಲಿಕೆ ವತಿಯಿಂದ ತೆರವು ಕಾರ್ಯಾಚರಣೆ ಮಾಡಲಾಗಿದೆ. ರಾತ್ರೋರಾತ್ರಿ ಅನಧಿಕೃತವಾಗಿ ಕಾಂಪೌಂಡ್ ಕಟ್ಟಿ ತೆರಳುತ್ತಿದ್ದ ಆರೋಪ ಕೇಳಿಬಂದಿತ್ತು. ಸೋಮವಾರ (ಅ.03) ಮುಂಜಾನೆ ಸಹಾಯಕ ಆಯುಕ್ತ ಮಹಮ್ಮದ್ ಶಕೀಲ್ ನೇತೃತ್ವದಲ್ಲಿ ತೆರವು ಮಾಡಲಾಗಿದೆ. ಸ್ಥಳಕ್ಕೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಬೈಕ್ ಸವಾರರಿಗೆ ಹೆಲ್ಮೇಟ್ ಉಚಿತ ವಿತರಣೆ



ಬೀದರ್.ನ.04 :–ಜಿಲ್ಲಾಪಂಚಾಯಿತಿಮಾಜಿಸದಸ್ಯರೂಆದಯುವ ಕ್ರಾಂತಿ ಸಂಘಟನೆಯ ರಾಜ್ಯ ಅಧ್ಯಕ್ಷ ಗುಂಡುರೆಡ್ಡಿ ಅವರ ಜನ್ಮದಿನದ ನಿಮಿತ್ತ ಯುವಕ್ರಾಂತಿ ಸಂಘಟನೆ ವತಿಯಿಂದ ಈಚೆಗೆ ಹೆಲ್ಮೇಟ್ ಉಚಿತ ವಿತರಣೆ, ರಕ್ತದಾನ ಶಿಬಿರ ನಡೆದವು. 2ನೇ ಪುಟನೋಡಿ

## ಹೈಕಮಾಂಡ್ ಮಾತೇ ಅಂತಿಮ: ಸಿದ್ದು

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ನ. 3– ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆಎಂಬಮಾತುಗಳಬಗ್ಗೆಗರಂಆದಮುಖ್ಯಮಂತ್ರಿ ಸಿದ್ದರಾಮಯ್ಯನವರು, ಸಂಪುಟಪುನಾರಚನೆಸೇರಿದಂತೆಎಲ್ಲಾವಿಚಾರಗಳ ಬಗ್ಗೆ ಹೈಕಮಾಂಡ್ ಮಾತೇ ಅಂತಿಮ. ಬೇರೆಯವರ ಮಾತಿಗೆ ಕಿಮ್ಮತ್ತಿಲ್ಲ ಎಂದಿದ್ದಾರೆ. ಮೈಸೂರಿನಲ್ಲಿಂದುಸುದ್ದಿಗಾರರೊಂದಿಗೆಮಾತನಾಡಿದಅವರು, ಅಧಿಕಾರಹಂಚಿಕೆ, ನೂತನಮುಖ್ಯಮಂತ್ರಿ, ಸಂಪುಟಪುನಾರಚನೆಯಾವುದರ ಬಗ್ಗೆಯೂ ಪಕ್ಷದಹೈಕಮಾಂಡ್ ಆಗಿರುವಸೋನಿಯಾಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನಖರ್ಗೆ ಯಾರೂಮಾತನಾಡಿಲ್ಲ. ಮಾಧ್ಯಮದಲ್ಲೇ ಹೆಚ್ಚು ಚರ್ಚೆಯಾಗುತ್ತಿದೆ. ಎಲ್ಲ ವಿಚಾರಗಳ ಬಗ್ಗೆ ವರಿಷ್ಠರದ್ದೇ ಅಂತಿಮ ತೀರ್ಮಾನ ಎಂದು ಪುನರುಚ್ಚರಿಸಿದರು. 2ನೇ ಪುಟನೋ

## ಸೆಲ್ಫಿ : ಗೆಳೆಯನ ರಕ್ಷಿಸಲು ಹೋಗಿ ಪ್ರಾಣ ಕಳೆದುಕೊಂಡ ಯುವಕ

ಕಲಬುರಗಿ,ನ.3–ಮೊಬೈನಲ್ಲಿ ಸೆಲ್ಫಿ ತೆಗೆದುಕೊಳ್ಳುವಾಗ ನೀರಿಗೆ ಬಿದ್ದ ಗೆಳೆಯನರಕ್ಷಿಸಲುಹೋದಯುವಕನೀರಿನಲ್ಲಿಕೊಚ್ಚಿಕೊಂಡುಹೋಗಿರುವ ಘಟನೆಹೆರೂರ್ ಡ್ಯಾಂನಲ್ಲಿಭಾನುವಾರನಡೆದಿದ್ದು, ಸೋಮವಾರಆತನ ಶವಪತ್ತೆಯಾಗಿದೆ. ನಗರದ ಟಿಪ್ಪುಚೌ???ನ ಅಹೆಮದ್ ನಗರ ಕಾಲೋನಿ ನಿವಾಸಿ ಮಹಮ್ಮದ್ ಹಸನಸಾಬ ತಂದೆ ಅಬ್ದುಲ್ ಗಫೂರ್ ಶೇಖ್ (18) ಮೃತಪಟ್ಟಯುವಕ. ಮಹಮ್ಮದ್ ಹಸನಸಾಬ್ 7–8 ಜನಗೆಳೆಯರೊಂದಿಗೆ ಭಾನುವಾರ ಕಾಳಗಿ ಸಮೀಪದ ಹೆರೂರ್ 2ನೇ ಪುಟನೋಡಿ

## ಶಾಶ್ವತ ಆಟೋ ನಿಲ್ದಾಣ ಸ್ಥಾಪನೆಗೆ ಕರವೇ ಮನವಿ



ಸುರಪುರ : ಕರವೇ ಸುರಪುರ ತಾಲ್ಲೂಕು ಘಟಕದ ವತಿಯಿಂದ ಸುರಪುರಕೇಂದ್ರ ಬಸ್‌ನಿಲ್ದಾಣದ ಕಂಪೌಂಡ್ ಹಿಂಬಾಗ ಅಥವಾ ಹೊರಭಾಗದಲ್ಲಿ ಶಾಶ್ವತ ಆಟೋ ನಿಲ್ದಾಣವನ್ನುಸ್ಥಾಪಿಸುವಂತೆಆಗ್ರಹಿಸಿ ನಗರಸಭೆಪೌರಾಯುಕ್ತರಿಗೆಮನವಿ ಸಲ್ಲಿಸಲಾಯಿತು.

ಈಸಂದರ್ಭದಲ್ಲಿಕರವೇತಾಲ್ಲೂಕು ಅಧ್ಯಕ್ಷ ಶ್ರೀ ವೆಂಕಟೇಶ ನಾಯಕ ಭೈರಿಮಡ್ಡಿ, ಉಪಾಧ್ಯಕ್ಷರಾದಮಲ್ಲು ವಿಷ್ಣುಸೇನಾ ಹಾಗೂ ನಾಗೇಂದ್ರ ದೊರೆ ಚಂದ್ಲಾಪೂರ ಸೇರಿದಂತೆ ಹಲವಾರು ಕರವೇ ನಾಯಕರೂ ಹಾಗೂ ಆಟೋ ಚಾಲಕರೂ ಭಾಗವಹಿಸಿದರು.

ಪದಾಧಿಕಾರಿಗಳಾದ ರಘುವೀರ ದೇಸಾಯಿ, ರಾಮುಲುಬೇವಿನಾಳ, ಮೌನೇಶಬಡಿಗೇರ, ಆಟೋಚಾಲಕರಾದ ಪರಶುರಾಮಕಬಾಡಗೇರಿ, ರಂಗನಾಥ ದೊರಿ, ಯಲ್ಲಾಲಿಂಗ, ಗುರನಾಥ, ಸುರೇಶ, ಅಮರನಾಥ, ರವಿ, ಅನ್ವರ್, ನಾಗರಾಜ, ರೂಪೇಶ್,

2ನೇ ಪುಟನೋಡಿ

## ನಾಡು, ನುಡಿಯ ಅಭಿಮಾನ ಇರಲಿ ಅಧ್ಯಕ್ಷ ಸಿದ್ರಾಮಪ್ಪ ಮಾಸಿಮಾಡೆ ಸಲಹೆ



ಬೀದರ್.ನ.04:–ಕನ್ನಡಿಗರೆಲ್ಲರಲ್ಲಿ ನಾಡು, ನುಡಿಯ ಬಗ್ಗೆ ಅಭಿಮಾನ ಇರಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಪ್ರೊ. ಸಿದ್ರಾಮಪ್ಪ ಮಾಸಿಮಾಡೆಹೇಳಿದರು. ನಗರದ ನೌಬಾನಸರ್ಕಾರಿಪ್ರಥಮದರ್ಜೆ ಕಾಲೇಜಿನಲ್ಲಿಈಚೆಗೆಆಯೋಜಿಸಿದ್ದ ಕರ್ನಾಟಕರಾಜ್ಯೋತ್ಸವ ವಆಚರಣೆ ಕಾರ್ಯಕ್ರಮವನ್ನುಉದ್ಘಾಟಿಸಿಅವರು ಮಾತನಾಡಿದರು. ಕನ್ನಡ ನಾಡಿನ ಇತಿಹಾಸವನ್ನು ಅರಿಯಬೇಕು. ಆಂಗ್ಲ ಭಾಷೆ ವ್ಯಾಮೋಹದಿಂದ ಹೊರಬಂದು, ಹೆಚ್ಚುಹೆಚ್ಚುಕನ್ನಡ ಬಳಸಬೇಕು ಎಂದು ತಿಳಿಸಿದರು. ಉಪನ್ಯಾಸಕ ಡಾ. ಈಶ್ವರಯ್ಯ ಕೊಡಂಬಲ್ ಮಾತನಾಡಿ, ಮಾತೃ ಭಾಷೆಕನ್ನಡವನ್ನು ಉಳಿಸಿ, ಬೆಳೆಸಲು ಎಲ್ಲರೂ ಮುಂದಾಗಬೇಕು. ಆಗ ಮಾತ್ರ ಕನ್ನಡ ಬೆಳವಣಿಗೆ ಕಾಣಲು ಸಾಧ್ಯವಿದೆ ಎಂದು ಹೇಳಿದರು.

ಅಧ್ಯಕ್ಷತೆವಹಿಸಿದ್ದಪ್ರಾಚಾರ್ಯ ಪ್ರೊ. ಶಂಕರ ಕೆ. ಗಣಗೊಂಡ ಮಾತನಾಡಿ, ಕರುನಾಡು ಶ್ರೀಮಂತ ಸಂಸ್ಕೃತಿಯನ್ನು ಹೊಂದಿದೆ. ನಾಡು ಹಾಗೂನುಡಿಗೆತನ್ನದೇಆದಇತಿಹಾಸ ಇದೆಎಂದುತಿಳಿಸಿದರು. ವಿದ್ಯಾರ್ಥಿ ಸೋಪಾನ್ ಮಾತನಾಡಿದರು. ರಾಜ್ಯೋತ್ಸವಪ್ರಯುಕ್ತಏರ್ಪಡಿಸಿದ್ದ ವಿವಿಧಸ್ಪರ್ಧೆಗಳವಿಜೇತರಿಗೆಬಹುಮಾನ ವಿತರಿಸಲಾಯಿತು. ಕರ್ನಾಟಕಪಶು ವೈದ್ಯಕೀಯವಿಶ್ವವಿದ್ಯಾಲಯದನಿವೃತ್ತ ಅಧಿಕಾರಿ ವೀರಭದ್ರಪ್ಪ ಉಪ್ಪಿನ್,

ಡಾ. ಚೆನ್ನಕೇಶವಮೂರ್ತಿ, ಡಾ. ರಾಜಕುಮಾರಅಲ್ಲೂರೆ, ಡಾ. ಸಂಗಶೆಟ್ಟಿ ಶೆಟಕಾರ್, ಮತ್ತಿತರರು ಇದ್ದರು.

ಕಾಲೇಜಿನ ಸಾಂಸ್ಕೃತಿಕ ಸಮಿತಿ ಸಂಚಾಲಕಡಾ. ಎಲಿಶಾದೇವದಾಸ ಸ್ವಾಗತಿಸಿದರು. ಶಿವಾನಿನಿರೂಪಿಸಿದರು.

## ಶಶಿ ಹೊಸಳ್ಳಿ ಆರೋಪ ಸತ್ಯಕ್ಕೆ ದೂರ, ಎಸ್.ಟಿ.ಪಿಯಲ್ಲಿ ಚಿತಾಗಾರ ಯಂತ್ರ ಭದ್ರವಾಗಿದೆ: ಮಹಮ್ಮದ್ ಗೌಸ್




ಮಲ್ಲಮ್ಮ ನುಡಿ ವಾರ್ತೆ

ಬೀದರ್. ನ. 04 :– ಮಹಾನಗರ ಪಾಲಿಕೆಟಿಜಜಿಟಿಜ ಸದಸ್ಯರಾದ ಶಶಿ ಹೊಸಳ್ಳಿ ಅವರು ಭಾನುವಾರಪತ್ರಿಕಾಗೋಷ್ಠಿಯಲ್ಲಿ ಪೌರಾಡಳಿತಸಚಿವರಹಿಮ್ ಖಾನ್, ತನ್ನ ಮೇಲೆ ಹಾಗೂ ನಮ್ಮ ಪಕ್ಷ ಸೇರಿದಂತೆ ನಮ್ಮ ಮಹಾನಗರ ಪಾಲಿಕೆ ಮೇಲೆ ಸುಳ್ಳು ಆರೋಪ ಹೋರಿಸಿದ್ದಾರೆ. ನಾಸಿರ್ ಖಾನ್ ಅವರು ರಹಿಮ್ ಖಾನ್ ಅವರ ಸೋದರ ಸಂಬಂಧಿಯಾಗಿರದೇ ಅವರುರಹಿಮ್ ಖಾನ್ ಅವರೊಂದಿಗೆ ಯಾವುದೇಸಂಭಂಧಿ ಇರುವುದಿಲ್ಲ. ಅವರುಕೇವಲಗುತ್ತಿಗೆದಾರಅಷ್ಟೆ. ತಾಲೂಕಿನಗೋರ್ನಹಳ್ಳಿಯಲ್ಲಿರುವ ಎಸ್ ಟಿಪಿಯಲ್ಲಿಚಿತ್ತಗಾರಯಂತ್ರ ಭದ್ರವಾಗಿದೆಎಂದುಮಹಾನಗರ ಪಾಲಿಕೆಯಅಧ್ಯಕ್ಷಮಹಮ್ಮದ್ ಗೌಸ್ ತಿಳಿಸಿದರು. ನಗರದಜಿಲ್ಲಾ ಪತ್ರಿಕಾಭವನದಲ್ಲಿಸೋಮವಾರ ಮಧ್ಯಾಹ್ನಪತ್ರಿಕಾಗೋಷ್ಠಿಉದ್ದೇಶಿಸಿ ಮಾತನಾಡಿರುವಅವರು, ಬಿ.ವಿ. ಭೂಮರಡ್ಡಿಮಹಾವಿದ್ಯಾಲಯದ ಎದುರಿರುವರುದ್ರಭೂಮಿಯಲ್ಲಿ ಚಿತಾಗಾರಯಂತ್ರ ಅಳವಡಿಸದೇ ಹಣ ಲಪಟಾಯಿಸಿದ್ದಾರೆ ಎಂಬ ಆರೋಪ ನಿರಾಧಾರ ಎಂದರು.

2020–21ನೇ ಸಾಲಿನ 15ನೇ ಹಣಕಾಸು ಯೋಜನೆಯಲ್ಲಿ ಬೀದರ್ ಜಿಲ್ಲೆಗೆಎರಡುಚಿತಾಗಾರ ಯಂತ್ರಗಳುಮಂಜುರಿಯಾಗಿದ್ದು ನಿಜ. ಆದರೆಆಸಮಯದಲ್ಲಿನಗರ ಸಭೆಅಸ್ತಿತ್ವದಲ್ಲಿರಲಿಲ್ಲ. ಜಿಲ್ಲಾಧಿಕಾರಿಗಳು ಆಡಳಿತಾಧಿಕಾರಿಗಳಾಗಿದ್ದರು. ಅವರ ನೇತೃತ್ವದಲ್ಲಿಯೇಖರಿದಿಕಾರ್ಯ ನಡೆದಿದೆ. ಆದರ ಟೆಂಡರ್

2ನೇ ಪುಟನೋಡಿ

## ಬೆಂಗಳೂರಿನಲ್ಲಿ ಮಾತ್ರ ಪರಿಸರ ವಿರೋಧಿಯಾಗುವುದೆ? : ರಾಮಲಿಂಗಾರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಬಿಜೆಪಿ ಆಡಳಿತವಿರುವರಾಜ್ಯಗಳಲ್ಲಿ ಅಭಿವೃದ್ಧಿಯಾಗುವಸುರಂಗ, ಬೆಂಗಳೂರಿನಲ್ಲಿಮಾತ್ರಪರಿಸರ ವಿರೋಧಿಯಾಗುವುದೇ? ಬೆಂಗಳೂರಿನ ಜನತೆಗೆ ಬೇಕಿರುವುದುಸಂಚಾರ ದಟ್ಟಣೆಯಿಂದ ಮುಕ್ತಿಯೇ ಹೊರತುನಿಮ್ಮ ರಾಜಕೀಯಅಡ್ಡಿ ಆತಂಕಗಳಲ್ಲಎಂದುಬೆಂಗಳೂರು ಟನಲ್ ರಸ್ತೆ ವಿರೋಧಿಸುತ್ತಿರುವ ರಾಜ್ಯ ಬಿಜೆಪಿ ನಾಯಕರ ವಿರುದ್ಧ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಪ್ರತಿಭಟನೆ ಟೀಕಿಸಿ ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಪೋಸ್ಟ್ ಮಾಡಿರುವ ಸಚಿವರಾಮಲಿಂಗಾರೆಡ್ಡಿ, ಬಿಜೆಪಿ ನಾಯಕರು 'ಲಾಲ್‌ಬಾಗ್ ಉಳಿಸಿ' ಎಂದು ನಾಟಕವಾಡುತ್ತಿದ್ದಾರೆ. ಲಾಲ್‌ಬಾಗ್ ಬಗ್ಗೆ ನಿಮ್ಮದುಕಾಳಜಿಯೋ? ರಾಜಕೀಯವೋ? ನಿಮಗೆ ಲಾಲ್‌ಬಾಗ್ ಬಗ್ಗೆ ನಿಜವಾಗಿಯೂಕಾಳಜಿಇದ್ದರೆ, ಇಡೀಯೋಜನೆಯನ್ನು ರದ್ದುಪಡಿಸಲು ಹಠ ಹಿಡಿಯುವ ಬದಲು, ಸುರಂಗದ ಪ್ರವೇಶ ಮತ್ತು ನಿರ್ಗಮನಕ್ಕೆಪರ್ಯಾಯ ಜಾಗವನ್ನು ಸೂಚಿಸುವ ಧೈರ್ಯ ತೋರಿ. ಅದನ್ನು ಬಿಟ್ಟು, ಜನರದಾರಿ ತಪ್ಪಿಸುವರಾಜಕೀಯಗಿಮಿಕ್ ಏಕೆ? ಎಂದು ಪ್ರಶ್ನಿಸಿದ್ದಾರೆ

**ನಿಮ್ಮ ದ್ವಂದ್ವ ನೀತಿಗೆ ಇದಕ್ಕಿಂತ ಸಾಕ್ಷಿ ಬೇಕೇ?**

ಡಾ. ಎಂ.ಎಚ್. ಮರಿಗೌಡರು ಲಾಲ್‌ಬಾಗ್ ಅನ್ನು 240 ಎಕರೆಗೆ ವಿಸ್ತರಿಸಿ, ತೋಟಗಾರಿಕಾ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿದರು.

2ನೇ ಪುಟನೋಡಿ






**ICC ಮಹಿಳಾ ಏಕದಿನ ವಿಶ್ವಕಪ್ 2025: ಇತಿಹಾಸ ಬರೆದ ದೀಪ್ತಿ ಶರ್ಮಾ: ಹಲವು ದಾಖಲೆ ಸೃಷ್ಟಿ; ಪುರುಷರೂ ಮಾಡದ ಸಾಧನೆ!**

# ಒಂದನೇ ಪುಟದಿಂದ

## ಹೈಕಮಾಂಡ್ ಮಾತೇ ಅಂತಿಮ: ಸಿದ್ದು

ವರಿಷ್ಠರು ಏನನ್ನೂ ಹೇಳದೆ, ಯಾರು ಯಾರೋ ಏನೇನೋ ಮಾತನಾಡಿದರೆ ಅದಕ್ಕೆಲ್ಲಾ ಕಿಮ್ಮತ್ತಿಲ್ಲ ಎಂದು ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂಬ ಕೆಲ ನಾಯಕರ ಹೇಳಿಕೆ ಬಗ್ಗೆ ಗರಂ ಆಗಿ ಪ್ರತಿಕ್ರಿಯಿಸಿದರು.

ಸಂಪುಟ ಪುನಾರಚನೆ: ದೆಹಲಿಗೆ

ರಾಜ್ಯ ಸಚಿವ ಸಂಪುಟ ಪುನಾರಚನೆಯ ಬಗ್ಗೆ ಪುನರುಚ್ಚರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಬಿಹಾರ ಚುನಾವಣೆಯ ನಂತರ ದೆಹಲಿಗೆ ಹೋಗುತ್ತಿದ್ದೇನೆ. ಸಂಪುಟ ಪುನಾರಚನೆ ಬಗ್ಗೆ ರಾಹುಲ್‌ಗಾಂಧಿ, ಮಲ್ಲಿಕಾರ್ಜುನ ಖರ್ಗೆಯವರ ಜತೆ ಚರ್ಚೆ ಮಾಡುತ್ತೇನೆ. ಅವರು ಏನು ಹೇಳುತ್ತಾರೋ ಅದರಂತೆ ನಡೆದುಕೊಳ್ಳುತ್ತೇನೆ ಎಂದರು.

ಕಾಂಗ್ರೆಸ್ ಪಕ್ಷಕ್ಕೆ ಹೈಕಮಾಂಡ್ ಇದೆ. ಹೈಕಮಾಂಡ್ ಹೇಳುವುದು ಮಾತ್ರ ಮುಖ್ಯ ಮತ್ತು ಅದೇ ಅಂತಿಮ. ಈ ತಿಂಗಳ 15 ರಂದು ದೆಹಲಿಗೆ ಹೋಗಿ ಸಂಪುಟ ಪುನಾರಚನೆ ಬಗ್ಗೆ ವರಿಷ್ಠರ ಜತೆ ಮಾತನಾಡುತ್ತೇನೆ. ಅವರು ಏನು ಹೇಳುತ್ತಾರೋ ಅದನ್ನು ಕೇಳುತ್ತೇನೆ ಎಂದು ಹೇಳಿದರು.

ಬಿಹಾರದಲ್ಲಿ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ

ಬಿಹಾರದಲ್ಲಿ ಆಡಳಿತ ವಿರೋಧಿ ಅಲೆ ಇದ್ದು, ಕಾಂಗ್ರೆಸ್–ಆರ್‌ಜೆಡಿ ನೇತೃತ್ವದ ಮಹಾಮೈತ್ರಿ ಕೂಟ ಅಧಿಕಾರಕ್ಕೆ ಬರುವ ಭರವಸೆ ಇದೆ ಎಂದು ಅವರು ಹೇಳಿದರು.

ಹಾಲಿ ಮುಖ್ಯಮಂತ್ರಿ ನಿತೀಶ್‌ಕುಮಾರ್ ಹಲವು ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿದ್ದು, ಅವರಿಗೆ ಯಾವುದೇ ಸಿದ್ಧಾಂತವಿಲ್ಲ. ಜತೆಗೆ ಅವರ ಆಡಳಿತದಲ್ಲಿ ಬಿಹಾರ ಅಭಿವೃದ್ಧಿಯಾಗಿಲ್ಲ. ಇದರೊಂದಿಗೆ ಬಡತನವೂ ಹೆಚ್ಚಾಗಿದೆ. ಈ ಕಾರಣದಿಂದ ಬಡವರು, ಹಿಂದುಳಿದವರು, ದಲಿತರು ಹಾಗೂ ಅಲ್ಪಸಂಖ್ಯಾತರು ಕಾಂಗ್ರೆಸ್ ಪರ ಮತ ಹಾಕುತ್ತಾರೆ. ಮಹಾಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಅವರು ತಿಳಿಸಿದರು.

ಬಿಹಾರದಲ್ಲಿ ಆಡಳಿತ ವಿರೋಧಿ ಅಲೆ ಜತೆಗೆ ಬಿಜೆಪಿಯ ಭ್ರಷ್ಟಾಚಾರ, ದುರಾಡಳಿತದ ಅಂಶಗಳು ಪ್ರಮುಖವಾಗಲಿವೆ. ಜನ ನಿತೀಶ್ ಆಡಳಿತಕ್ಕೆ ಬೇಸತ್ತಿದ್ದಾರೆ. ಹಾಗಾಗಿ ಆರ್‌ಜೆಡಿ–ಕಾಂಗ್ರೆಸ್ ಮೈತ್ರಿ ಕೂಟ ಅಧಿಕಾರಕ್ಕೆ ಬರಲಿದೆ ಎಂದು ಅವರು ಹೇಳಿದರು.

ರಾಜ್ಯದ ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ ಬಿಜೆಪಿ ಬಿಹಾರ ಚುನಾವಣೆಗಳಲ್ಲಿ ರಾಜ್ಯದ ಗ್ಯಾರಂಟಿ ಯೋಜನೆಗಳ ಭರವಸೆಗಳ ಮಾದರಿಯನ್ನು ಅನುಸರಿಸಿದೆ ಎಂದು ಅವರು ಹೇಳಿದರು.

ಮೈಸೂರಿನಲ್ಲಿ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಹೆಚ್ಚುತ್ತಿರುವ ರೆಸಾರ್ಟ್‌ಗಳು, ಕಾಡಿನ ಸಫಾರಿ, ಕಾಡಿನಲ್ಲಿ ನೀರು ಹಾಗೂ ಮೇವಿನ ಕೊರತೆ ಈ ಎಲ್ಲಾ ಕಾರಣಕ್ಕೆ ಕಾಡುಪ್ರಾಣಿಗಳು ಜನವಸತಿ ಪ್ರದೇಶಕ್ಕೆ ಬರುತ್ತಿವೆ. ಈ ಬಗ್ಗೆ ಅರಣ್ಯ ಸಚಿವರು ಈಗಾಗಲೇ ಸಭೆ ನಡೆಸಿದ್ದಾರೆ. ನಾನು ಒಂದು ಸಭೆ ಕರೆದಿದ್ದೇನೆ. ಕಾಡಿನ ಸಫಾರಿಗಳನ್ನು ಕಡಿಮೆ ಮಾಡಲಾಗಿದೆ. ಅಲ್ಲದೆ ಅಕ್ರಮವಾಗಿ ತಲೆಯೆತ್ತಿರುವ ರೆಸಾರ್ಟ್‌ಗಳನ್ನು ಬಂದ್ ಮಾಡಿಸಲಾಗುವುದು ಎಂದು ಅವರು ತಿಳಿಸಿದರು.

## ಹೋಗಿ ಪ್ರಾಣ ಕಳೆದುಕೊಂಡ ಯುವಕ

ಡ್ಯಾಂಗೆ ತೆರಳಿದ್ದರು. ಈ ವೇಳೆ ಗೆಳೆಯರೊಂದಿಗೆ ಸೇರಿ ಮೊಬೈಲ್‌ನಲ್ಲಿ ಸೆಲ್ಫಿ ತೆಗೆದುಕೊಳ್ಳುವಾಗ ಗೆಳೆಯನೊಬ್ಬ ನೀರಿಗೆ ಬಿದ್ದಿದ್ದು, ಆತನನ್ನು ರಕ್ಷಿಸಲು ಹೋಗಿ ಮಹಮ್ಮದ್ ಹಸನಸಾಬ್ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದ. ಸೋಮವಾರ ಈತನ ಶವ ಪತ್ತೆಯಾಗಿದೆ. ನೀರಿನಲ್ಲಿ ಕೊಚ್ಚಿಕೊಂಡು ಹೋದ ಈತನ ಗೆಳೆಯನನ್ನು ಮೀನುಗಾರರು ರಕ್ಷಣೆ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಈ ಬಗ್ಗೆ ಕಾಳಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 20 ಮಂದಿ ಸಾವು

ಈ ಅಪಘಾತದ ಕುರಿತು ಮಾಹಿತಿ ಅತಿವೇಗದ ಚಾಲನೆಯಿಂದ ಅಪಘಾತ ಸಂಭವಿಸಿದೆ. ಈ ರಸ್ತೆ ಅಪಘಾತದಿಂದಾಗಿ ಹೈದರಾಬಾದ್–ಬಿಜಾಪುರ ರಸ್ತೆಯಲ್ಲಿ ಭಾರಿ ಸಂಚಾರ ದಟ್ಟಣೆ ಉಂಟಾಗಿತ್ತು. ಚೆವೆಲ್ಲಾ–ವಿಕಾರಾಬಾದ್ ಮಾರ್ಗದಲ್ಲಿ ಹೆಚ್ಚಿನ ವಾಹನಗಳನ್ನು ನಿಲ್ಲಿಸಲಾಗಿತ್ತು.

ಸಾರಿಗೆ ಸಚಿವ ಆಘಾತ :

ಮತ್ತೊಂದೆಡೆ, ಸಾರಿಗೆ ಸಚಿವ ಪೊನ್ನಂ ಪ್ರಭಾಕರ್ ಅವರು ಅಪಘಾತದ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ. ಅಪಘಾತದ ಬಗ್ಗೆ ಅವರು ಆರ್‌ಟಿಸಿ ಎಂಡಿ ನಾಗಿ ರೆಡ್ಡಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದರು. ಗಾಯಾಳುಗಳಿಗೆ ಉತ್ತಮ ವೈದ್ಯಕೀಯ ಚಿಕಿತ್ಸೆ ಒದಗಿಸುವಂತೆ ಅವರು ಆದೇಶಿಸಿದರು. ಜಲ್ಲಿ ತುಂಬಿದ ಟಿಪ್ಪರ್ ತಪ್ಪು ಮಾರ್ಗದಲ್ಲಿ ಬಂದು ಬಸ್‌ಗೆ ಡಿಕ್ಕಿ ಹೊಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆರ್‌ಟಿಸಿ ಅಧಿಕಾರಿಗಳು ತಕ್ಷಣ ಘಟನಾ ಸ್ಥಳಕ್ಕೆ ಹೋಗಬೇಕೆಂದು ಸಚಿವ ಪೊನ್ನಂ ಪ್ರಭಾಕರ್ ಸೂಚಿಸಿದ್ದಾರೆ.

ತಿಳಿದ ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ರಕ್ಷಣಾ ಕಾರ್ಯಾಚರಣೆ ನಡೆಸಿದರು. ಜೆಸಿಬಿಯಿಂದ ಜಲ್ಲಿಕಲ್ಲಿನಡಿ ಸಿಲುಕಿದವರನ್ನು ರಕ್ಷಿಸಿದರು.

ಅಪಘಾತಕ್ಕೀಡಾದ ಬಸ್ ತಾಂಡೂರ್‌ನಿಂದ ಹೈದರಾಬಾದ್ ಕಡೆ ತೆರಳುತಿತ್ತು. ಇದರಲ್ಲಿ 70 ಮಂದಿ ಪ್ರಯಾಣಿಕರಿದ್ದು, ಬಹುತೇಕರು ಉದ್ಯೋಗಿಗಳು ಮತ್ತು ವಿದ್ಯಾರ್ಥಿಗಳು. ವಿದ್ಯಾರ್ಥಿಗಳೆಲ್ಲರೂ ಹೈದರಾಬಾದ್‌ನ ವಿವಿಧ ಕಾಲೇಜುಗಳಲ್ಲಿ ಓದುತ್ತಿದ್ದವರಾಗಿದ್ದಾರೆ.

ಭಾನುವಾರ ರಜಾ ದಿನವಾಗಿದ್ದರಿಂದ ಅವರೆಲ್ಲರೂ ತಮ್ಮ ತಮ್ಮ ಊರುಗಳಿಗೆ ತೆರಳಿದ್ದರು. ಇಂದು ಹೈದರಾಬಾದ್‌ಗೆ ವಾಪಸ್ ಬರುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ಅಪಘಾತದಲ್ಲಿ ಗಾಯಾಳುಗಳನ್ನು ತಕ್ಷಣ ಚಿಕಿತ್ಸೆಗಾಗಿ ಚೆವೆಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಘಟನಾಸ್ಥಳದಲ್ಲಿ ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ. ಟಿಪ್ಪರ್ ಚಾಲಕನ

## ಹೆಲ್ಮೇಟ್ ಉಚಿತ ವಿತರಣೆ

ಹುಮನಾಬಾದ್ ಪಟ್ಟಣದ ಸಿಪಿಐ ಕಚೇರಿಯಲ್ಲಿ 100 ಬೈಕ್ ಸವಾರರಿಗೆ ಹೆಲ್ಮೇಟ್ ವಿತರಿಸಲಾಯಿತು. ಬಸವಕಲ್ಯಾಣ ತಾಲ್ಲೂಕಿನ ಹಣಮಂತವಾಡಿ ಗ್ರಾಮದಲ್ಲಿ ಆಯೋಜಿಸಿದ್ದ ಶಿಬಿರದಲ್ಲಿ 47 ಮಂದಿ ರಕ್ತದಾನ ಮಾಡಿದರು.

ಯುವ ಕ್ರಾಂತಿ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ಭೂರೆ, ಪ್ರಮುಖರಾದ ಮಲ್ಲಿಕನಾಥ ಮಡಗೆ, ರಾಜು ದುಬಲಗುಂಡಿ, ಪರಮೇಶ್, ಪಪ್ಪುರಾಜ ಮತ್ತಿತರರು ಇದ್ದರು.

## ಸ್ಥಾಪನೆಗೆ ಕರವೇ ಮನವಿ

ರಾಘವೇಂದ್ರ, ಗನಿಸಾಬ್, ಮೌನೇಶ ಝುಂಡದಕೇರಿ, ಶಂಸುದ್ದೀನ್, ರಸುಲ್ ಸಾಬ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮನವಿಯ ಮೂಲಕ ಸುರಪುರದ ಆಟೋ ಚಾಲಕರಿಗೆ ಅನುಕೂಲವಾಗುವಂತೆ ಶಾಶ್ವತ ಆಟೋ ನಿಲ್ದಾಣದ ವ್ಯವಸ್ಥೆ ಮಾಡುವಂತೆ ಕರವೇ ಘಟಕವು ನಗರಸಭೆ ಆಡಳಿತಕ್ಕೆ ಮನವಿ ಮಾಡಿಕೊಂಡಿದೆ.

## ಭದ್ರವಾಗಿದೆ: ಮಹಮ್ಮದ್ ಗೌಸ್

ಪ್ರಕ್ರಿಯ ಪೂರ್ಣಗೊಂಡು 2023 ಫೆಬ್ರವರಿಯಲ್ಲಿ ಚಿತಾಗಾರ ಯಂತ್ರಗಳ ಖರಿದಿ ಕಾರ್ಯ ಪೂರ್ಣಗೊಂಡಿದೆ. ಈ ಎರಡು ಯಂತ್ರಗಳ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಆಗಿದ್ದು ಸಹ ನಿಜ. ನಗರದ ಹೊರವಲಯದಲ್ಲಿರುವ ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ಯಂತ್ರವು ಸಹ ಕೆಟ್ಟು ಹೋಗಿದ್ದು ಅದನ್ನು ದುರುಸ್ತಿ ಮಾಡಬೇಕಿದೆ. ಈಗಾಗಲೇ ಆ ಪ್ರಕ್ರಿಯ ಪ್ರಗತಿಯಲ್ಲಿದೆ. ಬಿ.ವಿ.ಬಿ ಕಾಲೇಜು ಎದುರಿನ ರುದ್ರಭೂಮಿಗಾಗಿ ಮಂಜುರಿಯಾದ ಚಿತಾಗಾರ ಯಂತ್ರ ಗೊರನಳ್ಳಿ ಬಳಿಯ ಎಸ್.ಟಿ.ಪಿಯಲ್ಲಿದೆ. ಬಿವಿಬಿ ಕಾಲೇಜಿನ ಎದುರಿನ ರುದ್ರಭೂಮಿಯಲ್ಲಿ ಈ ಮಷಿನ್ ಅಳವಡಿಕೆಗೆ ಅಗತ್ಯ ಸೌಕರ್ಯಗಳಿಲ್ಲ. ಅದನ್ನು ಕೂಡಿಸಲು ಬೇಕಾಗುವ ಬೆಡ್, ಮೇಲ್ಛಾವಣಿ ಬೇಕು. ಅದು ಹರಿದು ಹೋಗಿದೆ. ಯಾವುದೇ ಸುರಕ್ಷಿತ ಸೌಕರ್ಯಗಳಿಲ್ಲದ ಕಾರಣ ಅದನ್ನು ಎಸ್.ಟಿ.ಯಲ್ಲಿ ಭದ್ರವಾಗಿ ಇಡಲಾಗಿದೆ. ಮುಂದಿನ ಎರಡು ತಿಂಗಳಲ್ಲಿ ಈ ರುದ್ರಭೂಮಿಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯ, ಮಷಿನ್ ಅಳವಡಿಕೆಗಾಗಿ ಬೇಕಾಗುವ ಬೆಡ್ ಸೌಲಭ್ಯ, ಸೆಡ್ ಸೌಕರ್ಯ, ವಿದ್ಯುತ ವ್ಯವಸ್ಥೆ, ಕಾವಲು ವ್ಯವಸ್ಥೆಗೆ ಬೇಕಾಗುವ ಎಲ್ಲ ಸೌಕರ್ಯಗಳ ಅಭಿವೃದ್ಧಿಗಾಗಿ ಈಗಾಗಲೇ ಪೌರಾಡಳಿತ ಸಚಿವ ರಹಿಮ್ ಖಾನ್ ಅವರು 4 ಕೋಟಿ ಹಣ ಮೀಸಲಿರಿಸಿದ್ದಾರೆ. ಆದಷ್ಟು ಬೇಗ ಈ ಎರಡು ರುದ್ರಭೂಮಿಗಳಲ್ಲಿ ಚಿತಾಗಾರ ಯಂತ್ರಗಳು ಕಾರ್ಯಾರಮಭ ಮಾಡಲಿವೆ ಎಂದು ಗೌಸ್ ಸ್ಪಷ್ಟಪಡಿಸಿದರು.

ಮಹಾನಗರ ಪಾಲಿಕೆಯ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಪ್ರಶಾಂತ ದೊಡ್ಡಿ, ಹಣಮಂತ ಮಲ್ಕಾಪುರೆ, ನವಿದ್ ಸೇರಿಕರ, ಸೌದ್ ಸೇರಿಕರ, ಮಾಜಿ ಸದಸ್ಯರಾದ ಧನರಾಜ ಹಂಗರಗಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ, ನಾಮ ನಿರ್ದೇಶಿತ ಸದಸ್ಯರಾದ ಆಜಮ್, ಸೂರ್ಯಕಾಂತ ಸಾದುರೆ, ಬ್ಲಾಕ್ ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಮಹಮ್ಮದ್ ಯುಸೂಫ್ ಹಾಗೂ ಇತರರು ಪತ್ರಿಕಾಗೋಷ್ಟಿಯಲ್ಲಿದ್ದರು.

ನಂತರ ಗೋರನಳ್ಳಿಯಲ್ಲಿನ ಎಸ್.ಟಿ.ಪಿಯಲ್ಲಿ ಇರಿಸಲಾದ ಚಿತಾಗಾರ ಯಂತ್ರ ತೋರಿಸಲು ಪತ್ರಕರ್ತರನ್ನು ಅವ್ಹಾನಿಸಿದರು.

## ವಿರೋಧಿಯಾಗುವುದೆ? : ರಾಮಲಿಂಗಾರೆಡ್ಡಿ

- ★ 2003ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಸ್‌ಎಂ ಕೃಷ್ಣ ಅವರು ಲಾಲ್‌ಬಾಗ್‌ನ ಪುನರುಜ್ಜೀವನಕ್ಕಾಗಿ 17 ಕೋಟಿ ಮಂಜೂರು ಮಾಡಿದ್ದರು.
- ★ ಎರಡು ಬಾರಿ ಅಧಿಕಾರದಲ್ಲಿದ್ದ ಬಿಜೆಪಿ ಲಾಲ್‌ಬಾಗ್‌ಗೆ ಏನು ಕೊಡುಗೆ ನೀಡಿದೆ?
- ★ ಕರ್ನಾಟಕದಲ್ಲಿ ಪರಿಸರ ಪಾಠ ಹೇಳುವ ನೀವು, ನಿಮ್ಮದೇ ಸರ್ಕಾರಗಳು ಬೇರೆ ರಾಜ್ಯಗಳಲ್ಲಿ ಮಾಡಿದ್ದೇನು?
- ★ ಅಟಲ್ ಸುರಂಗ (ಹಿಮಾಚಲ): ನಿಮ್ಮ ಹೆಮ್ಮೆಯ ಸಾಧನೆ ಎಂದು ಹೇಳಿಕೊಳ್ಳುತ್ತೀರಿ.
- ★ ಸೇಲಾ ಸುರಂಗ (ಅರುಣಾಚಲ): ನಿಮ್ಮ ಪಕ್ಷದ ಪ್ರಧಾನಿಗಳೇ ಉದ್ಘಾಟಿಸಿದ್ದು.
- ★ ಕಾಶ್ಮೀರದ ಸುರಂಗಗಳು: 'ಅಭಿವೃದ್ಧಿಯ ಹರಿಕಾರರು' ಎಂದು ನೀವೇ ಬೆನ್ನು ತಟ್ಟಿಕೊಳ್ಳುತ್ತೀರಿ.
- ★ ನಿತಿನ್ ಗಡ್ಕರಿ ಮಾತು: ನಿಮ್ಮದೇ ಕೇಂದ್ರ ಸಚಿವರು ಬೆಂಗಳೂರಿಗೆ ಸುರಂಗವೇ ಮದ್ದು ಎಂದಿದ್ದರು. ಈಗೇಕೆ ಈ ಯೂ–ಟರ್ನ್?

ಬೇರೆ ರಾಜ್ಯಗಳಲ್ಲಿ ಅಭಿವೃದ್ಧಿಯಾಗುವ ಸುರಂಗ, ಬೆಂಗಳೂರಿನಲ್ಲಿ ಮಾತ್ರ ಪರಿಸರ ವಿರೋಧಿಯಾಗುವುದೇ? ಬೆಂಗಳೂರಿನ ಜನತೆಗೆ ಬೇಕಿರುವುದು ಸಂಚಾರ ದಟ್ಟಣೆಯಿಂದ ಮುಕ್ತಿ, ನಿಮ್ಮ ರಾಜಕೀಯ ಅಡ್ಡಿ ಆತಂಕಗಳಲ್ಲ.

ನಿಮ್ಮ ಪರಿಸರಪ್ರೇಮ ಎಂಬ ನಾಟಕ ಕೇವಲ ಲಾಲ್‌ಬಾಗ್‌ಗೆ ಸೀಮಿತವೇ? ಕಬ್ಬನ್ ಪಾರ್ಕ್ ಅಭಿವೃದ್ಧಿಗೆ ನಿಮ್ಮ ಅವಧಿಯಲ್ಲಿ ಎಷ್ಟು ಅನುದಾನ ನೀಡಿದ್ದೀರಿ? ಅಧಿಕಾರದಲ್ಲಿ ಇದ್ದಾಗ ನಿಮಗೆ ಪರಿಸರದ ಮೇಲೆ ಎಷ್ಟರ ಮಟ್ಟಿಗೆ ಕಾಳಜಿ ಇತ್ತು ಎಂದು ಇದರಲ್ಲೇ ತಿಳಿಯುತ್ತದೆ! ಬಿಜೆಪಿಯವರೇ, ಅಭಿವೃದ್ಧಿಗೆ ಕೈಜೋಡಿಸಿ, ಇಲ್ಲವೇ ಜನರ ಮುಂದೆ ನಿಮ್ಮ ದ್ವಂದ್ವನೀತಿಯನ್ನು ಒಪ್ಪಿಕೊಳ್ಳಿ ಎಂದಿದ್ದಾರೆ.

## ಕುರ್ಚಿ ಕಿತ್ತಾಟದಲ್ಲಿ ರೈತರನ್ನು ಮರೆತ ಸರ್ಕಾರ : ಆರ್.ಅಶೋಕ್

ಬೆಂಗಳೂರು,ನ.3– ಕುರ್ಚಿ ಕಿತ್ತಾಟದಲ್ಲಿ ರೈತರನ್ನು ಸಂಪೂರ್ಣವಾಗಿ ಮರೆತಿರುವ ಸರ್ಕಾರ, ಬೆಳಗಾವಿ, ಬಾಗಲಕೋಟೆ, ಉತ್ತರಕನ್ನಡ ಜಿಲ್ಲೆಗಳ ಕಬ್ಬು ಬೆಳೆಗಾರರು ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದರೂ ಕ್ಯಾರೆ ಎನ್ನುತ್ತಿಲ್ಲ. ಅನ್ನದಾತರ ಸಂಕಷ್ಟಕ್ಕೆ ಸ್ಪಂದಿಸದ ಈ ರೈತವಿರೋಧಿ ಕಾಂಗ್ರೆಸ್? ಸರ್ಕಾರ ಇದ್ದರೆಷ್ಟು, ಹೋದರೆಷ್ಟು. ರಾಜೀನಾಮೆ ಕೊಟ್ಟು ಕರ್ನಾಟಕವನ್ನು ಉಳಿಸಿ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.

ಈ ಕುರಿತು ಎಕ್??ನಲ್ಲಿ ಪೋಸ್ಟ್ ಮಾಡಿರುವ ಅವರು, ಇನ್ನು ರೈತರು ತಮ ಸಂಕಷ್ಟವನ್ನು ಯಾರ ಬಳಿ ಹೇಳಿಕೊಳ್ಳಬೇಕು ಸ್ವಾಮಿ? ಇನ್ನೆಷ್ಟು ದಿನ ಈ ಭಂಡ ಬಾಳು ನಿಮದು ಎಂದು ಆಕ್ರೊ?ಶ ವ್ಯಕ್ತಪಡಿಸಿದ್ದಾರೆ.

ಒಂದೆಡೆ ಸೂರ್ಯಕಾಂತಿ, ಉದ್ದಿನಕಾಳು, ಸೋಯಾಬೀನ್ ಹೆಸರುಕಾಳು ಬೆಳೆದ ರೈತರು ತಮ ಫಸಲು ಮಾರಲಾಗದೆ ಸಂಕಷ್ಟದಲ್ಲಿದ್ದರೆ, ಮತ್ತೊಂದೆಡೆ ಕಬ್ಬು ಬೆಳೆಗಾರರು ಬೆಲೆ ಕುಸಿತದಿಂದ ಕಂಗಾಲಾಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಅಲಗಾಡುತ್ತಿರುವ ಕುರ್ಚಿಯಿಂದ ಹತಾಶರಾಗಿದ್ದು, ತಾಳೆ ಕಳೆದುಕೊಂಡು ಎಲ್ಲರ ಮೇಲೂ ಸಿಡಿಮಿಡಿ ಎನ್ನುತ್ತಿದ್ದೀರಿ. ನಾಯಕತ್ವ ಬದಲಾವಣೆ ಗೊಂದಲದಿಂದ ಸಚಿವರು, ಶಾಸಕರು ದಿಕ್ಕು ತೋಚದೆ ಹೈರಾಣಾಗಿ ಮನೆಯಿಂದ ಆಚೆ ಬರುತ್ತಿಲ್ಲ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.




ಬಸವಕಲ್ಯಾಣ :– ಇಲ್ಲಿನ ಅನುಭವ ಮಂಟಪದ ಪರಿಸರದಲ್ಲಿ ನಡೆಯಲಿರುವ 46. ನೇಯ ಶರಣ ಕಮ್ಮಟ ಅನುಭವ ಮಂಟಪ ಉತ್ಸವ–2025ರ ನಿಮಿತ್ಯ ನಗರದ ಜೈಶಂಕರ ಕಾಲೋನಿ ಹಾಗೂ ಸೀತಾ ಕಾಲೋನಿಯಲ್ಲಿ ಪ್ರಚಾರ ಮಾಡಲಾಯಿತು. ಈ ಸಂದರ್ಭದಲ್ಲಿ ಪೂಜ್ಯಶ್ರೀ ಬಸವಲಿಂಗ ಸ್ವಾಮೀಜಿ. ಶಂಕರ ಮದರಗ್ಯೆ. ಭೀಮಾಶಂಕರ ಮಾಶಾಳಕರ. ವೀರೇಶ್ ಕುಂಬಾರ. ಝರೆಪ ಕುಂಬಾರ್. ಸಂತೋಷ ಮಾಶಾಳಕರ. ಅಶೋಕ ಕುಂಬಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## ಶಶಿಧರ ಕೋಸಂಬೆ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ, ರಾಜ್ಯದಲ್ಲಿ ಮಕ್ಕಳ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಶಶಿಧರ ಕೋಸಂಬೆ ಅವರನ್ನು ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಕೆ.ನಾಗಣ್ಣ ಗೌಡ ಅವರ ಅಧಿಕಾರವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅ.20 ರಿಂದ ಅನ್ವಯವಾಗುವಂತೆ ಪ್ರಸ್ತುತ ಖಾಲಿ ಇರುವ ಅಧ್ಯಕ್ಷ ಸ್ಥಾನಕ್ಕೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಮುಂದಿನ ಆದೇಶದ ವರೆಗೆ ಶಶಿಧರ ಕೋಸಂಬೆ ಅವರನ್ನು ರಾಜ್ಯಪಾಲರ ಆದೇಶಾನುಸಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸರಕಾರದ ಅಧೀನ ಕಾರ್ಯದರ್ಶಿ ಉಮಾದೇವಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಿದ್ದಾರೆ.

## ಮಾದರಿ ಶ್ರೀಕ್ಷೇತ್ರವನ್ನಾಗಿ ಮಾಡುವುದೇ ನನ್ನ ಗುರಿ: ಬೆಲ್ದಾಳೆ



(ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ: ಜಾಂಗಲೇರಾಶ್ರೀ ವೀರಭದ್ರೇಶ್ವರ ಸರ್ವಧರ್ಮದ ಜನತೆಯ ಆರಾಧ್ಯ ದೇವರಾಗಿದ್ದು ಈ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಹಲವಾರು ಯೋಜನೆಗಳು ಹಾಕಿಕೊಂಡಿದ್ದೇನೆ. ರಾಜ್ಯದಲ್ಲಿ ಮಾದರಿಯ ಶ್ರೀಕ್ಷೇತ್ರವನ್ನಾಗಿ ಮಾಡುವುದೇ ನನ್ನ ಗುರಿ ಇದೆ ದೇವಾಲಯದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ ಬೀದರ ದಕ್ಷಿಣ ಕ್ಷೇತ್ರದ ಶಾಸಕ ಡಾ ಶೈಲೇಂದ್ರ ಬೆಲ್ದಾಳೆ ತಿಳಿಸಿದ್ದಾರೆ ಶ್ರೀ ವೀರಭದ್ರೇಶ್ವರ ದೇವಾಲಯ ಹಿಂದುಗಡೆ ಇರುವ ಪುರಾತನ ಕೆರೆಯಲ್ಲಿ ಶ್ರೀ ವೀರಭದ್ರೇಶ್ವರ ಭವ್ಯ ಪ್ರತಿಮೆ ಪ್ರತಿಷ್ಠಾಪಿಸುವ ನನ್ನ ಗುರಿಯಿದೆ ಎಂದು ಶೈಲೇಂದ್ರ ಬೆಲ್ದಾಳೆ ತಿಳಿಸಿದ್ದಾರೆ. ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವದಲ್ಲಿ ಭಕ್ತಾಧಿಗಳಿಗೆ ಯಾವುದೆ ತೊಂದರೆ ಯಾಗದಂತೆ ಸರ್ವ ವ್ಯವಸ್ಥೆ ಮಾಡಲಾಗಿದೆ. ಶ್ರೀ ವೀರಭದ್ರೇಶ್ವರ ಸರ್ವರಿಗೆ ಸನ್ಮಂಗಳ ಉಂಟುಮಾಡಲೆಂದು ಪ್ರಾರ್ಥಿಸಿದ್ದಾರೆ.




ಕಮಲನಗರ:ತಾಲೂಕಿನ ತೋರಣ ಗ್ರಾಮ ಪಂಚಾಯತ ಕಛೇರಿಯಲ್ಲಿ ಶನಿವಾರ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಿಮಿತ್ಯ ಗ್ರಾಮ ಪಂಚಾಯತ ಅಧ್ಯಕ್ಷ ಸುನಿಲ ಶಿಗರೆ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಅಭಿವೃದ್ಧಿ ಅಧಿಕಾರಿ ಮಲ್ಲೇಶ ಸರ್ ಅವರು ಕನ್ನಡಾಂಬೆ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸಿಬ್ಬಂದಿ ಮತ್ತು ಪಂಚಾಯತ ಸದಸ್ಯರು ಇದ್ದರು. ಶಾಲಾ ಮಕ್ಕಳು ನಾಡ ಗೀತೆ ಹಾಡಿ ಗಮನ ಸೆಳೆದರು.

## ಕನ್ನಡ ಭಾಷೆ ನಿತ್ಯ ಬದುಕಿನ ಮಂತ್ರವಾಗಲಿ: ಶಿವಾಜಿ ಆರ್.ಎಚ್



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಕನ್ನಡ ನಾಡು ನುಡಿ ರಾಜ್ಯೋತ್ಸವಕ್ಕೆ ಸೀಮಿತವಾಗದೆ ನಿತ್ಯ ಬದುಕಿನ ಮಂತ್ರವಾಗಲಿ. ಕನ್ನಡ ನೆಲದಲ್ಲಿ ಪರಕೀಯರ ಪುಂಡಾಟ ಎಂದು ಸಹಿಸುವುದಿಲ್ಲ, ಕನ್ನಡ ನೆಲ, ಜಲ ಮತ್ತು ಭಾಷಾಭಿವೃದ್ಧಿ ಸಂರಕ್ಷಣೆಗೆ ಕನ್ನಡಿಗರು ಸದಾ ಬಲಿದಾನಕ್ಕೆ ಸಿದ್ದರಾಗಬೇಕು ಎಂದು ಪ್ರಾಚಾರ್ಯ ಶಿವಾಜಿ ಆರ್.ಎಚ್.ನುಡಿದರು.

ಪಟ್ಟಣದ ತಹಸೀಲ್ದಾರ್ ಕಚೇರಿ ಆವರಣದಲ್ಲಿ ತಾಲೂಕು ಆಡಳಿತದಿಂದ ಶನಿವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತನಾಡಿದರು. ಕನ್ನಡಮ್ಮನ ಭವ್ಯ ಸಂಸ್ಕೃತಿ ಎತ್ತಿ ಹಿಡಿಯುವ ಬದಲಿಗೆ ಪರಕೀಯ ಭಾಷೆಗಳ ಬಗ್ಗೆ ಮಾತನಾಡುವ ಹಳವಂಡರ ವಿರುದ್ಧ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿ ಅನಿವಾರ್ಯ. ವಚನ ಸಾಹಿತ್ಯಗಳು ನಮ್ಮ ಬದುಕಿನ ಕನ್ನಡಿಯಾಗಿದೆ. ಗಡಿಭಾಗದಲ್ಲಿ ಕನ್ನಡ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಾವೆಲ್ಲರೂ ಕಂಕಣಬದ್ಧರಾಗಬೇಕು ಎಂದರು. ಕಸಾಪ ತಾಲೂಕಾ ಅಧ್ಯಕ್ಷ ಪ್ರಶಾಂತ ಮಠಪತಿ, ತಹಸೀಲ್ದಾರ್ ಅಮಿತಕುಮಾರ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಗ್ರಾಪಂ ಅಧ್ಯಕ್ಷೆ ಸುಶೀಲಾ ಸಜ್ಜನ್ ಅಧ್ಯಕ್ಷತೆ ವಹಿಸಿದ್ದರು. ತಾಪಂ ಇಒ ಹಣಮಂತರಾಯ ಕೌಟಿಗೆ, ಗ್ರೇಡ್ –2 ತಹಸೀಲ್ದಾರ್ ರಮೇಶ ಪೆದ್ದೆ, ಸಿಪಿಐ ಶ್ರೀಕಾಂತ ಅಲ್ಲಾಪುರ, ಪಿಎಸ್‌ಐ ಆಶಾ ರಾಠೋಡ್. ಪಿಡಿಒ ಶೇಷಪ್ಪಾ, ಪ್ರೊ.ಎಸ್. ಎನ್.ಶಿವಣಕರ, ತಾಪಂ ಮಾಜಿ ಅಧ್ಯಕ್ಷ ಶ್ರೀರಂಗ ಪರಿಹಾರ, ಯಶವಂತ ಬಿರಾದಾರ, ಉಮೇಶ ಜೀರ್ಗೆ, ಧನರಾಜ ಭವರಾ, ಮಡಿವಾಳಪ್ಪ ಮಹಾಜನ, ಪ್ರಶಾಂತ ಖಾನಾಪುರೆ, ಸತೀಶ ಜೀರ್ಗೆ ಇದ್ದರು. ಹಣಮಂತರಾಯ ಕೌಟಗೆ ಸ್ವಾಗತಿಸಿದರು. ಉಮಾಕಾಂತ ಮಹಾಜನ ನಿರೂಪಿಸಿದರು.

## ಕನ್ನಡ ನಾಡು, ನುಡಿ ಉಳಿಸಿ ಬೆಳೆಸಿ; ರಾಘವೇಂದ್ರ


ಯಾದಗಿರಿ; ಕನ್ನಡ ನಾಡು, ನುಡಿ, ನೆಲ, ಜಲ ಉಳಿಸಿ ಬೆಳೆಸುವುದು ನಮ್ಮೆಲ್ಲ ಕರ್ತವ್ಯವಾಗಿದೆ ಎಂದು ಜೇಸ್ಕಂ ಕಾರ್ಯನಿರ್ವಾಹಕ ಅಭಿಯಂತರ ರಾಘವೇಂದ್ರ ಡಿ ಹೇಳಿದರು. ನಗರದ ಜೇಸ್ಕಂ ವಿಭಾಗೀಯ ಕಛೇರಿಯಲ್ಲಿ 70ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ನಮ್ಮ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಮತ್ತಷ್ಟು ಶ್ರೀಮಂತಗೊಳಿಸುವ ಅವಶ್ಯಕತೆ ಇದೆ. ಇದಕ್ಕೆ ನಾವೆಲ್ಲರೂ ಕೈಜೋಡಿಸೋಣ ಎಂದರು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಭಾಗವಹಿಸಿದ ಹಿರಿಯ ರಾಜಕೀಯ ಮುತ್ಸದ್ದಿಗಳು, ಸಾಹಿತಿಗಳು, ಹಿರಿಯ ನಾಗರಿಕರ ತ್ಯಾಗ, ಬಲಿದಾನ ಅವಿಸ್ಮರಣೀಯ ಕೊಂಡಾಡಿದರು. ಈ ಸಂದರ್ಭದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಸಂಜೀವಕುಮಾರ, ಲೆಕ್ಕಾಧಿಕಾರಿ ಬಸವರಾಜ ಸೇರಿದಂತೆ ಜೇಸ್ಕಂ ಸಿಬ್ಬಂದಿಗಳು ಇದ್ದರು.

## ಜಾನಸನ್ ಘೋಡೆ:ಬಿಹಾರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಅಬ್ಬರದ ಪ್ರಚಾರ

ಮಲ್ಲಮ್ಮ ನುಡಿ ವಾರ್ತೆ

ಬೀದರ್. ನ. 04 :– ಬೀದ???ನ ಕಾಂಗ್ರೆಸ್ ಮುಖಂಡರು ಬಿಹಾರದ ಮುಜಾಫ???ಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿಜಯೇಂದ್ರ ಚೌಧರಿ ಪರ ಸೋಮವಾರ ವಿವಿಧೆಡೆ ಪ್ರಚಾರ ನಡೆಸಿ ಗಮನ ಸೆಳೆದರು.

ಜಿಲ್ಲೆಯವರೇ ಆದ ಕಾಂಗ್ರೆಸ್ ಕಿಸಾನ್ ವಿಭಾಗದ ರಾಷ್ಟ್ರೀಯ ಜಂಟಿ ಸಂಯೋಜಕ ಜಾನಸನ್ ಘೋಡೆ, ಮುಖಂಡರಾದ ರಾಜರತನ್ ಸಿಂಧೆ, ರತ್ನದೀಪ್ ಕಸ್ತೂರೆ, ಸ್ಥಳೀಯರು ಆದ ಅಕ್ರಂ ಪಾಶಾ, ಶೇಕ್ ಮುಜಮ್ಮಿಲ್ ಮತ್ತಿತರರು ಕ್ಷೇತ್ರದ ಲಕ್ಷ್ಮಿನಗರ, ಬ್ರಹ್ಮಪುರ, ಮೋತಿ???ಮೈದಾನ, ತಿಲಕನಗರದಲ್ಲಿ



ಮನೆಗೆ ಮನೆಗೆ ಭೇಟಿ ನೀಡಿ ಕಾಂಗ್ರೆಸ್ ಪರ ಮತ ಯಾಚಿಸಿದರು.

ಮುಜಾಫಪುರ ವಿಧಾನಸಭಾ ಕ್ಷೇತ್ರಕ್ಕೆ ನ. 6 ರಂದು ಚುನಾವಣೆ ನಡೆಯಲಿದೆ.

## ಹುಚ್ಚು ನಾಯಿ ಕಚ್ಚಿ15 ಕ್ಕೂ ಹೆಚ್ಚು ಜನರಿಗೆ ಗಾಯ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.3–ಜಿಲ್ಲೆಯ ಇಳಕಲ್ಲ ನಗರದಲ್ಲಿ ಹುಚ್ಚು ನಾಯಿ ಕಚ್ಚಿ ಮಕ್ಕಳು ಸೇರಿ 15 ಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಘಟನೆ ನಡೆದಿದೆ.

ಮಕ್ಕಳ ಮುಖ, ಕೆನ್ನೆಗೆ ನಾಯಿ ಕಚ್ಚಿದ್ದರಿಂದಾಗಿ ತೀವ್ರವಾಗಿ ಗಾಯಗೊಂಡಿದ್ದು ಅವರನ್ನು ಚಿಕಿತ್ಸೆಗೆ ಆಸ್ಪತ್ರೆಗೆ ಸೇರಿಸಲಾಗಿದೆ. ನಗರದ ಗೌಳೇರಗುಡಿ, ಶರಣಬಸವೇಶ್ವರ ದೇವಸ್ಥಾನ ಹಾಗೂ ಜ್ಯೂನಿಯರ್ ಕಾಲೇಜ ಏರಿಯಾದಲ್ಲಿ ಹುಚ್ಚುನಾಯಿಯ ದಾಳಿಯಿಂದಾಗಿ ಮಹಿಳೆಯರು ಸೇರಿ ಹಲವರು ಗಾಯಗೊಂಡಿದ್ದಾರೆ. ಇಳಕಲ್ಲ ನಗರದಲ್ಲಿ ಇಂತಹ ಘಟನೆ ಈ ಹಿಂದೆಯೂ ನಡೆದು ಅನೇಕ ಜನರಿಗೆ ಹುಚ್ಚು ನಾಯಿ ಕಡಿದು ಚಿಕಿತ್ಸೆ ಪಡೆದಿದ್ದು, ಈಗ ನಡೆದಿರುವ ಘಟನೆಯಲ್ಲಿ ಮಕ್ಕಳು, ಮಹಿಳೆಯರು ಸೇರಿ ಯಾರ ಪ್ರಾಣಕ್ಕೂ ಅಪಾಯವಿಲ್ಲವಾದರೂ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ.

## ಮಹಾಳಪ್ಪಯ್ಯ ಜಾತ್ರೆ ಯಾವುದೇ ಅಹಿತಕರ ಘಟನೆ ನೆಡೆಯಂತೆ ಆಚರಿಸಿ:ಸಿ.ಪಿ.ಐ ಅಲ್ಲಾಪುರೆ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ತಾಲೂಕಿನ ಡೋಣಗಾಂವ (ಎಮ್) ಹತ್ತಿರದ ಮಾಳಪ್ಪಯ್ಯ ದೇವಸ್ಥಾನದಲ್ಲಿ ನಡೆಯುವ ಜಾತ್ರಾ ಮಹೋತ್ಸವ ಸುತ್ತಮುತ್ತಲಿನ ವಿವಿಧ ಹಳ್ಳಿಯ ಮತ್ತು ಗಡಿ ರಾಜ್ಯದ ಭಕ್ತರು ಸೇರುವ ಐತಿಹಾಸಿಕ ಸಂಭ್ರಮವಾಗಿದ್ದು, ಭಕ್ತರು ಯಾವುದೇ ಅಹಿತಕರ ಘಟನೆ ನಡೆದಂತೆ ಜಾತ್ರೆ ಯಶಸ್ವಿಗೊಳಿಸಬೇಕು ಎಂದು ಸಿ.ಪಿ.ಐ. ಶ್ರೀಕಾಂತ ಅಲ್ಲಾಪುರೆ ಹೇಳಿದರು.

ಮಾಳಪ್ಪಯ್ಯ ದೇವಾಲಯದಲ್ಲಿ ಕಮಲನಗರ ಪೊಲೀಸ್ ಠಾಣೆ ವತಿಯಿಂದ ಸೋಮವಾರ ಆಯೋಜಿಸಿದ ಶಾಂತಿ ಸಭೆಯಲ್ಲಿ ಅವರು ಮಾತನಾಡಿದರು.

ಮಾಳಪ್ಪಯ್ಯ ದೇವಸ್ಥಾನಕ್ಕೆ ಬರುವ ಭಕ್ತರು, ತಮ್ಮ ವಾಹನಗಳನ್ನು ಪಾರ್ಕಿಂಗೆ ನಿಗದಿ ಮಾಡಿದ ಸ್ಥಳದಲ್ಲಿ ನಿಲ್ಲಿಸಿ, ಕಾನೂನು ಸುವೆವಸ್ಥೆ ಕಾಪಾಡಬೇಕು ಎಂದು ಹೇಳಿದರು.

ಪಿ.ಎಸ್.ಐ ಆಶಾ ರಾಠೋಡ ಮಾತನಾಡಿ, ಧಾರ್ಮಿಕ ಕಾರ್ಯಕ್ರಮದಲ್ಲಿ ಎಲ್ಲರೂ ಕಾನೂನು ಪಾಲನೆ ಮಾಡಬೇಕು, ಜನರಿಗೆ ತೊಂದರೆ ಉಂಟು ಮಾಡುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳಲಾಗುವುದು ಎಂದು ತಿಳಿಸಿದರು.

## ಜೀವನ ಮೌಲ್ಯದ ನಾಟಕಕಾರ ರಾಜೇಂದ್ರ ಝುಳಕಿ: ಡಾ. ಬಿರಾದಾರ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಮಕ್ಕಳ ಮನಸ್ಸನ್ನು ಅರಿತವರು ಶಿಕ್ಷಕರು ಅದರ ಹಾಗೆ ಸಾಹಿತ್ಯ ರಚಿಸಿದವರು ಅವರೇ ಹೀಗಾಗಿ ತಮ್ಮ ಸಾಹಿತ್ಯದ ಜೂವನ ಮೌಲ್ಯಗಳನ್ನು ಬಿತ್ತಿದ ನಾಟಕಕಾರ ರಾಜೇಂದ್ರ ಝುಳಕಿ ಎಂದು ಯುವ ಲೇಖಕಿ ಡಾ.ಶೀಲಾದೇವಿ ಬಿರಾದಾರ ಅಭಿಮತ ಪಟ್ಟರು.

ಮಾತಾಮಾಣಿಕೇಶ್ವರಿ ಕಾಲೋನಿತ ಕೋಕಿಲೇಶ್ವರಿ ದೇವಸ್ಥಾನದ ಆವರಣದಲ್ಲಿ ಸಿರಿಗನ್ನಡ ವೇದಿಕೆ ಮತ್ತು ಸಾಕ್ಷಿ ಪ್ರತಿಷ್ಠಾನ ಏರ್ಪಡಿಸಿದ ಸಾಹಿತ್ಯ ಸಮಾಗಮ–5 ಉಪನ್ಯಾಸ ಮಾಲಿಕೆಯಲ್ಲಿ ಶಿಕ್ಷಕ– ಸಾಹಿತಿ ರಾಜೇಂದ್ರ ಝುಳಕಿ ನಾಟಕ ಕುರಿತು ಮಾತನಾಡಿ ನಾಲ್ಕು ದೃಶ್ಯಗಳನ್ನು ಹೊಂದಿದ ಪರಿಣಾಮಕಾರಿ ನಾಡಕ ಎಂದರು.

ಕಲ್ಲರಳಿನ ಕರುಳು ಕಾವ್ಯ ಮತ್ತು ನೀಲಕಂಠ ಕೃತಿಯಲ್ಲಿ ಸಾಮಾಜಿಕ ಕಳಕಳಿಯ, ಜೀವನಾನುಭವ ಸಾಮರಸ್ಯ ವನ್ನು ಕಾವ್ಯದಲ್ಲಿ ಅರಳಿಸಿದರೆ,

ನೀಲಕಂಠ ಜಮಾದಾರ ಅವರ ಬದುಕು, ಸಮಾಜದ ಕೊಡುಗೆ ಅಭಿನಂದನ ಗ್ರಂಥದಲ್ಲಿ ಅಡಕವಾಗಿ ಎಂದು ಆಳಂದ ಎ.ವಿ ಪಾಟೀಲ ಕಾಲೇಜಿನ ಕನ್ನಡ ಅಧ್ಯಾಪಕಿ ಡಾ.ಸುಖ ದೇವಿ ಗಂಟೆ ನುಡಿದರು. ಚಿಗುರು ಚೇತನ ಮಕ್ಕಳ ಕಾವ್ಯ ಸಂಗ್ರಹದಲ್ಲಿ ಅತ್ಯುತ್ತಮ ಕವನ ಮಕ್ಕಳ

ಮೇಲೆ ಪ್ರಭಾವ ಬೀರುವವೆಂದು ಸೇಡಂ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಅಧ್ಯಾಪಕ ಡಾ.ಸಿದ್ಧಪ್ಪ ಹೊಸಮನಿ ಅಭಿಪ್ರಾಯ ಮಂಡಿಸಿದರು.

ಅಧ್ಯಕ್ಷತೆ ವಹಿಸಿದ ಸಾಹಿತಿ,ಸಿರಿಗನ್ನಡ ವೇದಿಕೆ ಸಾಕ್ಷಿ ಪ್ರತಿಷ್ಠಾನ ಅಧ್ಯಕ್ಷ ಡಾ.ಗವಿಸಿದ್ಧಪ್ಪ ಪಾಟೀಲ ಮಾತನಾಡಿ ಒಬ್ಬ ಲೇಖಕ ಆತ ಒಂದು ಸಮುದಾಯದ ಲೇಖಕ ಆಗಲಾರ ಆತನ ವಿಚಾರಗಳು ಮನುಕುಲ ಉದ್ಧಾರದ ವಿಚಾರ ಗಳಾಗಬೇಕು. ಝುಳಕಿ ಒಬ್ಬ ಶಿಕ್ಷಕ,ವಿದ್ಯಾರ್ಥಿ ಭವಿಷ್ಯ ನಿರ್ಮಿಸಿ, ಸಮುದಾಯದ ಹಿತ ಕಾಯ್ದು, ಲೇಖಕರಾಗಿ ಕವಿ,ವಚನಕಾರ,ನಾಟಕಕಾರರಾಗಿ ಸಾಹಿತ್ಯಸೇವೆ ಅನನ್ಯವೆಂದರು.ಬಡತನ ನೋವು,ಅವರ ಬರಹದ ಶಕ್ತಿಯಾಗಿವೆ ಎಂದರು.

ಸಾಹಿತಿ ರಾಜೇಂದ್ರ ಝುಳಕಿ ಮಾತನಾಡಿ ನನ್ನ ಜೀವನ ಸಂಘರ್ಷ ಬರಹವಣಿಗೆಗೆ ದಾರಿ, ನನಗೆ ಕೈ ಹಿಡಿದ ಹಲವರನ್ನು ಸ್ಮರಿಸಿದರು.

ನಿವೃತ್ತ ಪ್ರಾಧ್ಯಾಪಕ ಡಾ.ಭಗವಂತಪ್ಪ ಬುಳ್ಳಾ,ಗುಲಬರ್ಗಾ ವಿಶ್ವವಿದ್ಯಾಲಯ ಸಿಂಡಿಕೇಟ್

ಸದಸ್ಯ ಮಲ್ಲಣ್ಣ ಮಡಿವಾಳರ ಹಿರಿಯ ಸಾಹಿತಿ ಎ.ಕೆ.ರಾಮೇಶ್ವರ, ಕೋಲಿ ಸಮಾಜದ ನೌಕರ ಸಂಘದ ಅಧ್ಯಕ್ಷ ನೀಲಕಂಠ ಜಮಾದಾರ, ಉಪಸ್ಥಿತಿ ಇದ್ದರು. ಡಾ.ಚಿದಾನಂದ ಕುಡ್ಡನ್ ಸ್ವಾಗತಿಸಿದರು,ಡಾ.ರಾಜಕುಮಾರ ಮಾಳಗೆ ನಿರೂಪಿಸಿದರು ಡಾ.ರಾಜಕುಮಾರ ಧುಮ್ಮನಸೂರು ವಂದಿಸಿದರು. ಬಿ.ಜಿ.ಶೆಟಗಾರ,ವಿಶ್ವನಾಥ ಭಕರೆ,ಢಾಕಪ್ಪ, ಮೊದಲಾದವರಿದ್ದರು.

## ಬೀರಲಿಂಗೇಶ್ವರ ಭವನಕ್ಕೆ 20 ಲಕ್ಷ ಅನುದಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ್ ದಕ್ಷಿಣ ಕ್ಷೇತ್ರದ ಗೋರನಳ್ಳಿ ಗ್ರಾಮದಲ್ಲಿ ಭಾನುವಾರ ಶ್ರೀ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ಶ್ರದ್ಧೆ, ಭಕ್ತಿಯಿಂದ ಅದ್ದೂರಿಯಾಗಿ ನಡೆಯಿತು. ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹಾಗೂ ಗ್ರಾಮದ ಮುಖಂಡರು ಹಾಗೂ ವಿಧೆಡೆಯಿಂದ ಆಗಮಿಸಿದ್ದ ಸಹಸ್ರಾರು ಜನರು ಪಾಲ್ಗೊಂಡಿದ್ದರು.

ಗ್ರಾಮದ ಹನುಮಾನ ಮಂದಿರದಿಂದ ಬೀರಲಿಂಗೇಶ್ವರ ಮಂದಿರದವರೆಗೆ ಭವ್ಯ ಮೆರವಣಿಗೆ ನಡೆಯಿತು. ಡೊಳ್ಳು ಕುಣಿತ ವಿಶೇಷ ಆಕರ್ಷಣೆಯಾಗಿತ್ತು. ಮಹಿಳೆಯರು ಕುಂಭ, ಕಲಷ ಹೊತ್ತು ಭಕ್ತಿಯ ಹೆಜ್ಜೆ ಹಾಕಿದರು. ಮಹಾತ್ಮ ಬೀರಲಿಂಗೇಶ್ವರ ಮಹಾರಾಜಕಿ ಜೈ ಉದ್ಘೋಷ ಮೊಳಗಿದವು. ಅನೇಕರು ಸಾಂಪ್ರದಾಯಿಕ ನೃತ್ಯ ಮಾಡಿ ಗಮನ ಸೆಳೆದರು. ಮಂದಿರದಲ್ಲಿ ಪೂಜೆ, ಅಭಿಷೇಕ ಸೇರಿ ಧಾರ್ಮಿಕ ಕಾರ್ಯಕ್ರಮ ನಡೆದವು. ಮರದಲ್ಲಿಟ್ಟ ಅಂಬಲಿ ಮಡಿಕೆ ಬಡಿಗೆಯಿಂದ ಒಡೆಯುವುದು ಜಾತ್ರೆ ವಿಶೇಷವಾಗಿತ್ತು.

ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಉತ್ಸವದಲ್ಲಿ ಭಾಗಿಯಾಗಿ, ದರ್ಶನ ಪಡೆದು ಮಾತನಾಡಿ, ಎಲ್ಲ ಸಮಾಜದವರು ಸೇರಿ ಇಲ್ಲಿ ವೈಭವದಿಂದ ಜಾತ್ರೋತ್ಸವ ಆಚರಿಸುವುದು ಮಾದರಿಯಾಗಿದೆ. ಧರ್ಮ ಸಮನ್ವಯಕ್ಕೆ ಈ ಜಾತ್ರೆ ಸಾಕ್ಷಿಯಾಗಿದೆ. ಸ್ಥಳೀಯರ ಅಪೇಕ್ಷೆಯಂತೆ ಮಂದಿರದ ಪಕ್ಕದಲ್ಲಿರುವ ಜಾಗದಲ್ಲಿ ವಿವಿಧ ಕಾರ್ಯಕ್ರಮ ನಡೆಸಲು ಅನುಕೂಲವಾಗಲು ಸಮುದಾಯ ಭವನಕ್ಕೆ 20 ಲಕ್ಷ ರೂ.ಅನುದಾನ ನೀಡುತ್ತಿದ್ದು, ಶೀಘ್ರ ಕೆಲಸ ಆರಂಭಿಸುವುದಾಗಿ ಘೋಷಿಸಿದರು.ಬಳಿಕ ಗ್ರಾಮಸ್ಥರು ಶಾಸಕರಿಗೆ ಕಂಬಳಿ ಹೊದ್ದಿಸಿ ಶುಭ ಹಾರೈಸಿದರು.

> ಬೀರಲಿಂಗೇಶ್ವರರು ಅಧ್ಯಾತ್ಮ, ಶೌರ್ಯ, ಶಕ್ತಿ, ಶಾಂತಿಯ ರೂಪವಾಗಿದ್ದಾರೆ. ಇವರ ಆರಾಧನೆ ಎಂದರೆ ಸಾಮಾಜಿಕ ಸಮಾನತೆ ಮತ್ತು ಸಹೋದರತ್ವದ ಸಂದೇಶವಾಗಿದೆ. ಮನುಷ್ಯನಲ್ಲೇ ಶಿವನನ್ನು ಕಾಣುವ ದೃಷ್ಟಿ ಇವರ ತತ್ವಾದರ್ಶ ನೀಡುತ್ತವೆ.
>
> **ಡಾ.ಶೈಲೇಂದ್ರ ಬೆಲ್ದಾಳೆ**
> **ಬೀದರ್ ದಕ್ಷಿಣ ಶಾಸಕರು.**

ಈ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡ ಅಮೃತರಾವ ಚಿಮಕೋಡೆ, ಪ್ರಮುಖರಾದ ಮಾರುತಿ ಗೈಬಣ್ಣ ಮೇತ್ರೆ, ನರಸಪ್ಪ ಪೂಜಾರಿ, ಮಲ್ಲಿಕಾರ್ಜುನ ಮೇತ್ರೆ, ಮಲ್ಲಪ್ಪ ಅರ್ಜಗೊಂಡ, ಸುಭಾಷ ಹೂಗಾರ್, ಬಸವರಾಜ ತೋರಣ, ಗಣಪತಿ ರೆಡ್ಡಿ, ಗಣಪತರಾವ್ ಪಾಟೀಲ್, ಶಂಕರ್ ಅರಗಲ್ ದೊಡ್ಡಿ, ಉದಯಕುಮಾರ ತೋರಣ, ಶಿವಕುಮಾರ ಹಜಾರೆ, ಗಜಾನಂದ ತೋರಣ, ಜಗನ್ನಾಥ ಮೈಲಾರ, ಪ್ರಕಾಶ್ ಖಂಡೋಬ, ಶಿವಕುಮಾರ ಸ್ವಾಮಿ, ಚಂದ್ರಯ್ಯ ಸ್ವಾಮಿ, ಯಾದವರಾವ್ ಅರ್ಜಗೊಂಡ, ಶಿವಕುಮಾರ ಅರಗಲ್‌ದೊಡ್ಡಿ, ಸಾಯಿನಾಥ ಮೇತ್ರೆ, ಗಣೇಶ್ ಅರ್ಜಗೊಂಡ, ಗಣಪತಿ ಅರ್ಜಗೊಂಡ ಇತರರಿದ್ದರು. ಸೋಮವಾರ ಜಾತ್ರೆಗೆ ತೆರೆ ಬೀಳಲಿದೆ.

## ನಾಡು ನುಡಿ ರಕ್ಷಣೆ ಎಲ್ಲರ ಕರ್ತವ್ಯ: ಪ್ರೊ.ಕಳ್ಳಿಮನಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.3–ಕನ್ನಡಕ್ಕಾಗಿ ಸಮಸ್ಯೆಗಳು ಬಂದಾಗ ಕನ್ನಡ ಪ್ರಾಧ್ಯಾಪಕರು ಮತ್ತು ಕನ್ನಡ ಸಂಘಟನೆಗಳಷ್ಟೇ ಹೋರಾಡುವುದಲ್ಲ. ಎಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕು. ಅದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಸರಕಾರಿ ಪದವಿ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಪ್ರೊ.ಸುರೇಶ ಕಳ್ಳಿಮನಿ ಹೇಳಿದರು. ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ–ಯಾಗಿ ಮಾತನಾಡಿದ ಅವರು, ಭಾಷಾವಾರು ಪ್ರಾಂತಗಳ ರಚನೆ, ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಮಹನೀಯರ ಸ್ಮರಣೆ ಅಗತ್ಯವಾಗಿದ್ದು ಕನ್ನಡ ನಾಡು ನುಡಿಯ ರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯೆ ಎಸ್.ಆರ್.ಸಬರದ ಮಾತನಾಡಿ, ಕನ್ನಡದ ಕೆಲಸಕ್ಕಾಗಿ ಎಲ್ಲರೂ ಕೈ ಜೋಡಿಸಬೇಕೆಂದರು. ವೇದಿಕೆಯಲ್ಲಿ ಐಕ್ಯೂಎಸಿ ಸಂಯೋಜಕ ಡಾ.ಡಿ.ಎಸ್.ಲಮಾಣಿ,ಪ್ರಾಚಾರ್ಯ ಡಾ.ಎನ್.ಎಚ್.ಬೇವಿನಹಳ್ಳಿ,ವಿದ್ಯಾರ್ಥಿ ಕಲ್ಯಾಣಾಧಿಕಾರಿ ಪ್ರೊ.ಶ್ರೀಮತಿ ಎಸ್. ಆರ್.ದೇಶಪಾಂಡೆ ಉಪಸ್ಥಿತರಿದ್ದರು.

ಶಿವಾನಂದ ಮಡಿವಾಳ ಪ್ರಾರ್ಥಿಸಿದರು. ಡಾ.ಎ.ಎಮ್.ಸತ್ಯನಾಯಕ ಸ್ವಾಗತಿಸಿ, ಪರಿಚಯಿಸಿದರು. ಪ್ರೊ.ವಿ.ಎಸ್. ಚಿಗರಿ ವಂದಿಸಿದರು. ಪ್ರೊ.ಪಲ್ಲವಿ ನಿರೂಪಿಸಿದರು.

## ಅನ್ಯ ಭಾಷಿಕರಿಗೆ ಕನ್ನಡದ ಅರಿವು ಮೂಡಿಸಿ: ಸಂಸದ ಸಾಗರ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ, ಕನ್ನಡ ಭಾಷೆ ನಮ್ಮೆಲ್ಲರ ಮಾತೃಭಾಷೆ. ಕರ್ನಾಟಕದಲ್ಲಿರುವ ಎಲ್ಲರಿಗೂ ಕನ್ನಡ ಬರಲೇಬೇಕು. ಅನ್ಯ ರಾಜ್ಯದ ಜನರಿಗೆ ಅನ್ಯ ಭಾಷಿಕರಿಗೆ ನಾವು ಕನ್ನಡದ ಅರಿವು ಮೂಡಿಸುವ ಕೆಲಸ ಆಗಬೇಕಿದೆ ಎಂದು ಸಂಸದ ಸಾಗರ ಖಂಡ್ರೆ ಹೇಳಿದರು.ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಭಾನುವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಮತ್ತು ಧಾತ್ರಿ ರಂಗಸಂಸ್ಥೆ ಸಿರಿಗೆರೆ ಕಲಾವಿದರಿಂದ ಸಂಸಾರದಲ್ಲಿ ಸನಿದಪ ನಾಟಕ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಕರ್ನಾಟಕ ಏಕೀಕರಣಕ್ಕಾಗಿ ಡಾ.ಚನ್ನಬಸವ ಪಟ್ಟದ್ದೇವರು ಹಾಗೂ ಲೋಕನಾಯಕ ಶತಾಯಿಷಿ ಡಾ.ಭೀಮಣ್ಣ ಖಂಡ್ರೆ ಮತ್ತು ಅನೇಕ ಕನ್ನಡಾಭಿಮಾನಿಗಳು ಹೋರಾಟ ಮಾಡಿದರು. ಹಿರೇಮಠ ಸಂಸ್ಥಾನ ಕನ್ನಡದ ಮಠ, ಕನ್ನಡದ ಪಟ್ಟದ್ದೇವರು ಎಂದೇ ಖ್ಯಾತಿಯಾಗಿದೆ. ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಚನ್ನಬಸವೇಶ್ವರ ಗುರುಕುಲದ ಮೂಲಕ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ನೀಡಿ ವಿದ್ಯಾರ್ಥಿಗಳ ಭವಿಷ್ಯ ರೂಪಿಸುತ್ತಿದ್ದಾರೆ ಎಂದು ನುಡಿದರು.

ಸಾನ್ನಿಧ್ಯ ವಹಿಸಿದ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಕನ್ನಡ ಭಾಷೆ ಅತ್ಯಂತ ಪ್ರಾಚೀನ ಭಾಷೆಯಾಗಿದೆ. ಕನ್ನಡದಲ್ಲಿ ಶ್ರೇಷ್ಠವಾದಂತಹ ಸಾಹಿತ್ಯ ಪರಂಪರೆ ಇದೆ. ಅದರಲ್ಲಿ 12ನೇ ಶತಮಾನದ ಶರಣರ ವಚನ ಸಾಹಿತ್ಯ ವಿಶೇಷವಾದದ್ದು. ಶರಣ–ರು ದೇವರಿಗೆ ಕನ್ನಡ ಕಲಿಸಿದ ಕನ್ನಡಾಭಿಮಾನಿಗಳು. ಕನ್ನಡದಲ್ಲಿ ಹುಟ್ಟಿದ ವಚನ ಸಾಹಿತ್ಯ ಇವತ್ತು ಜಗತ್ತಿಗೆ ದಾರಿದೀಪವಾಗಿದೆ ಎಂದರು.ನೇತೃತ್ವ ವಹಿಸಿದ್ದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ದೇಶದ ಅನೇಕ ಭಾಷೆಗಳಲ್ಲಿ ವಚನಗಳ ಅನುವಾದ ನಡೆಯುತ್ತಿದೆ. ಕನ್ನಡ ನಮ್ಮ ಅಸ್ಮಿತೆಯ ಹಾಗೂ ಅಸ್ತಿತ್ವದ ಪ್ರತೀಕವಾಗಿದೆ. ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗರದಾಗಿದೆ. ನಾವು ಬೇರೆ ಭಾಷೆಯನ್ನು ಗೌರವಿಸಬೇಕು ಎಂದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಾಗಭೂಷಣ ಮಾಮಡಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಮಲ್ಲಮ್ಮ ಆರ್. ಪಾಟೀಲ್ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರಾದ ಜೈರಾಜ ಕೊಳ್ಳಾ, ಕೆ.ಡಿ.ಗಣೇಶ,ಸಂತೋಷ ಬಿ.ಜಿ.ಪಾಟೀಲ, ಸಂಗಮೇಶ ಗುಮ್ಮೆ,ಗಣೇಶ ಪಾಟೀಲ, ಸಂಜುಕುಮಾರ ನಾವದಗಿ, ಗೊರಕ ಶ್ರೀಮಾಳೆ, ಚಂದು ಸಂಪಗೆ, ಸುನೀತಾ ಮಮ್ಮಾ, ಸಿದ್ರಾಮಯ್ಯ ಸ್ವಾಮಿ, ಬಸವರಾಜ ಕಾರಬಾರಿ, ರಾಹುಲ ಸಿಂಧೆ, ವಿನಾಯಕ ಕಾಶಪ್ಪ ಬಿರಾದಾರ ಮುಂತಾದ ಕನ್ನಡಪರ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು. ಗುರುಪ್ರಸಾದ ಶಾಲೆಯ ಐಶ್ವರ್ಯ ಮತ್ತು ಚೈತನ್ಯ ವಿದ್ಯಾರ್ಥಿಗಳಿಂದ ನಾಡಗೀತೆ ನಡೆಯಿತು. ದೀಪಕ ಠಮಕೆ ನಿರೂಪಿಸಿದರು. ರಾಜು ಜುಬರೆ ವಂದಿಸಿದರು. ಕೊನೆಯಲ್ಲಿ ಧಾತ್ರಿ ರಂಗ ಕಲಾವಿದರಿಂದ ಸಂಸಾರದಲ್ಲಿ ಸನಿದಪ ಹಾಸ್ಯ ನಾಟಕ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

> ನಮಗೆ ಕನ್ನಡದ ಬಗ್ಗೆ ಅಭಿಮಾನ ಇರಬೇಕು. ಎಲ್ಲರೂ ಮನೆಯಲ್ಲಿ ಕಡ್ಡಾಯವಾಗಿ ಕನ್ನಡ ಮಾತನಾಡಬೇಕು. ಭಾಷೆಯ ಬಳಕೆಯಿಂದಲೇ ಅದು ಜೀವಂತವಾಗಿ ಉಳಿಯುತ್ತದೆ ಎಂಬುದು ಕನ್ನಡಿಗರು ಮರೆಯಬಾರದು.
>
> **ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

## ಚಾಂಗಲೇರ ವೀರಭದ್ರೇಶ್ವರ ದೇವಸ್ಥಾನದಲ್ಲಿ ನೂತನ ಸ್ನಾನ ಕುಂಡಕ್ಕೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ್ ದಕ್ಷಿಣ ಕ್ಷೇತ್ರದ ಸುಪ್ರಸಿದ್ಧ ಚಾಂಗಲೇರ ವೀರಭದ್ರೇಶ್ವರ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಿರುವ ಪವಿತ್ರ ಸ್ನಾನ ಕುಂಡಕ್ಕೆ ವಿಶೇಷ ಪೂಜೆ ಸಲ್ಲಿಸಿ ಪುಸ್ಪ ನಮನ ಸಲ್ಲಿಸಿ ಚಿಟಗುಪ್ಪ ಅಯ್ಯಪ್ಪಸ್ವಾಮಿ ಹಿರೇಮಠದ ಗುರುಲಿಂಗ ಶಿವಾಚಾರ್ಯರು, ಮರುಳಾರಾಧ್ಯ ಶಿವಾಚಾರ್ಯರ ನೇತೃತ್ವದಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಚಾಲನೆ ನೀಡಿದರು.



ಚಾಂಗಲೇರಾದಲ್ಲಿ ಬೇಡಿ ಬರುವ ಭಕ್ತಾದಿಗಳ ಕಷ್ಟಗಳನ್ನು ಪರಿಹರಿಸಿ ಇಷ್ಟಾರ್ಥಗಳನ್ನು ನೀಡಿ ಹರಸುವ ಜಾಗೃತ ಪೀಠವಾಗಿದೆ. ಕೋಟ್ಯಂತರ ಭಕ್ತರ ಆರಾಧ್ಯ ದೈವವಾಗಿರುವ ವೀರಭದ್ರೇಶ್ವರ ಜಾತ್ರಾ ಮಹೋತ್ಸವಕ್ಕೆ ಬರುವ ಭಕ್ತಾದಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ನಾವೆಲ್ಲರೂ ಹಗಲಿರುಳು ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯ ವೀರಭದ್ರೇಶ್ವರರ ಭಕ್ತರಾದ ಉಧ್ಯಮಿ ವೀರಶೆಟ್ಟಿ ಪಾಟೀಲ್ ಅವರು ಪವಿತ್ರ ಸ್ನಾನ ಕುಂಡ ಬಹಳ ಉತ್ತಮವಾಗಿ ಸುಸಜ್ಜಿತವಾಗಿ ನಿರ್ಮಾಣ ಮಾಡಿಸಿದ್ದಾರೆ ದೇವಸ್ಥಾನಕ್ಕೆ ಬರುವ ಭಕ್ತರು ಸಹ ಸ್ನಾನ ಕುಂಡದಲ್ಲಿ ಸ್ವಚ್ಛತೆ ಕಾಪಾಡುವ ಮೂಲಕ ಪವಿತ್ರ ಸ್ನಾನ ಕುಂಡ ಬಳಸಿ ದೇವರ ದರ್ಶನ ಪಡೆಯಬೇಕು.

ಚಾಂಗಲೇರಾ ವೀರಭದ್ರೇಶ್ವರ ಜಾತ್ರೆ ನವೆಂಬರ್ 3 ರಿಂದ ಪ್ರಾರಂಭವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದ್ದು. ಈ ಜಾತ್ರೆಯಲ್ಲಿ ನವೆಂಬರ್ 5 ರಂದು ಬೆಳಿಗ್ಗೆ ಅಗ್ನಿ ತುಳಿಯುವ ಕಾರ್ಯಕ್ರಮ, ಸಂಜೆ ಅದ್ದೂರಿ ರಥೋತ್ಸವ ನಡೆಯಲಿದೆ. ವೀರಗಾಸಿ, ಡೊಳ್ಳು ಕುಣಿತ, ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೆರವಣಿಗೆಯ ಭಾಗವಾಗಿದ್ದು, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಸಾವಿರಾರು ಭಕ್ತರು ಭಾಗವಹಿಸುತ್ತಾರೆ.

ಜಾತ್ರೆಯ ಪ್ರಮುಖ ಕಾರ್ಯಕ್ರಮಗಳು ನ. 3 ರಂದು ಜಾತ್ರಾ ಮಹೋತ್ಸವ ಪ್ರಾರಂಭ,ಧಾರ್ಮಿಕ ವಿಧಿವಿಧಾನಗಳೊಂದಿಗೆ ಪೂಜೆ, ದೇವಾಲಯದ ಪಲ್ಲಕ್ಕಿ ಉತ್ಸವ ನಡೆಯಲಿದೆ. ನ. 5 ಬೆಳಗ್ಗೆ ವೀರಭದ್ರೇಶ್ವರ ದೇವರ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ಮತ್ತು ರಥೋತ್ಸವ. ರಾತ್ರಿ ರಥೋತ್ಸವದ ನಂತರ ಗೀಗೀ ಪದದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ನ. 6 ಜಂಗೀ ಕುಸ್ತಿ ಮತ್ತು ಇತರ ಸ್ಪರ್ಧೆಗಳು ನಡೆಯಲಿವೆ ಕಳೆದ ಬಾರಿ ಜೋಕಾಲಿಯಲ್ಲಿ ಅವಘಡ ಸಂಭವಿಸಿದೆ ಈ ನಿಮಿತ್ತ ಪಾಲಕರು ಮಕ್ಕಳಿಗೆ ಒಂಟಿಯಾಗಿ ಆಟವಾಡಲು ಬಿಡಬೇಡಿ ತೀವ್ರನಿಗಾ ವಹಿಸಬೇಕು ಎಂದು ಸಲಹೆ ನೀಡಿದರು.

ಜಾತ್ರೆಯಲ್ಲಿ ಮಹಾರಾಷ್ಟ್ರ,ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಭಕ್ತರು ಭಾಗವಹಿಸುತ್ತಾರೆ ದೇವಸ್ಥಾನದಲ್ಲಿ ಯಾವುದೇ ಕಾರಣಕ್ಕೂ ಮೂಲ ಸೌಕರ್ಯ ಕೊರತೆ ಕಂಡುಬರಬಾರದು ಎಂದು ದೇವಸ್ಥಾನದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ದೇವಸ್ಥಾನದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ಸವ ಮೆರವಣಿಗೆ ಭಜನೆ, ನಂದಿ ಕುಣಿತ, ಡೊಳ್ಳು ಕುಣಿತ, ವೀರಗಾಸಿ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ ಇದಕ್ಕೆ ಉತ್ತಮ ರೀತಿಯಲ್ಲಿ ವೇದಿಕೆ, ವ್ಯವಸ್ಥೆ ಕಲ್ಪಿಸಬೇಕು.

ಬಿಗಿ ಪೊಲೀಸ್ ಬಂದೋಬಸ್ತ್ ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ವ್ಯವಸ್ಥೆ ಮಾಡಬೇಕು ಎಂದು ಪೋಲಿಸ್ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ರಾಮಯ್ಯಾ ಶಾಸ್ತ್ರಿ,ಆಡಳಿತಾಧಿಕಾರಿ ಅನಂತರಾವ ಕುಲಕರ್ಣಿ,ಕಾರ್ಯದರ್ಶಿ ಸಂಜುಕುಮಾರ, ವಿಜಯಕುಮಾರ ವಾಲಿ, ರಾಮಲು ಮಂತ್ರಿ, ಚಂದ್ರಯ್ಯಾ ಸ್ವಾಮಿ, ಜಗನ್ನಾಥ ಮಜಗೆ, ವೀರಶೆಟ್ಟಿ ಪಾಟೀಲ, ಪರಮೇಶ್ವರಯ್ಯಾ ಸ್ವಾಮಿ, ನರೇಶ ತೊಂಟಿ, ಫಾಳೇಪ್ಪಾ ಪೂಜಾರಿ, ವೀವೇಕ ಮಠಪತಿ, ಕಾಶಿನಾಥ ಜಕ್ಕಾ, ಶ್ರೀನಿವಾಸ ರೆಡ್ಡಿ, ಲಾಲಪ್ಪಾ ಪೋಲಕಪಳ್ಳಿ, ಕರಿಬಸವ ಸ್ವಾಮಿ, ಸುರೇಶ ಪೋಲಕಪಳ್ಳಿ, ಲಕ್ಷ್ಮಣ ದರ್ಜಿ ಮತ್ತಿತರರು ಉಪಸ್ಥಿತರಿದ್ದರು.

## ಮಕ್ಕಳಿಗೆ ಕೇವಲ ಪಾಠದಿಂದ ಬದುಕು ರೂಪಗೊಳ್ಳದು : ಗೊಂಡಬಾಳ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಮಕ್ಕಳು ತಮ್ಮ ಶಾಲಾ ಕಾಲೇಜು ಶಿಕ್ಷಣದೊಂದಿಗೆ ಇತರೆ ಪಠ್ಯೇತರ ಚಟುವಟಿಕೆಗಳು ಮತ್ತು ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಮತ್ರ ಚೈತನ್ಯಯುತ ಬದುಕು ರೂಪಗೊಳ್ಳುತ್ತದೆ ಎಂದು ಬಾಲಕರ ಸರಕಾರಿ ಪದವಿಪೂರ್ವ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಂಜುನಾಥ ಜಿ. ಗೊಂಡಬಾಳ ಅನಿಸಿಕೆ ವ್ಯಕ್ತಪಡಿಸಿದರು.

ಅವರು ನಗರದ ಬಾಲಕರ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ತಾಲೂಕ ಮಟ್ಟದ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳ ಸಾಂಸ್ಕೃತಿಕ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು.

ಜಿಲ್ಲೆಯಲ್ಲಿ ಈಚೆಗೆ ಸ್ವಲ್ಪಮಟ್ಟಿನ ಕ್ರೀಡಾ ಉತ್ಸಾಹ ಬರುತ್ತಿದೆ, ಮಕ್ಕಳು ಕಾಲೇಜು ಹಂತದಲ್ಲಿ ಕ್ರೀಡೆಗೆ ಆದ್ಯತೆ ನೀಡಲು ಸಾಧ್ಯವಾಗುತ್ತಿಲ್ಲ, ಇಲಾಖೆ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಿಸಬೇಕು, ಅದಕ್ಕೆ ಪೂರಕ ವಾತಾವರಣ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಮಕ್ಕಳು ಇಂದು ಮೊಬೈಲ್ ಗೀಳಿಗೆ ಬಿದ್ದಿದ್ದು, ಮೊಬೈಲ್‌ನಲ್ಲಿಯೇ ಕ್ರೀಡೆಯಲ್ಲಿ ತೊಡಗಿ ಲಕ್ಷಾಂತರ ರುಪಾಯಿ ಹಾನಿ ಮಾಡಿಕೊಳ್ಳುತ್ತಿದ್ದಾರೆ. ಜೊತೆಗೆ ದೈಹಿಕವಾಗಿ ದುರ್ಬಲಗೊಳ್ಳುತ್ತಿದ್ದಾರೆ. ಕೇವಲ ಶಿಷ್ಟಾಚಾರಕ್ಕೆ ಕ್ರೀಡಾಕೂಟ, ಪಠ್ಯೇತರ ಚಟುವಟಿಕೆ ಎನ್ನುವಂತಾಗಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಹೆಚ್. ಎಸ್.ದೇವರಮನಿ ಅಧ್ಯಕ್ಷತೆ ವಹಿಸಿದ್ದರು, ಕಾರ್ಯಕ್ರಮದಲ್ಲಿ ಉಪನ್ಯಾಸಕರುಗಳಾದ ವೀರಶೇಖರ ಪತ್ತಾರ, ಗವಿಸಿದ್ಧಪ್ಪ ದೊಡ್ಡಮನಿ, ಪತ್ರೆಪ್ಪ ಛತ್ತರಕಿ, ವೆಳ್ಳಿಮಾ, ಸುದಿಂದ್ರರಾವ್ ಕುಲಕರ್ಣಿ, ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್, ಎಸ್. ಎ. ರಜಪೂತ, ಕೃಷ್ಣರಾವ್ ದೇಸಾಯಿ, ಬಸವನಗೌಡ ಗೌಡ್ರ, ಜ್ಯೋತಿ ಹಿರೇಮಠ, ಸೈಯದ್ ಸಾದತ್ ಅಲಿ ಇದ್ದರು. ತಾಲೂಕಿನ 30 ಕಾಲೇಜುಗಳ ವಿದ್ಯಾರ್ಥಿಗಳು 11 ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

## ಸಪ್ನಾ ಬುಕ್‌ಹೌಸ್‌ನಲ್ಲಿ ರಾಜ್ಯೋತ್ಸವ ಸಂಭ್ರಮ: ಪುಸ್ತಕದಲ್ಲಿ ದರ ರಿಯಾಯತಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಸಪ್ನ ಬುಕ್ ಹೌಸ್ ಈ ಸಲವೂ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಓದುಗರಿಗೆ ಹಲವು ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಭಾರತದ ಅತಿ ದೊಡ್ಡ ಪುಸ್ತಕ ಮಳಿಗೆ ಎಂದೇ ಹೆಸರಾಗಿರುವ ಸಪ್ನ ಬುಕ್ ಹೌಸ್ ಕನ್ನಡದಲ್ಲಿ 7000 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಪ್ರತಿ ವರ್ಷವೂ ರಾಜ್ಯೋತ್ಸವಕ್ಕೆ ಕನ್ನಡದ ಪ್ರಮುಖ ಬರಹಗಾರರ ಪುಸ್ತಕಗಳ ಜೊತೆಗೆ ಹೊಸ ಬರಹಗಾರರ ಪುಸ್ತಕಗಳನ್ನೂ ಪ್ರಕಟಿಸಿದೆ. ಈ ವರ್ಷ ರಾಜ್ಯೋತ್ಸವದಂದು ವಿಶೇಷವಾಗಿ 70 ಪುಸ್ತಕಗಳು ಹೊರಬಂದಿವೆ.

ಅದಕ್ಕೂ ಮುಂಚೆ, ನವೆಂಬರ್ 1 ರಿಂದ ನವೆಂಬರ್ 30 ರವರೆಗೆ ಕನ್ನಡ ರಾಜ್ಯೋತ್ಸವವನ್ನು ಸಪ್ನ ಬಹಳ ವೈವಿಧ್ಯಮಯವಾಗಿ ಆಚರಿಸಲು ನಿರ್ಧರಿಸಿದೆ. ನವೆಂಬರ್ ಇಡೀ ತಿಂಗಳು ಕನ್ನಡ ಪುಸ್ತಕ ಪ್ರದರ್ಶನ ಹಾಗೂ ಮಾರಾಟದ ಜೊತೆಗೆ ಪುಸ್ತಕಗಳಿಗೆ ಶೇಕಡಾ 10% ರಿಂದ 25%ರ ತನಕ ರಿಯಾಯಿತಿ. ಹಾಗೂ ರಾಜ್ಯೋತ್ಸವದ ವಿಶೇಷ ರಿಯಾಯಿತಿ ಒಂದು ಕೊಂಡರೆ ಒಂದು ಉಚಿತ ಮತ್ತು ಕಾಂಬೋ ಆಫರ್ ಈ ಕೊಡುಗೆ ಆಯ್ದು ಕನ್ನಡ ಪುಸ್ತಕಗಳಿಗೆ ಮಾತ್ರ. ಈ ಅವಧಿಯಲ್ಲಿ ರೂ. 500 ಕ್ಕೂ ಹೆಚ್ಚಿನ ಮೌಲ್ಯದ ಕನ್ನಡ ಪಠ್ಯೇತರ ಪುಸ್ತಕಗಳನ್ನು ಕೊಂಡವರಿಗೆ ವಿಶೇಷ ರಿಯಾಯಿತಿ ಕಾರ್ಡ್ ಕೂಡ ನೀಡಲಾಗುತ್ತದೆ. ಈ ಕಾರ್ಡ್ ಅನ್ನು ಹೊಂದಿದವರು ಇಡೀ ವರ್ಷ ಶೇಕಡಾ10% ರಿಯಾಯಿತಿಯಲ್ಲಿ ಕನ್ನಡ ಪುಸ್ತಕಗಳನ್ನು ನಮ್ಮ ಎಲ್ಲಾ ಸಪ್ನ ಮಳಿಗೆಯಲ್ಲಿ ಕೊಳ್ಳಬಹುದು.

ಈ ಕೊಡುಗೆ ಕನ್ನಡ ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಕೇವಲ ಕನ್ನಡ ಪಠ್ಯೇತರ ಪುಸ್ತಕಗಳಿಗೆ ಈ ರಿಯಾಯಿತಿ ಅನ್ವಯಿಸಿರುತ್ತದೆ. ಹಾಗೂ ನವೆಂಬರ್ ತಿಂಗಳಿನ ಪ್ರತಿ ಭಾನು ವಾರದಂದು ಮಕ್ಕಳಿಗಾಗಿ ಮತ್ತು ಹಿರಿಯರಿಗಾಗಿ ವಿಶೇಷ ಕಾಯ9ಕ್ರಮಗಳನ್ನು ನಮ್ಮ ಸಪ್ನ ಬುಕ್ ಹೌಸ್ ಕಲಬುರಗಿ ಶಾಖೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಪ್ನಾ ಬುಕ್ ಹೌಸ್ ಕಲಬುರಗಿ ಶಾಖೆ ವ್ಯವಸ್ಥಾಪಕರಾದ ಮಹಾಂತೇಶ ಮಠ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಲ್ಡೋಟ ಮುಂತಾದ ಕಾರ್ಖಾನೆ ವಿಸ್ತರಣೆ ವಿರೋಧಿ 4ನೇ ದಿನದ ಧರಣಿ ಯಶಸ್ವಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಬಿಎಸ್ಪಿಎಲ್ ಮುಂ. ಕಾರ್ಖಾನೆಗಳ ವಿಸ್ತರಣೆ ವಿರೋಧಿಸಿ, ಬಸಾಪುರ ಕೆರೆ ಬಲ್ಡೋಟ ಅತಿಕ್ರಮಣದಿಂದ ಮುಕ್ತಗೊಳಿಸಲು, 20 ಕಾರ್ಖಾನೆ ದೂಳು ಬಾಧಿತ ಹಳ್ಳಿಗಳ ಪರಿಸರ ಪುನರ್ ನಿರ್ಮಾಣ ಮಾಡುವಂತೆ ಆಗ್ರಹಿಸಿ 4ನೇ ದಿನದಲ್ಲಿ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆಯ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಯಶಸ್ವಿಯಾಯಿತು. ಇವತ್ತಿನ ಧರಣಿಯನ್ನು ಭಾರತೀಯ ಭೀಮ ಸೇನ ಜಿಲ್ಲಾ ಅಧ್ಯಕ್ಷ ಕಾಶಪ್ಪ ಚಲವಾದಿ ಇಲ್ಲಿ ಸ್ಥಾಪಿಸಿದ ಯಾವುದೇ ಕಾರ್ಖಾನೆಗಳಲ್ಲಿ ಸ್ಥಳಿಯರಿಗೆ ಉದ್ಯೋಗ ಕೊಟ್ಟಿಲ್ಲ. ಇವರು ಉದ್ಯೋಗ ಕೊಡುತ್ತೇವೆ ಎನ್ನುವುದು ಕೇವಲ ಭ್ರಮೆ. ಭೂಮಿ ಕಳೆದುಕೊಂಡವರಿಗೆ ಇವರು ಉದ್ಯೋಗ ಕೊಟ್ಟಿಲ್ಲ. ಇನ್ನು ಹಳ್ಳಿಗಳ ಯುವಕರಿಗೆ ಉದ್ಯೋಗವೆಲ್ಲಿ ಎಂದರು. ಇನ್ನೊಬ್ಬ ಸೇನ ಯುವ ಮುಖಂಡ ರಘು ಚಾಕ್ರಿ ಮಾತನಾಡದರು. 28ನೇ ವಾರ್ಡ ಸಿದ್ದೇಶ್ವರ ನಗರದ ಮಹಿಳಾ ಸಂಘದ ಸದಸ್ಯರು ಈ ದಿನದ ಧರಣಿಗೆ ಬೆಂಬಲ ನೀಡಿದರು.




ಕಾಂಗ್ರೆಸ್ ಪಕ್ಷದ ವಕ್ತಾರ ಹಾಗೂ ನಗಲಸಭೆ ಸದಸ್ಯ ಅಕ್ಬರ್ ಪಾಷಾ ಪಲ್ಟಾನ್ ಮಾತನಾಡಿ ಇದು ನಗರದ ಪ್ರತಿ ನಾಗರಿಕರ ಜವಾಬ್ದಾರಿಯಾಗಿದೆ. ಪಕ್ಷಾತೀತವಾಗಿ ಈ ಹೋರಾಟ ನಡೆಯುತ್ತಿದ್ದು ಮೆಚ್ಚುಗೆಗೆ ಪಾತ್ರವಾಗಿದೆ ಎಂದರು. ವಕೀಲರಾದ ಶಿವಾನಂದ ಹೊಸಮನಿ, ದೇವಪ್ಪ ಹೊಸಳ್ಳಿ ಇವರು ಸತ್ಯಾಗ್ರಹಕ್ಕೆ ಬೆಂಬಲಿಸಿ ಮಾತನಾಡಿದರು. ಅಲ್ಲಮಪ್ರಭು ಬೆಟ್ಟದೂರು, ಕೆ.ಬಿ. ಗೋನಾಳ, ಶರಣು ಗಡ್ಡಿ, ಡಿ.ಎಚ್. ಪೂಜಾರ, ಮಹಾದೇವಪ್ಪ ಎಸ್. ಮಾವಿನಮಡು, ಚನ್ನವೀರಯ್ಯ ಹಿರೇಮಠ ಕುಣಿ–ಕೆರಿ, ಮೂಕಪ್ಪ ಮೇಸ್ತ್ರಿ ಬಸಾಪುರ, ಮಖಬೂಲ್ ರಾಯಚೂರು, ರವಿ ಕಾಂತನವರ, ಕೆ. ಶಶಿಕಲಾ, ಗವಿಸಿದ್ದಪ್ಪ ಹಲಿಗಿ ಸುಂಕಮ್ಮ, ಈರಪ್ಪ ನೆರಸಲ್, ಬಡಕಪ್ಪ,

ಇವತ್ತಿನ ಧರಣಿ ಬ ಕವಯತ್ರಿ ಮಾಲಾ ಬಡಿಗೇರ, ರವಿ ಕಾಂತನವರ, ಡಿ. ಎಂ. ಬಡಿಗೇರ, ಶಂಭುಲಿಂಗಪ್ಪ ಆರ್. ಹರಗೇರಿ, ಡಾ. ಬಸವರಾಜ ಪೂಜಾರ, ಯಲ್ಲಪ್ಪ ಬಂಡಿ, ಹನುಮಂತಪ್ಪ ಗೊಂದಿ, ಶಿವಕುಮಾರ ಏಣಿಗಿ, ಪ್ರವೀಣ ಇಟಗಿ, ಸೋಮನಗೌಡ ಎಚ್. ಸುರೇಶ ಪೂಜಾರ, ನಿರ್ಮಲಾ ಮೇದಾರ, ಎಚ್.ಬಿ. ರಂಗಪ್ಪ, ನಾಗರಾಜ್ ಮೇದಾರ, ಡಾ ಮಹಾಂತೇಶ ನೆಲಾಗಣಿ, ವಿರುಪಾಕ್ಷಪ್ಪ ಸಿಂಗಾಡಿ, ಹನುಮಂತಪ್ಪ ನಾಯಕ ಹಾಸಗಲ್, ಗವಿಸಿದ್ದಪ್ಪ ಹಲಿಗಿ ಕುಣಿಕೇರಿ, ಮೂಕಪ್ಪ ಮೇಸ್ತ್ರಿ ಬಸಾಪುರ, ಮಖಬೂಲ್ ರಾಯಚೂರು, ಸಂಜೀವಮೂರ್ತಿ ಬೇವಿನಗಿಡ, ಸುಂಕಪ್ಪ ಮೀಸಿ, ಬಸವರಾಜ ನರೇಗಲ್ ಇದ್ದರು.

ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಯಾದಗಿರಿ ಮಂಗಳವಾರ 04.11.2025 

# ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನಕ್ಕೆ ಕ್ರಮ ವಹಿಸಿ




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ 03: ಯಾದಗಿರಿ ಜಿಲ್ಲೆಯಾದ್ಯಂತ ಜನರಲ್ಲಿ ಕುಷ್ಠರೋಗಬಗ್ಗೆ ಅರಿವುಮೂಡಿಸಿ ಕುಷ್ಠರೋಗ ಪತ್ತೆ ಹಚ್ಚುವ ಕ್ರಮ ವಹಿಸಬೇಕು ಎಂದು ಯಾದಗಿರಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ ಒರಡಿಯಾ ಅವರು ಹೇಳಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ ಇತ್ತೀಚಿನ ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನ ಕುರಿತು ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ದಿಸೆಯಲ್ಲಿ ಎಲ್ಲಾ ಅಧಿಕಾರಿಗಳು ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂದು ಸೂಚಿಸಿದರು.

ಸಾರ್ವಜನಿಕರಲ್ಲಿ ಕುಷ್ಠರೋಗದ ಲಕ್ಷಣಗಳು ಹಾಗೂ ಇದಕ್ಕೆ ಲಬಿಸಿರುವ ಚಿಕಿತ್ಸೆ ಪರಿಹಾರ ಕ್ರಮಗಳ ಬಗ್ಗೆ ತಿಳಿವಳಿಕೆ ನೀಡಬೇಕು.

ಶಾಲಾ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಚರ್ಮದ ಆರೋಗ್ಯ ತಪಾಸಣೆ ಮಾಡಲು ಕ್ರಮವಹಿಸಬೇಕು. ಕಾರ್ಯಕ್ರಮ ಅನುಷ್ಠಾನವಾಗಬೇಕಾದರೆ ಹೆಚ್ಚು ಪ್ರಚಾರ ಕಾರ್ಯಕ್ರಮಗಳಿಗೆ ಗಮನ ನೀಡಬೇಕು. ಕರಪತ್ರ, ಬಿತ್ತಿಪತ್ರ ಮುದ್ರಿಸಿ ಕುಷ್ಠರೋಗದ ಬಗ್ಗೆ ಜನರಿಗೆ ಜಾಗೃತಿ ಮೂಡಿಸಬೇಕು. ಎಲ್‌ಸಿಡಿಸಿ ಕಾರ್ಯಕ್ರಮವು ಯಶಸ್ವಿಗೊಳಿಸಲು ಸೂಚಿಸಿದರು. ಈ ಸಭೆಗೆ ಜಿಲ್ಲಾ ಕುಷ್ಠರೋಗ ನಿರ್ಮೂಲನಾಅಧಿಕಾರಿಡಾ.ಪದ್ಮಾನಂದ ಗಾಯಕ್ವಾಡ ಅವರು ಮಾತನಾಡಿ, ಕಾರ್ಯಕ್ರಮ ಹಮ್ಮಿಕೊಳ್ಳವ ಕುರಿತು ಮಾಹಿತಿಯನ್ನು ನೀಡಿ ಕಾರ್ಯಕ್ರಮವು 14 ದಿನಗಳ ವರಗೆ ನಡೆಯಲಿದ್ದು, 2025ರ ನವೆಂಬರ್ 3 ರಿಂದ 19ರ ವರೆಗೆ ನಡೆಯಲಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 87542 ಮನೆಗಳಿದ್ದು ಒಟ್ಟು 313 ತಂಡಗಳು ರಚಿಸಿದ್ದು, ಪ್ರತಿಯೊಂದು ತಂಡದಲ್ಲಿ ಒಬ್ಬ ಆಶಾ ಕಾರ್ಯಕರ್ತೆ ಮತ್ತು ಪುರುಷ ಸ್ವಯಂ ಸೇವಕರು ಇರುತ್ತಾರೆ. ಪ್ರತಿ 10 ತಂಡಕ್ಕೆ ಒಬ್ಬರು ಮೇಲ್ವಿಚಾರಕರು ಇರುತ್ತಾರೆ, ಒಟ್ಟು 31 ಮೇಲ್ವಿಚಾರಕರು ಇರುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಮಹೇಶ ಬಿರಾದರ, ಜಿಲ್ಲಾ ಆರ್.ಸಿ.ಹೆಚ್.ಓ ಡಾ.ಮಲ್ಲಪ್ಪ.ಕೆ, ಜಿಲ್ಲಾ ಮಲೇರಿಯಾ ನಿಯಂತ್ರಣ ಅಧಿಕಾರಿ ಡಾ.ಸಾಜೀದ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಜ್ಯೋತಿ ಕಟ್ಟಿಮನಿ, ಮಕ್ಕಳ ತಜ್ಞರು ಡಾ.ಕುಮಾರ ಅಂಗಡಿ, ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಚನ್ನಬಸಪ್ಪ,

ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾ.ರಮೇಶ ಗುತ್ತೇದಾರ, ಡಾ.ಹಣಮಂತರಡ್ಡಿ, ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿಗಳು ಡಾ.ಆರ್.ವಿ ನಾಯಕ, ಯಾದಗಿರಿ ವಿವಿಧ ಇಲಾಖೆಯ ಅಧಿಕಾರಿಗಳು ಇನ್ನಿತರರು ಭಾಗಪ್ಪ, ಬಸ್ಸಯ್ಯ, ಜಗದೀಶ ಕುಮಾರ ಕುರಕುಂದಿ ಉಪಸ್ಥಿತರಿದ್ದರು.

ಮಾಳಪ್ಪಯಾದವ ಕಾಡಂಗೇರಾ ಕಾರ್ಯಕ್ರಮ ನಿರೂಪಿಸಿದರು, ಶಿವಶರಣಯ್ಯ ವಂದಿಸಿದರು.

# ಫೋನ್ ಇನ್ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜಿಲ್ಲೆಯ ಸಾರ್ವಜನಿಕರಿಗೆ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಂಟಾಗುವ ಸಾರಿಗೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರತಿ ತಿಂಗಳು ಮೊದಲನೆಯ ಸೋಮವಾರ ನವೆಂಬರ್ 10 ರಂದು ಮಧ್ಯಾಹ್ನ 3.30 ರಿಂದ ಸಂಜೆ 5.30 ಗಂಟೆಯ ವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಯಾದಗಿರಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿ ಜಿ.ಬಿ.ಮಂಜುನಾಥ ಅವರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಸಾರ್ವಜನಿಕರಿಗೆ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಇರುವ ಸಾರಿಗೆ ಸಮಸ್ಯೆಗಳ ಕುರಿತು ಯಾದಗಿರಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಅಂದು ಏರ್ಪಡಿಸಲಾಗಿದೆ. ಯಾದಗಿರಿ ಜಿಲ್ಲೆಯ ಸಾರ್ವಜನಿಕರು ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು ಈ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ದೂ.ಸಂ. 6366423882ಗೆ ಕರೆ ಮಾಡಿ ತಮ್ಮ ಸಾರಿಗೆ ವ್ಯವಸ್ಥೆ ಕುರಿತು ಇರುವ ಸಮಸ್ಯೆಗಳನ್ನು ತಿಳಿಸಿ ಪರಿಹಾರ ಕಂಡುಕೊಳ್ಳಬೇಕು. ಅಂದು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಯಾದಗಿರಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿ ಜಿಲ್ಲೆಯ ಸಾರಿಗೆ ಸಮಸ್ಯೆಗಳ ಕುರಿತು ಸಾರ್ವಜನಿಕರೊಂದಿಗೆ ನೇರವಾಗಿ ಮಾತನಾಡಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಲಕಾರ್ಮಿಕ ಪದ್ದತಿ ನಿರ್ಮೂಲನೆ ಆಟೋ ಪ್ರಚಾರಕ್ಕೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:03. ಮಕ್ಕಳನ್ನು ಕೂಲಿಗೆ ಕಳುಹಿಸದೇ ಶಾಲೆಗೆ ಕಳುಹಿಸುವ ಬಗ್ಗೆ ಪಾಲಕ, ಪೋಷಕರು ಗಮನ ಹರಿಸಬೇಕು ಎಂದು ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಮರಿಯಪ್ಪ ಅವರು ಹೇಳಿದರು. ಜಿಲ್ಲಾಡಳಿತ ಭವನದ ಆವರಣದಲ್ಲಿ ನ.3ರ ಸೋಮವಾರ ರಂದು ಯಾದಗಿರಿ ಕಾರ್ಮಿಕ ಇಲಾಖೆಯ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಆಟೋ ಪ್ರಚಾರಕ್ಕೆ ಚಾಲನೆನೀಡಿ ಅವರು ಮಾತನಾಡಿದರು.

2025–26ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಎಸ್.ಪಿ) ಹಾಗೂ ಗಿರಿಜನ ಉಪಯೋಜನೆ (ಟಿ.ಎಸ್.ಪಿ)ಯಡಿ, ಎಸ್.ಸಿ,ಎಸ್.ಟಿ ಜನಾಂಗದವರು ವಾಸಿಸುವ ಪ್ರದೇಶಗಳಲ್ಲಿ, ಮಕ್ಕಳನ್ನು ದುಡಿಮೆಗೆ ಕಳುಹಿಸದೆ ಶಾಲೆಗೆ ಕಳುಹಿಸುವ ಬಗ್ಗೆ, ಜಿಲ್ಲೆಯ 6 ತಾಲ್ಲೂಕಿನಲ್ಲಿ ಆಟೋ ಪ್ರಚಾರ ಪ್ರದರ್ಶಸಲಾಗಿದೆ ಎಂದರು. ಕಾರ್ಮಿಕ ಅಧಿಕಾರಿಗಳಾದ ಶ್ರೀಹರಿ ದೇಶಪಾಂಡೆ ಅವರು ಮಾತನಾಡಿ, ಕಾರ್ಮಿಕ ಇಲಾಖೆದಿಂದ ಜನಜಾಗೃತಿ, ಕಾನೂನು ಅರಿವು ನೆರವು ಕಾರ್ಯಕ್ರಮ, ಬೀದಿನಾಟಕ, ಆಟೋ ಪ್ರಚಾರ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಇದನ್ನು ಮೀ–ರಿಯೂ ಸಹ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡಲ್ಲಿ ಅಂತಹ ಅಂಗಡಿ ಮಾಲೀಕರ ವಿರುದ್ಧ 20,000 ರಿಂದ 50,000 ರೂ.ಗಳವರೆಗೆ ದಂಡ ಮತ್ತು 6 ತಿಂಗಳಿಂದ 2 ವರ್ಷದವರೆಗೆ ಜೈಲು ಶಿಕ್ಷೆ ಅಥವಾ ಎರಡನ್ನು ಸಹ ವಿಧಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ನಿರ್ದೇಶಕರು ರಿಯಾಜ್ ಪಟೇಲ್ ವರ್ಕನಳ್ಳಿ, ಕಾರ್ಮಿಕ ನಿರೀಕ್ಷಕರಾದ ಶ್ರೀಮತಿ ಸಂಗೀತಾ ಹೊನ್ನೂರು, ವಕೀಲರಾದ ಬಿ.ಜಿ.ಪಾಟೀಲ್, ಯುವ ಸಾಹಿತಿಗಳಾದ ಗುರುಪ್ರಸಾದ ವೈದ್ಯ, ಕಾರ್ಮಿಕ ಇಲಾಖೆ ಸಿಬ್ಬಂದಿಗಳು ಬಾಲು ನಾಯಕ, ಶಿವರಾಜ ಉಪಸ್ಥಿತರಿದ್ದರು.

## ರಾಷ್ಟ್ರೀಯ ಏಕತಾ ದಿನಾಚರಣೆ ಅಂಗವಾಗಿ ರಾಯಚೂರಲ್ಲಿ ಆರೋಗ್ಯ ತಪಾಸಣಾ ಶಿಬಿರ

# ಪ್ರತಿಯೊಬ್ಬರು ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿ: ಸಿಇಓ ಸಲಹೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು : ಇಂದಿನ ಆಧುನೀಕತೆಯ ಒತ್ತಡದ ಜೀವನ ಶೈಲಿಯಿಂದಾಗಿ ನಗರ, ಗ್ರಾಮೀಣ ಎನ್ನದೆ ಎಲ್ಲಡೆ ಕಂಡು ಬರುತ್ತಿರುವ ರಕ್ತದೊತ್ತಡ,

ಸಕ್ಕರೆ ಕಾಯಿಲೆ, ಕ್ಯಾನ್ಸರ್‌ನಂತಹ ಕಾಯಿಲೆಗಳನ್ನು ಆರಂಭದಲ್ಲಿಯೇ ಗುರುತಿಸಿ ಚಿಕಿತ್ಸೆ ಪಡೆದುಕೊಳ್ಳಬೇಕು. ನಿಯಮಿತ ಆರೋಗ್ಯ ತಪಾಸಣೆಗೆ ಮತ್ತು ವ್ಯಾಯಾಮಕ್ಕೆ ಒತ್ತುಕೊಡವೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ

ಈಶ್ವರ ಕುಮಾರ್ ಕಾಂದೂ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಿಮ್ಸ್, ಅಸಾಂಕ್ರಾಮಿಕ ರೋಗಗಳ ಘಟಕ, ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ಇವರ ಸಹಯೋಗದಿಂದ ರಾಷ್ಟ್ರೀಯ ಏಕತಾ

ದಿನಾಚರಣೆಯ ಅಂಗವಾಗಿ ಇತ್ತೀಚೆಗೆ ನಡೆದ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಅತಿಯಾದ ಕೊಬ್ಬಿನಾಂಶ

ಪದಾರ್ಥಗಳ ಬಳಕೆ, ವ್ಯಾಯಾಮದಡೆ ನಿರಾಸಕ್ತಿ, ತಂಬಾಕು, ಆಲ್ಕೋಹಾಲ್‌ನಂತಹ ಪದಾರ್ಥಗಳ ಬಳಕೆಯಿಂದ ರಕ್ತದೊತ್ತಡ, ಸಕ್ಕರೆ ಕಾಯಿಲೆಯಂತಹ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು,

ಅದರಲ್ಲೂ ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಈ ಪ್ರಮಾಣ ಹೆಚ್ಚಾಗುತ್ತಿದೆ. ಇದಕ್ಕಾಗಿ

ಜಿಲ್ಲೆಯಾದ್ಯಂತ ಗೃಹ ಆರೋಗ್ಯ ಯೋಜನೆ ಕುರಿತು ಜನಜಾಗೃತಿ ಶಿಬಿರಗಳನ್ನು ನಿರಂತರ ಹಮ್ಮಿಕೊಂಡು ಮೂವತ್ತು ವರ್ಷ ಮೇಲ್ಪಟ್ಟ ಪ್ರತಿಯೊಬ್ಬರ ನಿಯಮಿತ ಆರೋಗ್ಯ ತಪಾಸಣೆ ಕೈಗೊಳ್ಳಬೇಕೆಂದರು.

ಇದೆ ವೇಳೆ, ಸಿಇಓ ಅವರು ಆರೋಗ್ಯ ಶಿಬಿರದಲ್ಲಿ ಭಾಗಿಯಾಗಿ ವಿವಿಧ ಪರೀಕ್ಷೆಗಳನ್ನು ಮಾಡಿಸಿಕೊಂಡರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್

ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಯೋಜನಾನಿರ್ದೇಶಕರಾದ ಶರಣಬಸವರಾಜ, ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ, ಕಾರ್ಯನಿರ್ವಾಹಕ ಅಭಿಯಂತರರು ಶಿವಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು,

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್, ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ.ಗಣೇಶ್, ರಿಮ್ಸ್ ಎನ್‌ಸಿಡಿ ಪಿಜಿಷಿಯನ್ ಡಾ.ಶ್ರೀನಿವಾಸ್ ಸೇರಿದಂತೆ ಜಿಲ್ಲಾ ಪಂಚಾಯತ ಹಾಗೂ ಎನ್‌ಸಿಡಿ, ಮಾನಸಿಕ ಆರೋಗ್ಯ, ಅಂಧತ್ವ ವಿಭಾಗದ ಅಧಿಕಾರಿ, ಸಿಬ್ಬಂದಿ ಇದ್ದರು.

# ಕನ್ನಡ ಭಾಷೆ ಬಗ್ಗೆ ಅರಿವು ಮೂಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ:ಬಗ್ದಲಕರ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಕನ್ನಡ ಭಾಷೆ ಬಗ್ಗೆ ಅರಿವು ಮೂಡಿಸುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ ಎಂದು ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ್ ನುಡಿದರು. ಇಲ್ಲಿಯ ಪುರಸಭೆ ಕಚೇರಿಯಲ್ಲಿ ಆಯೋಜಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡಾಂಬೆ, ಡಾ. ಬಿ.ಆರ್. ಅಂಬೇಡ್ಕರ್, ಮಹಾತ್ಮಾ ಗಾಂಧೀಜಿ ರವರ ಭಾವಚಿತ್ರಕ್ಕೆ ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ್ ಪೂಜೆ ಸಲ್ಲಿಸಿ, ಪುಷ್ಪನಮನ ಸಲ್ಲಿಸಿದರು. ಬಳಿಕ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಪ್ರತಿವರ್ಷ ನ.1ರಂದು ಎಲ್ಲೆಡೆ ಕನ್ನಡ ರಾಜ್ಯೊ?ತ್ಸವವನ್ನು ಅರ್ಥಪೂರ್ಣವಾಗಿ ಅಚರಿಸುವುದು ಮತ್ತು ಯುವ ಪೀಳಿಗೆಗೆ ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ, ಕಲೆ, ಭಾಷೆ ಬಗ್ಗೆ ಅರಿವು ಮೂಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಕರ್ನಾಟಕ ಏಕೀಕೃತ ರಾಜ್ಯವಾದದ್ದು, ನ.1. 1973 ರಂದು, ಕರ್ನಾಟಕ ರಾಜ್ಯವೆಂದು ಮರುನಾಮಕರಣಗೊಂಡು 70 ವರ್ಷ ಪೂರ್ಣಗೊಂಡಿರುವ ನ.1ರಂದು ಈ ಬಾರಿಯೂ ನಮ್ಮ ಕನ್ನಡದ ಉತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವುದರ ಮೂಲಕ ಕನ್ನಡದ ಕಂಪನ್ನು ಎಲ್ಲೆಡೆ ಪಸರಿಸಬೇಕೆಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ನಸೀರ್ ಖಾನ್, ಪ್ರಭಾರಿ ಮುಖ್ಯಾಧಿಕಾರಿ ವಿಜಯದೀಪ ಸದಸ್ಯರಾದ ರಹೇಮಾನ ಪಾಶ, ಮೀರ ಮುಜಾಫರ ಮಾಲಿ ಪಟೇಲ್, ವಿಶಾಲ ಬೊರಳೆ, ರೇವಣಸಿದ್ದಪ್ಪ ಭೂತಾಳೆ, ಜಲೀಸಾ ಬೇಗಂ, ಪಾರ್ವತಿ ರಮೇಶ, ಶೋಭಾ ಸುಭಾಷ ಕುಂಬಾರ ಸಿಬ್ಬಂದಿಗಳಾದ ವಿಜಯಕುಮಾರ, ಚಿದಾನಂದ ಪತ್ರಿ, ಆನಂದ, ಶಿವಕುಮಾರ, ರಾಜಕುಮಾರ

ಗುತ್ತೆದಾರ್, ಕವಿತಾ, ಸರೋಜನಿ, ಆನಂದ, ಸಂತೋಷಕುಮಾರ, ಸಚಿನ, ಅಶ್ವಿನಿ, ಮಂಜುಳಾ, ಇಲಾಹಿ, ಬಕ್ಕಪ್ಪಾ, ಐಶ್ವರ್ಯ, ಮಾಲಾಶ್ರೀ, ಪ್ರಿಯಾ, ಪಂಚಶಿಲಾ ಪ್ರಮುಖರಾದ ಕಲ್ಯಾಣರಾವ ಜಾಬಾ, ಶಾಮರಾವ ಭೂತಾಳೆ, ಶರಣಪ್ಪ ಗಡಮಿ ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕನ್ನಡ ರಾಜ್ಯೋತ್ಸವ ನಿಮಿತ್ಯ ಉಪನ್ಯಾಸ ಸನ್ಮಾನ ಸಾಂಸ್ಕೃತಿಕ ಕಾರ್ಯಕ್ರಮ

# ಮಕ್ಕಳು ಹೆಚ್ಚಾಗಿ ಕನ್ನಡ ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಲಿ: ಭಾರತಿ ವಸ್ತ್ರದ್

ಮಲ್ಲಮ್ಮ ನುಡಿ ವಾರ್ತೆ

ಬೀದರ್ ಅ 03: ಇಂದಿನ ಪೀಳಿಗೆಯ ಮಕ್ಕಳು ಕನ್ನಡ ಭಾಷೆಯ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಮೊಬೈಲ್ ಮತ್ತು ಟಿ.ವಿಯು ಮಕ್ಕಳ ಜೀವನದ ಭಾಗವಾಗಿಬಿಟ್ಟಿದೆ. ಆದರೆ ಇದರ ಅತಿಯಾದ ಬಳಕೆಯಿಂದ ಮಕ್ಕಳು ಓದಿನ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಅನಾವಶ್ಯಕವಾಗಿ ಮೊಬೈಲ್‌ನಲ್ಲಿ ಸಮಯ ವ್ಯರ್ಥ ಮಾಡದೆ, ಆ ಸಮಯವನ್ನು ಕನ್ನಡ ಪುಸ್ತಕ ಓದುವುದರಲ್ಲಿ ಕಳೆಯಬೇಕು ಎಂದು ಕರ್ನಾಟಕ ಲೇಖಕೀಯರ ಸಂಘದ ಜಿಲ್ಲಾ ಅಧ್ಯಕ್ಷೆ ಶ್ರೀಮತಿ ಭಾರತಿ ವಸ್ತ್ರದ ಅವರು ಕಿವಿ ಮಾತು ಹೇಳಿದರು.

ಅವರು ರವಿವಾರ ಬೀದರ್ ನಗರದ ಪುಜ್ಯ ಶ್ರೀ ಚನ್ನಬಸವ ಪಟ್ಟದೇವರ ಜಿಲ್ಲಾ ರಂಗಮಂದಿರದಲ್ಲಿ ಅತಿವಾಳೆ ಸಾಂಸ್ಕೃತಿಕ ಪ್ರತಿಷ್ಠಾನ ಬೀದರ್ ವತಿಯಿಂದ ಏರ್ಪಡಿಸಿದ ಕನ್ನಡ ರಾಜ್ಯೋತ್ಸವ ನಿಮಿತ್ಯ ಉಪನ್ಯಾಸ–ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕನ್ನಡಾಂಬೆಯ

ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಪುಸ್ತಕ ಓದುವ ಹವ್ಯಾಸವು ಮಕ್ಕಳಲ್ಲಿ ಚಿಂತನಾ ಶಕ್ತಿ, ಕಲ್ಪನಾ ಶಕ್ತಿ ಮತ್ತು ಸೃಜನಾತ್ಮಕತೆ ಬೆಳೆಯಲು ನೆರವಾಗುತ್ತದೆ. ಕನ್ನಡ ಪುಸ್ತಕಗಳ ಓದಿನ ಮೂಲಕ ಮಕ್ಕಳು ನಮ್ಮ ಭಾಷೆಯ ಸೌಂದರ್ಯ, ಸಾಹಿತ್ಯದ ವೈಭವ ಮತ್ತು ಸಂಸ್ಕೃತಿಯ ಗೌರವವನ್ನು ಅರಿಯಬಹುದು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅತಿವಾಳೆ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷರಾದ ಸಂಜೀವಕುಮಾರ ಅತಿವಾಳೆ ಅವರು, ನಮ್ಮ ಗಡಿನಾಡಿನಲ್ಲಿ ಕನ್ನಡದ ಕೀರ್ತಿ ಉಳಿಸಿ ಬೆಳೆಸಲು ಹತೋಟಿ ಬಿಟ್ಟು



ದುಡಿಯುತ್ತಿರುವ ಕನ್ನಡ ಮನಸ್ಸುಗಳಿಗೆ ಗೌರವ ನೀಡುವುದು ಹಾಗೂ ಅವರನ್ನು ಗುರುತಿಸುವುದು ನಮ್ಮ ಪ್ರತಿಷ್ಠಾನದ ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ ಶಿಂಧೆ, ಪ್ರಮುಖರಾದ ಹಣ್ಮುಪಾಜಿ, ಅನಿಲಕುಮಾರ ದೇಶಮುಖ, ಮಹೇಶ ರಾಂಪುರೆ, ಆನಂದ ದೇವಪ್ಪಾ, ಸಚಿನ ಮಲ್ಕಾಪುರ, ರಾಜು ಸಾಗರ, ಲಕ್ಷ್ಮಣ ಮೇತ್ರೆ, ಜ್ಞಾನದೇವ ವಳಸಂಗೆ, ಇತರರು ವೇದಿಕೆ ಮೇಲಿದ್ದರು.

### ಕಲಾ ಪ್ರದರ್ಶಿಸಿದ ಕಲಾತಂಡಗಳು

ಕಾರ್ಯಕ್ರಮದಲ್ಲಿ ನಾಟ್ಯ ಶ್ರೀ ನೃತ್ಯಾಲಯ ತಂಡ, ನೃತ್ಯಾಂಗನ ನಾಟ್ಯ ಮತ್ತು ಕಲಾ ಕೇಂದ್ರದ ತಂಡ, ಶಿವಕುಮಾರ ಹಾಗೂ ತಂಡ, ಸಾಯಿಸ್ಫೂರ್ತಿ ಪದವಿ ಪೂರ್ವ ವಿದ್ಯಾರ್ಥಿಗಳ ತಂಡ, ಪತಂಜಲಿ ಪಬ್ಲೀಕ್ ಶಾಲೆ ವಿದ್ಯಾರ್ಥಿಗಳ ತಂಡ, ಕು.ಭವಾನಿ ವಗ್ಗೆ ಮತ್ತಿತತರ ತಂಡದಿಂದ ಕನ್ನಡ ಗೀತೆಗಳಿಗೆ ನೃತ್ಯ ಮಾಡಿ ನೋಡುಗರ ಗಮನ ಸೆಳೆದರು. ಪರಮೇಶ್ವರ ಡಾಂಗೆ, ಶ್ರೀಮತಿ ಗಾಯತ್ರಿ ಪಾಟೀಲ್, ವೈಜಿನಾಥ ಬಾಬಶೆಟ್ಟೆ, ಮಲ್ಲಿಕಾರ್ಜುನ್ ಪಾಟೀಲ್, ಶ್ರೇಯಾ ಭಂಡೆ, ಸೃಜನಾ ಅತಿವಾಳೆ,

ಅಂಕಿತಾ ಕಟ್ಟಿಮನಿ, ವರ್ಷಾ ಅವರು ಕನ್ನಡ ಗೀತೆಗಳು ಗಾಯನ ಮಾಡಿದರು. ಪ್ರಾರಂಭದಲ್ಲಿ ಶ್ರೀಮತಿ ಭಾನು ಪ್ರೀಯಾ ಅರಳಿ ತಂಡದಿಂದ ನಾಡಗೀತೆ ಹಾಡಿದರು. ಲಕ್ಷ್ಮಣ ಮೆತ್ರೆ ಸ್ವಾಗತಿಸಿದರು, ಶ್ರೀಮತಿ ಶಿಲ್ಪಾ ಮಜಗೆ ಹಾಗೂ ಪ್ರೇಮ ಅವಿನಾಶ್ ನಿರೂಪಿಸಿದರೇ, ಭೀಮಶಾ ಬಸಲಾಪೂರೆ ವಂದಿಸಿದರು.

### ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರುಗಳಿಗೆ ಸನ್ಮಾನ

ಕೊನೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಭೀಮಸೇನ್‌ರಾವ್ ಕಾನಿಹಾಳ್, ಜೋಸೆಫ್ ಎಡಿಶನ್, ಬಿ.ಎಂ.ಶಶಿಕಲಾ, ಶೀಲಾ ಬಿರಾದಾರ್, ಪಾರ್ವತಿ ಸೋನಾರೆ, ಲಕ್ಷ್ಮಣ ಪೂಜಾರಿ, ಡಾ. ಪ್ರಶಾಂತಕುಮಾರ ಭೂರೆ, ಶೈಲಜಾ ಕೋಳಾರೆ, ಡಾ. ಸುನೀತಾ ಕೂಡ್ಲಿಕರ್, ಪ್ರತಿಭಾ ಮೆಂಚ್, ಶಾಂತಮ್ಮ ಬಲ್ಲೂರ, ಆರ್. ಎಚ್.ಬಿರಾದಾರ್, ವಿಠಲರಾವ್ ಭಂಗೂರೆ, ಸ್ನೇಹಲತಾ ಗೌನಳ್ಳಿ, ಗೌಡಪ್ಪ ಮೋಗದಾಳ್, ಪಾರ್ವತಿ ಮೇತ್ರೆ, ಬಾಬುರಾವ್ ಶೇಳಕೆ, ಧನರಾಜ ಕುಮಾರ ಚಿಂಚೋಳಿ, ಧರಮರಾಜ್ ನಿರ್ಣಾಕರ್, ವಿನೋದಕುಮಾರ ಹೊನ್ನಾ, ಭಗವಂತ ಸಿಂದೋಲ್, ಓಂಕಾರ್ ಉಪ್ಪೆ, ಬಸವರಾಜ ಮಲಗೆ, ಗುರುನಾತ ವಡ್ಡೆ, ಡಿ.ಜೆ. ಹಾದಮನಿ, ವಿಠಲದಾಸ್ ಪ್ಯಾಗೆ, ಸಿದ್ದಪ್ಪಾ ಮೂಲಗೆ, ಸಚೀನ್ ಮಲ್ಕಾಪೂರೆ, ರಾಮಶೆಟ್ಟಿ ಜಾಧವ್, ಮಹ್ಮದ್ ಯುಶುಫ್, ಸಂಗೀತಾ ಮಾರ್ಖಂಡೇಶ್ವರ್, ರಂಗರಾವ್ ಮೆತ್ರೆ, ಪುಷ್ಪಾ ಜಿ.ಕನಕ್, ರೂಪಾ ಪಾಟೀಲ್, ಲಕ್ಷ್ಮೀ ಬಾವಗೆ, ಕೆ.ಎಸ್.ಭಂಡಾರಿ, ಮಲ್ಲಮ್ಮಾ ಸಂತಾಜಿ, ಶೈಲಜಾ ಚಾಳಕಾಪೂರೆ, ಧರಮಪ್ರಕಾಶ್, ಗಣೇಶ ಬಿರಾದಾರ್, ಶಿವಪೂತ್ರಪ್ಪಾ ಪಾಟೀಲ್, ವಿಜಯಕುಮಾರ ಪಡಸಾಲೆ, ಸುಜಾತಾ ಶಿಲವಂತ, ರಾಮಶೆಟ್ಟಿ ಐನೋಳೆ, ಭೀಮಶಾ ಮೆತ್ರೆ, ರಾಜಶೇಖರ್ ಅಂತವಾರ್, ಬಾಲಾಜಿರಾವ್ ಮೆತ್ರೆ, ಡಿ.ಕೆ.ಸುಂದರರಾಜ್, ಕೆ.ಸತ್ಯಮೂರ್ತಿ, ನಿರಂಜಪ್ಪಾಪಾತ್ರೆ, ಕಲ್ಯಾಣರಾವ್ ಪಾಪಡೆ, ಪುಂಡ್ಲಿಕರಾವ ಗಡ್ಡೆ, ಮನೋಹರ್ ಕಾಶಿ, ಸಿದ್ದಾರೆಡ್ಡಿ ನಾಗೂರೆ, ಶಾಮರಾವ್ ನೆಲವಾಡೆ ಲೋಕೇಶ್ ಮಿರ್ಜಾಪೂರ್, ಫಯಾಜ್ ಚಾಂದ್, ಪ್ರಕಾಶ ತಾಂದಳೆ, ಅಶೋಕ ಮಡಪಳ್ಳಿ, ಈಶ್ವರ ತಡೋಳ್, ಶಿವಾಜಿ ಕಾವಳೆ, ಜ್ಞಾನೇಶ್ವರ್ ಹಿಪ್ಪಳಗಾಂವ್, ಸುನೀಲ ಚಿಲ್ಲರ್ಗಿ, ಮಹೇಶ ಕೋಟೆ, ಮಹ್ಮದ್ ಇಲಿಯಾಸ್, ಮಹ್ಮದ್ ತಯಾಜ್, ಶ್ರೀಕಾಂತ ಕರಗಾರ್, ರಾಜಕುಮಾರ ಹಾಲಗೋರಟೆ, ಅರ್ಜುನ್ ಭಂಗೆ ಇವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

# ನ.4, 5. ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ3: ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಜಲಮೂಲ ನದಿಗಳಲ್ಲಿ ಒಂದಾದ ಭೀಮಾ ನದಿಯಿಂದ ಸರಬರಾಜಾಗುವ ಮುಖ್ಯ ಕೊಳವೆ ಮಾರ್ಗದ ಕೋಟನೂರ (ಡಿ)ಯ ಮಧ್ಯಂತರ ಯಂತ್ರಾಗಾರದಲ್ಲಿರುವ 1000 ಹೆಚ್.ಪಿ. ಮೋಟಾರ ಕೆಟ್ಟಿರುವುದರಿಂದ ಇದರ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಆದ್ದರಿಂದ ಇದೇ ನವೆಂಬರ್ 4 ಹಾಗೂ 5 ರಂದು ಭೀಮಾ ನದಿಯಿಂದ ಸರಬರಾಜಾಗುವ ಎಲ್ಲಾ ಬಡಾವಣೆಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಕಲಬುರಗಿ ನಗರದ ಸಾರ್ವಜನಿಕರು ಮಹಾನಗರ ಪಾಲಿಕೆ, ಕೆಯುಐ–ಡಿಎ???ಸಿ ಹಾಗೂ ಮೆ॥ ಎಲ್ ಆಂಡ್ ಟಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ಕೆಯುಐ–ಡಿಎ???ಸಿ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ಕಲಬುರಗಿ ನಗರದ ಬಿದ್ದಾಪೂರ, ರಾಯರಗುಡ್ಡಿ, ವಿಶಾಲ ನಗರ, ಅಂಬಿಕಾ ನಗರ, ಪಿಂಪ್ಲಿ ಟೆಂಪಲ್, ಪಿ ಆಂಡ್ ಟಿ ಕಾಲೋನಿ, ವಿದ್ಯಾನಗರ, ಯಶವಂತನಗರ, ಕರುಣೇಶ್ವರನಗರ, ಗಣೇಶ ನಗರ, ಭಾಗ್ಯವಂತಿನಗರ, ದೇವಾನಗರ, ತಿಲಕನಗರ, ಬನಶಂಕರಿ ನಗರ, ಹರಿನಗರ, ಗಾಬರೆ ಲೇ–ಔಟ್, ಜೆಮಶೆಟ್ಟಿ ನಗರ, ಕೃಷ್ಣ ನಗರ, ತಾರಫೈಲ್, ಉದಯನಗರ, ಎ???ಜಿಓ ಕಾಲೋನಿ, ಜೇವರ್ಗಿ ಕಾಲೋನಿ, ಮಾಕಾ ಲೇಔಟ್, ಸಂತೋಷ ಕಾಲೋನಿ, ಪಿಡಬ್ಲ್ಯೂಡಿ ಕಾಲೋನಿ, ಬ್ಯಾಂಕ್ ಕಾಲೋನಿ, ಬಾಲಾಜಿ ನಗರ, ರೆಹಮತ್ ನಗರ, ಸಂಪಿಗೆ ನಗರ, ಬುದ್ಧನಗರ, ರೇವಣಸಿದ್ದೇಶ್ವರ

ಕಾಲೋನಿ, ಸಾಯಿನಗರ, ಓಜಾ ಲೇಔಟ್, ಸ್ವಾಮಿ ವಿವೇಕಾನಂದ ನಗರ, ಪ್ರಗತಿ ಕಾಲೋನಿ, ಸಿಐಬಿ ಕಾಲೋನಿ, ಶಕ್ತಿ ನಗರ, ಸ್ಟೇಷನ್ ಬಜಾರ, ಐವಾನ್ ಶಾಹಿ, ಯತೀಮಖಾನಾ, ಶಾಂತಿ ನಗರ, ವಿಠ್ಠಲ ನಗರ, ಖುಬಾ ಪ್ಲಾಟ, ಮಿಜಬಾ ನಗರ, ಅಜ್ಮೀರ್ ಕಾಲೋನಿ, ಕರಿಮ ನಗರ, ಗಾಲಿಬ ಕಾಲೋನಿ, ಮಹಮ್ಮದ ಚೌಕ್, ಖಾದ್ರಿ ಚೌಕ್, ಶಿವನಗರ, ಸಿದ್ರಾಮೇಶ್ವರ ಕಾಲೋನಿ, ನಬಿ ಕಾಲೋನಿ, ಶೇಖ ರೋಜಾ, ಕೈಲಾಸನಗರ, ಜಿ.ಆರ್ ನಗರ, ಕಸ್ತೂರಿ ನಗರ, ಆಶ್ರಯ ಕಾಲೋನಿ, ಪೂಜಾ ಕಾಲೋನಿ, ಜಾಗೃತಿ ಕಾಲೋನಿ, ಓಂ ನಗರ, ಜಂ–ಜಂ ಕಾಲೋನಿ, ಜುಬೇರ್ ಕಾಲೋನಿ, ಆಜಾದಪುರ ಕಾಲೋನಿ, ನಾಯ್ಡು ಕಾಲೋನಿ ಹಾಗೂ ಮಿನಿ ಅಮ್ಮಲವಾಡಿ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತದೆ.

# ವಿದ್ಯುತ್ ಮೀಟರನ್ನು ಕೈಗೆಟುವ ಸ್ಥಳದಲ್ಲಿ ಅಳವಡಿಸಿಕೊಳ್ಳಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.03: ಅಪ್ಟಿಕಲ್ ಪೋರ್ಟ್ ಪ್ರೋಬ್ ತಂತ್ರಜ್ಞಾನ ಬಳಸಿ ಗ್ರಾಹಕರಿಗೆ ವಿದ್ಯುಬಿಲ್ ನೀಡಲಾಗುತ್ತಿದ್ದು, ಮೀಟರ್ ರೀಡಗಳಿಗೆ (ಮಾಪಕ ಓದುಗರು) ಮೀಟರ್ ಮಾಪನ ಮಾಡಲು ಅನುಕೂಲವಾಗುವಂತೆ ಗ್ರಾಹಕರು ತಮ್ಮ ಸ್ಥಾವರಗಳ ವಿದ್ಯುತ್ ಮೀಟಗಳನ್ನು ಕೈಗೆಟುಕುವ ಸ್ಥಳಗಳಲ್ಲಿ ನೆಲಮಟ್ಟದಿಂದ 5.5 ಅಡಿ ಎತ್ತರದಲ್ಲಿ ಅಳವಡಿಸಿಕೊಳ್ಳಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಗುಲಬರ್ಗಾ ವಿದ್ಯುತ್ ಸರಬರಾಜು ನಿಗಮದ ವ್ಯಾಪ್ತಿಯಲ್ಲಿನ ಕೆಲ ವಿದ್ಯುತ್ ಸ್ಥಾವರಗಳ ಮೀಟ???ಗಳನ್ನು ಎತ್ತರದ ಪ್ರದೇಶದಲ್ಲಿ ಅಳವಡಿಸಿರುವುದರಿಂದ ಅಪ್ಟಿಕಲ್ ಪೋರ್ಟ್ ಪ್ರೋಬ್ ಮೂಲಕ ಮೀಟರ್ ಮಾಪನ ಮಾಡಲು ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ಮೀಟ???ಗಳನ್ನು ನೆಲಮಟ್ಟದಿಂದ 5 ರಿಂದ 5.5 ಅಡಿ ಎತ್ತರದಲ್ಲಿ ಅಳವಡಿಸಿಕೊಳ್ಳಬೇಕೆಂದು ಕಲಬುರಗಿ ಜೆಸ್ಕಾಂ ಮನವಿ ಮಾಡಿದೆ.

# ಕನ್ನಡ ರಾಜ್ಯೋತ್ಸವದ ನಿತ್ಯೋತ್ಸವ ಮನರಂಜನಾ ಕಾರ್ಯಕ್ರಮ: ವಿರಕ್ತಮಠ




ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ರಂಗಕುಸುಮ ಸಾಂಸ್ಕೃತಿಕಕಲಾ ಸಂಘದವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕಲಾವಿದರ ಸಹಯೋಗದಲ್ಲಿ ನ.5 ರಂದು ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಸಂಜೆ 6 ಗಂಟೆಗೆ ನಿತ್ಯೋತ್ಸವ ಅದ್ದೂರಿ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷರಾದ ಸಿದ್ದೇಶ ಗು ವಿರಕ್ತಮಠ ಅವರು ಹೇಳಿದರು. ಅವರಿಂದುನಗರದಸುದ್ದಿಗಾರರೊಂದಿಗೆ ಮಾತನಾಡುತ್ತಾ,ಕಾರ್ಯಕ್ರಮದ ಉದ್ಘಾಟನೆಯನ್ನುವಿಧಾನ ಪರಿಷತ್ ಸದಸ್ಯರಾದ ಎ. ವಸಂತಕುಮಾರ ಅವರು ನೆರವೇರಿಸಲಿದ್ದಾರೆ ಎಂದರು. ಸಂಘದ ರಾಜ್ಯ ಉಪಾಧ್ಯಕ್ಷರಾದ ಮಹಾಂತೇಶ ಪಾಟೀಲ್ ಅತ್ತನೂರು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು,ಅದೇರೀತಿಕಾರ್ಯಕ್ರಮದ ದಿವ್ಯಾ ಸನ್ನಿದ್ಯಾವನ್ನು ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು, ಶಂಭುಲಿಂಗಮಹಾಸ್ವಾಮಿಗಳು,ಸಾಯಿ ಕಿರಣ್ ಆದೋನಿ ಗುರೂಜಿ ವಹಿಸಲಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಉಪಮಹಾಪೌರರು ಡಾ. ಸಾಜಿದ್ ಸಮೀರ್, ಜಿಲ್ಲಾ ಅರೋಗ್ಯ ಅಧಿಕಾರಿ ಡಾ. ಸುರೇಂದ್ರ ಬಾಬು, ಖ್ಯಾತ ಚರ್ಮ ರೋಗ ತಜ್ಞರು ಡಾ. ಕಲ್ಲಪ್ಪ ಹೆರಕಲ್, ಡಾ. ಶರಣಪ್ಪ ಬಲ್ಲಟಗಿ, ಅನೇಕ ಗಣ್ಯರು ಆಗಮಿಸಲಿದ್ದಾರೆ.ಎಲ್ಲರನ್ನು ಮನರಂಜಿಸಲು ಖ್ಯಾತ ಹಾಸ್ಯ ಕಲಾವಿದರಾದ ಜವರಿ ಬೆಡಗಿ ನಯನಾ ಪಾಲ್ಗೊಳ್ಳಲಿದ್ದಾರೆ.ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಜಿಲ್ಲೆ ಸೇರಿ ನಗರದ ಸುತ್ತಮುತ್ತಲಿನ ಪ್ರದೇಶದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಕಲಾವಿದರಿಗೆಪ್ರೋತ್ಸಾಹಿಸಬೇಕು ಎಂದು ಕೋರಿದರು. ಈ ಸಂದರ್ಭದಲ್ಲಿ ಬಾಳಪ್ಪಪಾಟೀಲ್,ರಮೇಶನಾಡಗೌಡ ಜಂಬಲದಿನ್ನಿ,ಮರಿಲಿಂಗಪ್ಪಮಡಿವಾಳ, ಜಿ. ಚಂದ್ರಶೇಖರ ಮಡಿವಾಳ, ಶಂಕರಲಿಂಗಬೇವಿನಬೆಂಚಿ,ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಜೈ ಕರ್ನಾಟಕ ರಕ್ಷಣಾ ವೇದಿಕೆಯಿಂದ ರಾಜ್ಯೋತ್ಸವ ಆಚರಣೆ ನರಸಿಂಹ ನಾಯಕ.



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ನ,01 ತಾಲೂಕಿನ ಗೀಲ್ಲೇಸ್ಗೂರು ಗ್ರಾಮದಲ್ಲಿ ಜೈ ಕರ್ನಾಟಕ ರಕ್ಷಣಾ ವೇದಿಕೆ ಹೊಬಳಿ ಸಮೀತಿಯಿಂದ 70 ನೇ ವರ್ಷದ ಕರ್ನಾಟಕ ರಾಜ್ಯೋತ್ಸವವನ್ನು ಗೀಲ್ಲೇಸ್ಗೂರು ಗ್ರಾಮದಲ್ಲಿ ದ್ವಾವಜರೋಹಣ ಮಾಡುವ ಮೂಲಕ ಕಾರ್ಯಕ್ರಮವನ್ನು ಆಚರಿಸಿದರು. ಈ ವೇಳೆ ಜೈ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನರಸಿಂಹ ನಾಯಕ ಅವರು ಧ್ವಜಾರೋಹಣ ಮಾಡಿ ಮಾತನಾಡಿದ ಅವರು, ಗೀಲ್ಲೇಸ್ಗೂರು ಹೊಗಳಿಕೆಯನ್ನು ತಾಲೂಕುನ್ನಾಗಿ ಮೇಲ್ದರ್ಜೆಗೆ ಏರಿಸುವ ಮೂಲಕ ಸ್ಥಳೀಯರ ಕನಸು ನನಸು ಮಾಡಬೇಕು ಎಂದರು. ಜಿಲ್ಲಾಧ್ಯಕ್ಷ ಅಕ್ಕಮ್ಮ ಅವರು ಪೂಜೆಯನ್ನು ನೆರವೇರಿಸಿದರು. ನಾಡ ದೇವತೆ ಭುವನೇಶ್ವರಿ ದೇವಿ ಚಿತ್ರಪಟವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಬನ್ನಿ ಕಟ್ಟೆಯಿಂದ ಬೇಟ್ಟದ ಮಲ್ಲಿಕಾರ್ಜುನ ದೇವಸ್ಥಾನ ವರೆಗೆ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ತುಂಗಭದ್ರಾ ನಾಗೇಂದ್ರ, ಮರಿಗೌಡ ಶಿವರಾಜ್ ಬೂದುರು ತಿಮ್ಮಪ್ಪ, ಕನ್ನಡ ಅಭಿಮಾನಿಗಳು, ಕಾರ್ಯಕರ್ತರು ಇತರರು ಉಪಸ್ಥಿತರಿದ್ದರು.

# 'ಮಾತೃಹೃದಯಿ' ಗ್ರಂಥ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಲಿಂಗಸುಗೂರು ತಾಲೂಕಿನ ಸಜ್ಜಲಗುಡ್ಡದ ಶರಣಮ್ಮ ತಾಯಿಯವರ ಉಚಿತ ಪ್ರಸಾದ ನಿಲಯವು 75 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಬಳಗದ ವತಿಯಿಂದ ಆಯೋಜಿಸಲಾದ ಪ್ರಸಾದ ನಿಲಯದ ಅಮೃತ ಮಹೋತ್ಸವ ಹಾಗೂ ಜಗನ್ಮಾತೆ ಶರಣಮ್ಮ ತಾಯಿಯವರ ಪುಣ್ಯಸ್ಮರಣೋತ್ಸವದ ಅಂಗವಾಗಿ "ಮಾತೃಹೃದಯಿ" ಸ್ಮರಣ ಸಂಚಿಕೆ-ಯು ನವೆಂಬರ್ 2ರಂದು ಅದ್ದೂ-ರಿಯಾಗಿ ಬಿಡುಗಡೆಗೊಂಡಿತು. ಈ ಸಂದರ್ಭದಲ್ಲಿ ಶ್ರೀ ಸಂಗಮೇಶ್ವರ ಲಿಂಗಸ್ಥಾಪನೆಯ ಸಂವತ್ಸರದ ನಿಮಿತ್ತ ಕಾರ್ತಿಕ ಲಕ್ಷದೀಪೋತ್ಸವವೂ ಭಕ್ತಿಭಾವದಿಂದ ನಡೆಯಿತು.

ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಪತಿಗಳಾದ ಶಿವಾನಂದ ಕೆಳಗಿನಮನೆ ಅವರು ಮಾತನಾಡಿ, ಬ್ರಿಟಿಷರ ಆಳ್ವಿಕೆಯ ಕಾಲದಲ್ಲೇ ಶರಣಮ್ಮ ತಾಯಿಯವರು ತ್ರಿವಿಧದಾಸೋಹವನ್ನು ಪ್ರಾರಂಭಿಸಿ ಸಮಾಜಕ್ಕೆ ಅಸಾಧಾರಣ ಸೇವೆ ಸಲ್ಲಿಸಿದ ಪುಣ್ಯಾತ್ಮೆ ಎಂದರು. ಅವರ ತಪೋಶಕ್ತಿಯಿಂದ ಅಸಾಧ್ಯವೆನಿಸಿದ ಅನೇಕ ಕಾರ್ಯಗಳು ನೆರವೇರಿದವು, ಶರಣಮ್ಮ ತಾಯಿಯವರ ಜೀವನ ಮೌಲ್ಯಗಳು ಮತ್ತು ಮಾನವೀಯ ಗುಣಗಳು ಇಂದಿನ ಸಮಾಜಕ್ಕೆ ಮಾದರಿಯಾಗಿದೆ. ಸಜ್ಜಲಗುಡ್ಡದ ಶರಣಮ್ಮ ತಾಯಿಯವರ ಅಧ್ಯಯನ ಪೀಠವನ್ನು ಸರ್ಕಾರದ ಮಾನ್ಯತೆ ಪಡೆದು ರಚಿಸುವ ಕಾರ್ಯ-ಕ್ಕೆ ತಾವೂ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದರು. ವಸತಿ ನಿಲಯದ ಹಳೆಯ ವಿದ್ಯಾರ್ಥಿಗಳು ತಮ್ಮ ಅಮ್ಮನವರನ್ನು ನೆನೆದು ಈ ಸಂಚಿಕೆಯನ್ನು ಪ್ರಕಟಿಸಿರುವುದು ರಾಜ್ಯದಲ್ಲೇ ಮೊದಲ ಬಾರಿಗೆ ನಡೆದಿದೆ ಎಂದರು. ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ.ಕೆ. ರವಿ ಅವರು ಶರಣಮ್ಮ ತಾಯಿಯವರ ಅಧ್ಯಯನ ಪೀಠ ಸ್ಥಾಪನೆಗಾಗಿ ಸರ್ಕಾರದಿಂದ ಮಾನ್ಯತೆ ಪಡೆಯುವ ಪ್ರಯತ್ನ ನಡೆಯಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಖ್ಯಾತ ಸಾಹಿತಿಗಳಾದ ಬಿ.ಎಂ. ಹಿರೇಮಠ (ಮುದ್ದೇಬಿಹಾಳ), ಗಿರಿರಾಜ ಹೊಸಮನಿ (ಲಿಂಗಸುಗೂರು), ಎಸ್.ವಿ. ಪಾಟೀಲ್ (ಗುಂಡೂರು), ಬಸವರಾಜ ಹಂದ್ರಾಳ (ಗಂಗಾವತಿ) ಮುಂತಾದವರು ಶರಣಮ್ಮ ತಾಯಿಯವರ ಸೇವಾ ಪರಂಪರೆ ಮತ್ತು ಸಜ್ಜಲಗುಡ್ಡದ ವೈಭವದ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಸಜ್ಜಲಗುಡ್ಡದ ಹಳೆಯ ವಿದ್ಯಾರ್ಥಿಗಳು, ಭಕ್ತರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿ, ಶರಣಮ್ಮ ತಾಯಿಯವರ ತ್ಯಾಗಮಯ ಜೀವನವನ್ನು ಸ್ಮರಿಸಿದರು.

# ಗಬ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಂಬ್ಯುಲೇನ್ಸ್ ಸೇವೆ ಪ್ರಾರಂಭಕ್ಕೆ ಒತ್ತಾಯ




ರಾಯಚೂರು,ನ.3-ದೇವದುರ್ಗ ತಾಲೂಕಿನ ಗಬ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಾರ್ವಜನಿಕರ ಸೇವೆಯ108 ಅಂಬ್ಯುಲೇನ್ಸ್ ಸೇವೆ ಸ್ಥಗಿತಗೊಂಡಿದ್ದು ಹೊಸ ಅಂಬ್ಯುಲೇನ್ಸ್ ಒದಗಿಸಬೇಕೆಂದು ದೇವದುರ್ಗ ಮಾದಿಗ ಮೀಸಲಾತಿ ಹೋರಾಟ ತಾಲೂಕ ಸಮಿತಿ ಮುಖಂಡ ರಾಜಪ್ಪ ಸಿರವಾರಕರ್ ಒತ್ತಾಯಿಸಿದರು.

ಅವರಿಂದುನಗರದಸುದ್ದಿಗಾರರೊಂದಿಗೆ ಮಾತನಾಡುತ್ತಾ, ದೇವದುರ್ಗ ತಾಲೂಕಿನ ಅತಿ ದೊಡ್ಡ ಗಬ್ಬೂರು ಹೋಬಳಿ ಸುಮಾರು 40 ಹಳ್ಳಿಗಳ ಒಳಗೊಂಡಿದ್ದು ತಿಂಗಳಗಳಿಂದ ಸಾರ್ವನಿಕರಿಗೆಉಪಯೋಗವಾಗುವ108 (ಅಂಬ್ಯುಲೇನ್ಸ್) ಸ್ಥಗಿತಗೊಂಡಿದ್ದು ವೃದ್ಧರಿಗೆ, ಗರ್ಭಿಣಿಮಹಿಳೆಯರಿಗೆ ಆರೋಗ್ಯದಲ್ಲಿ ಏರು ಪೇರು ಆದರೆ ಆಸ್ಪತ್ರೆಗೆ ಬರಲು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮೀಣ ಭಾಗದ ಮಹಿಳೆಯರು 108 ಅಂಬ್ಯುಲೇನ್ಸ್ ಸ್ಥಗಿತ ಗೊಂಡಿರುವುದರಿಂದ 1 ದಿನದ ಕೂಲಿ ಖಾಸಗಿ ವಾಹನ ತೆಗೆದು ಕೊಂಡು ಆಸ್ಪತ್ರೆಗೆ ಬರುವುದು ಸಾಮಾನ್ಯವಾಗಿದೆ.108 ಅಂಬ್ಯುಲೇನ್ಸ್ 1 ವರ್ಷದಲ್ಲಿ 3-4 ಬಾರಿ ಕೆಟ್ಟು ಹೋಗುತ್ತದೆ ಸಾರ್ವನಿಕರ ಸೇವೆಗೆ ಒದಗಿಸಬೇಕಾದ ಅಂಬ್ಯುಲೇನ್ಸ್ ರಾಯಚೂರಿನ ಕೆಲವು ಗ್ಯಾ-ರೇಜ್ ಹಾಗೂ ತಾಯಿ ಮಕ್ಕಳ ಆಸ್ಪತ್ರೆಯ ಮುಂದೆ 5-6 ತಿಂಗಳಿಂದ ರಿಪೇರಿ ಮಾಡಿಸದೆ ತುಕ್ಕು ಹಿಡಿದು ನಿಂತಿವೆ.ಸಾರ್ವಜನಿಕರಿಗೆ ಉಪಯೋಗವಾಗದೆ ರಿಪೇರಿಯಾಗದೆ ನಿಂತಿರುವುದು ಸಂಬಂಧ ಪಟ್ಟ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳ ಬೇಜಬ್ದಾರಿ ಎದ್ದು ಕಾಣುತ್ತದೆ ಕೂಡಲೇ ಇವರ ಮೇಲೆ ಸೂಕ್ತ ಕಾನೂನಿನ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯಗಳು ಸಿಗದೆ ಇರುವುದರಿಂದ ಗರ್ಭಿಣಿ ಮಹಿಳೆಯರು ಸಾರ್ವಜನಿಕರು ಖಾಸಗಿ ಆಸ್ಪತ್ರೆಗಳ ಮೋರೆ ಹೋಗುತ್ತಿದ್ದಾರೆ ಅಂಬ್ಯುಲೇನ್ಸ್ ಸೇವೆ ಪುನಃ ಆರಂಭಿಸಬೇಕೆಂದು ಅಧಿಕಾರಿಗಳಿಗೆ ಸುಮಾರು ಬಾರಿ ಮನವಿ ಮಾಡಿದರು ಕ್ರಮ ಕೈಗೊಳ್ಳದಿರುವುದು ದುರಂತ, ಕೂಡಲೇ ಜಿಲ್ಲಾಧಿಕಾರಿಗಳು ಈ ವಿಷಯವನ್ನು ಗಂಭಿರವಾಗಿ ಪರಿಗಣಿಸಿ ಗಬ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ನೂತನ ಹೊಸ 108 ಅಂಬ್ಯುಲೇನ್ಸ್ ಒದಗಿಸಬೇಕು, ವೈದ್ಯಾರು, ಹಾಗೂ ಮೂಲಭೂತ ಸೌಕರ್ಯಗಳು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಶಾಂತಕುಮಾರ ಹೊನ್ನುಟಗಿ, ಮರವ ಮಲದಕಲ್, ನರಸಪ್ಪ ಎನ್.ಗಣೇಕಲ್, ಮುತ್ತುರಾಜ ಮಾತಿ ಮಾರ್ತಂಡಗನ್ನೂರು, ಬಸಲಿಂಗಪ್ಪ ಖಾನಾಪೂರ, ತುಕರಾಮ ಎನ್ ಗಣೇಕಲ್ ಉಪಸ್ಥಿತರಿದ್ದರು.

# ಓಂ ಸಾಯಿ ಧ್ಯಾನ ಮಂದಿರದಲ್ಲಿ ವೆಂಕಟ್ ಸಿಂಗ್ ರವರಿಗೆ ಸನ್ಮಾನ.



ಮಲ್ಲಮ್ಮ ನುಡಿ ವಾರ್ತೆ ರಾಯಚೂರು , ನ .3 ನಗರದ ಸಾರ್ವಜನಿಕ ಗ್ರಂಥಾಲಯ ಹತ್ತಿರ ಇರುವ ಓಂ ಸಾಯಿ ಧ್ಯಾನ ಮಂದಿರದಲ್ಲಿ ದಿನಾಂಕ 2/ .11./.2025ರಂದು ರವಿವಾರ ಸಾಯಂಕಾಲ 6:00 ಗಂಟೆಗೆ ಸಕಲ ಸದ್ಭಕ್ತರ ಪರವಾಗಿ ಸಾಯಿ ಮಂದಿರದ ಧರ್ಮಾಧಿಕಾರಿ ಗುರುಜಿ ಸಾಯಿ ಕಿರಣ್ ಆದೋನಿ ಅವರು ಕಲ್ಬುರ್ಗಿ ವಿಭಾಗದ ಮಾಹಿತಿ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡು ನಮ್ಮ ಭಾಗಕ್ಕೆ ಹೆಸರು ತಂದಿರುವಂತ ವೆಂಕಟ್ ಸಿಂಗ ರವರನ್ನು ಮತ್ತು ಅವರ ಧರ್ಮಪತ್ನಿಯಾದ ಶ್ರೀಮತಿ ನಾಗವೇಣಿ ವೆಂಕಟ್ ಸಿಂಗ್ ರವರನ್ನು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾದ ಡಾ. ದಂಡಪ್ಪಬಿರಾದಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಾ.ವೆಂಕಟ ಸಿಂಗರ್ ಅವರು ವಿದ್ಯಾರ್ಥಿ ಜೀವನದಿಂದಲೂ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡಿದ್ದರು.ಅಖಂಡ ಕೊಪ್ಪಳ ಮತ್ತು ರಾಯಚೂರ ಜಿಲ್ಲೆಯಲ್ಲಿ ಸುದ್ದಿಮೂಲ ದಿನಪತ್ರಿಕೆಯನ್ನು ಅತ್ಯಂತ ವೇಗವಾಗಿ ಪ್ರಸಾರ ಮತ್ತು ಪ್ರಚಾರಮಾಡುವಲ್ಲಿ ಇವರ ಸೇವೆ ಅನನ್ಯವಾದದ್ದು. ಜೊತೆಗೆ ಗ್ರಾಮ ಪಂಚಾಯಿತಿಯಿಂದ ಹಿಡಿದು.ತಾಲೂಕಿನ ಜಿಲ್ಲೆಯ ವಿವಿಧ ಸುದ್ದಿಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿ , ಸುದ್ದಿ ಮಾಡುವಂತ ಪ್ರವೃತಿಯನ್ನು ಹೊಂದಿದ್ದರು . ಜಿಲ್ಲೆ.ರಾಜ್ಯ.ಮಟ್ಟದಲ್ಲಿ ಪತ್ರಿಕೆಯ ಸಂಘದಲ್ಲಿ ಹಲವಾರು ಹುದ್ದೆಗಳನ್ನು ಪಡೆದುಕೊಂಡು ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಿದ್ದಾರೆ . ಚಂದನದ ದೂರ ದರ್ಶನದ ವರದಿಗಾರರಾಗಿ ಕೆಲಸವನ್ನು ಮಾಡಿದ್ದಾರೆ. ನಮ್ಮ ಭಾಗದ ಒಬ್ಬ ಪತ್ರಕರ್ತರು ಹಿರಿಯ ಪತ್ರಿಕೆಯ ವರದಿಗಾರರು ಇವತ್ತು ಕಲ್ಬುರ್ಗಿ ವಿಭಾಗಮಟ್ಟದ ಮಾಹಿತಿ ಆಯೋಗದ ಅಧ್ಯಕ್ಷರಾಗಿದ್ದು ಹೆಮ್ಮೆ ಪಡುವಂತ ವಿಷಯವೆಂದು ಡಾ. ಬಿರಾದಾರ ಹೇಳಿದರು.ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಧಾರವಾಹಿ ಮತ್ತು ಚಲನಚಿತ್ರದ ನಟರಾದ ಸಿದ್ದೇಶ್ವರ್ ವಿರಕ್ತಮಠ ಮಾತನಾಡುತ್ತಾ.ನಮ್ಮ ಕಲಾವಿದರನ್ನು ಬೆಳೆಸುವಂತಹ ಪ್ರವೃತ್ತಿಯನ್ನುವೆಂಕಟ್ ಸಿಂಗ್ ರವರು ಹೊಂದಿದ್ದಾರೆ.ನಾವು ಯಾವುದೇ ಕಾರ್ಯಕ್ರಮವನ್ನು ಮಾಡಿದರು ಅದಕ್ಕೆ ಪ್ರಚಾರ ಕೊಡುವಂತಹ ಕಾರ್ಯವನ್ನು ಮಾಡುತ್ತಿದ್ದರು. ಇಂಥವರು ಉನ್ನತ ಮಾಹಿತಿ ಆಯೋಗದಂತ ಅಧ್ಯಕ್ಷಹುದ್ದೆಯನ್ನು ಅಲಂಕರಿಸುವುದು ನಮ್ಮ ಕಲಾವಿದರಿಗೆ ಸಂತೋಷದ ವಿಷಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಶ್ರೀಮತಿ ಕವಿತಾ ಸಾಯಿಕಿರಣ ಆದೋನಿ. ವೆಂಕಟ್ ಸಿಂಗ್ ರವರ ಧರ್ಮಪತ್ನಿ ಶ್ರೀಮತಿ ನಾಗವೇಣಿ ವೆಂಕಟ ಸಿಂಗ್ ಗೋ ರಕ್ಷಣಾ ಸಮಿತಿಯ ಅಧ್ಯಕ್ಷರಾದ ಬಾಳಪ್ಪ ಪಾಟೀಲ್. ರವೀಂದ್ರ ನಾಯಕ್. ಸಂಜೀವ್ ಸಾಮ್ವೆಲ್.ಇಫಿತಿಯಾಜ ಪಟೇಲ್ ಸೇರಿದಂತೆ ಸಾಯಿ ಮಂದಿರದ ಸದ್ಭಕ್ತರು ಉಪಸ್ಥಿತರಿದ್ದರು.

# ಏಳು ಲಕ್ಷ ಟನ್ ಕಬ್ಬು ನುರಿಸುವ ಗುರಿ: ಕಲ್ಮೇಶ್ ಸರ್ವಡ್





ಬಿಕೆಎಸ್ಕೆ ಅಧ್ಯಕ್ಷ ಕಲ್ಮೇಶ್‌ಸರ್ವಡ್

**ಈವರ್ಷ ಮಳೆ ಚೆನ್ನಾಗಿರುವ ಕಾರಣ ಕಬ್ಬಿನ ಬೆಳೆ ಹೆಚ್ಚಾಗಿದೆ. ಆದ್ದರಿಂದರೈತರು ಆದಷ್ಟುಬೇಗಕಬ್ಬು ಕಳುಹಿಸಬೇಕೆಂಬ ಮನೋಭಾವ ಬಿಟ್ಟು, ಅವಧಿ ಪ್ರಕಾರ ಕಳುಹಿಸಿದರೆ ಗುಣಮಟ್ಟದ ಸಕ್ಕರೆ ಉತ್ಪಾದನೆ ಸಾಧ್ಯ. ಇದರಿಂದ ರೆ?ತರಿಗೂ ಯೋಗ್ಯ ದರ ನೀಡಲು ಅನುಕೂಲವಾಗುತ್ತದೆ.**

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಪ್ರಸಕ್ತಹಂಗಾಮಿನಲ್ಲಿ 6 ರಿಂದ 7 ಲಕ್ಷ ಟನ್ ಕಬ್ಬು ನುರಿಸುವ ಗುರಿ ಹೊಂದಲಾಗಿದೆ ಎಂದು ತಾಲೂಕಿನ ಮನ್ನಾಖೇಳ್ಳಿ ಗ್ರಾಮದ ಹೊರವಲಯದಲ್ಲಿರುವ ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆಯಲ್ಲಿ ಸೋಮವಾರ ನಡೆದ 2025-26ನೇ ಸಾಲಿನ ಕಬ್ಬು ನೂರಿಸುವ ಹಂಗಾಮಿಗೆ ಕಾರ್ಖಾನೆ ಅಧ್ಯಕ್ಷ ಕಲ್ಮೇಶ್ ಸರ್ವಡ್ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಿ ಮಾತನಾಡುತ್ತ ನುಡಿದರು. ಈ ಸಾಲಿನಲ್ಲಿ ಕಬ್ಬು ಬೆಳೆಗಾರರು ತಾವು ಬೆಳೆದಿರುವ ಎಲ್ಲ ಕಬ್ಬನ್ನು ಕಾರ್ಖಾನೆಗೆ ತರಬೇಕು. ಇದಕ್ಕಾಗಿ ಕಬ್ಬು ಕಟಾವ್ ಮಾಡುವ ಗ್ಯಾಂಗ್, ಕಬ್ಬನ್ನು ಕಾರ್ಖಾನೆಗೆ ತರುವ ವಾಹನಗಳ ವ್ಯವಸ್ಥೆ ಈಗಾಗಲೇ ಮಾಡಲಾಗಿದೆ. ರೈತರು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದರು. ಕಳೆದ ವರ್ಷ2600 ರೂಪಾಯಿ ಬೆಲೆ ನೀಡಲಾಗಿದೆ. ಈ ವರ್ಷ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಾರ್ಖಾನೆ ಅಧ್ಯಕ್ಷರುಗಳ ಸಭೆ ಜರುಗಲಿದೆ. ಈ ಸಭೆಯಲ್ಲಿ ಜಿಲ್ಲಾ ಆಡಳಿತದ ಹಾಗೂ ಆಡಳಿತ ಮಂಡಳಿ ತೀರ್ಮಾನದಂತೆ ಕಬ್ಬಿನ ಬೆಲೆ ನಿಗದಿಪಡಿಸಲಾಗುತ್ತದೆ. ಕಳೆದ ವರ್ಷ ಕಬ್ಬು ಸರಬರಾಜು ಮಾಡಿದ ರೈತರಿಗೆ 1ಕೆಜಿ ಸಕ್ಕರೆ ಪ್ರತಿ ಟನ್ ಕಬ್ಬಿಗೆ ಉಚಿತವಾಗಿ ಕೊಡಲಾಗುವುದು. ಈ ಭಾಗದ ಕಬ್ಬು ಬೆಳೆಗಾರರಿಗೆ ಪ್ರೋತ್ಸಾಹಿಸಲು ಕಬ್ಬಿನ ಬೀಜ ಸರಬರಾಜು ಮಾಡಲಾಗುವುದು. ರೈತರು ಒಳ್ಳೆಯ ಇಳುವರಿ ತೆಗೆಯುವ ಗುರಿ ಹೊಂದಿ ಕಬ್ಬು ಬೆಳೆಸುವ ಗುರಿ ಹೊಂದಬೇಕು ಎಂದರು. ನಮ್ಮ ಕಾರ್ಖಾನೆಯಿಂದ ಪ್ರತಿ ದಿನ 15 ಮೇಘವ್ಯಾಟ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ, ಕಾರ್ಖಾನೆ ಯಶಸ್ವಿಯಾಗಿ ಮುನ್ನಡಿಸಲು ರೈತರ ಸಹಕಾರ, ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದರು. ಈ ಸಂದರ್ಭದಲ್ಲಿ ಕಾರ್ಖಾನೆ ನಿರ್ದೇಶಕರಾದ ಎಸ್. ಎಲ್. ತಲವಾಡ್, ಕೆ.ಎನ್. ಪರಡಿ, ನಸೀಮ್ ಪಟೇಲ್, ಎಚ್.ಪಿ. ಸೊನ್ನದ, ಟಿ.ಕೆ. ಪಾಟೀಲ್, ಆರ್.ಆರ್. ಅಂಗಡಿ, ನಸೀಮ್ ಬಾನು ಫಾತಿಮಾ, ಆಶಾ ತಲವಾಡ್, ಪ್ರಧಾನ ವ್ಯವಸ್ಥಾಪಕ ಬಾಹುಬಲಿ ರೆಂಟಿ ಸೇರಿದಂತೆ ಸಿಬ್ಬಂದಿ ವರ್ಗದವರು, ರೈತರು ಉಪಸ್ಥಿತರಿದ್ದರು.

## ಅರಿವು ಶೈಕ್ಷಣಿಕ ಸಾಲ ಯೋಜನೆಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು : ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದಿಂದ 2025-26ನೇ ಸಾಲಿನಲ್ಲಿ ಅರಿವು ಶೈಕ್ಷಣಿಕ ಸಾಲದ ಯೋಜನೆಯಡಿಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮುಸ್ಲಿಂ, ಜೈನ್, ಸಿಖ್ಖ್, ಪಾರ್ಸಿ ಅಲ್ಪಸಂಖ್ಯಾತ ಸಮುದಾಯದ ವಿಧ್ಯಾರ್ಥಿಗಳಿಂದ ಅರಿವು ರಿನ್ಯೂವಲ್ ಸಿಇಟಿ, ನೀಟ್ ಶೈಕ್ಷಣಿಕ ಸಾಲ ಯೋಜನೆಯಡಿಯಲ್ಲಿ ಕರ್ನಾಟಕ ಪರೀಕ್ಷಾಪ್ರಾಧಿಕಾರದಿಂದ ಸಿಇಟಿ/ನೀಟ್ ನಲ್ಲಿ ಆಯ್ಕೆಯಾಗುವ (ಎಂ.ಬಿ.ಬಿ.ಎಸ್ ಎಂ.ಡಿ.ಎಸ್), ದಂತ ವೈದ್ಯಕೀಯ (ಬಿ.ಡಿಎಸ್, ಎಂ.ಡಿ.ಎಸ್) (ಬಿ.ಆಯುಷ್, ಎಂ ಆಯುಷ್), ಇಂಜಿನಿಯರಿಂಗ್,&ಟೆಕ್ನಾಲಜಿಬಿ.ಇ/ಬಿ.ಟೆಕ್,ಎಂ.ಇ.ಎಂ.ಟೆಕ್) ಬ್ಯಾಚುಲರ್ ಆಫ್ ಆರ್ಕಿಕ್ಚರ್ ಇಂತಹ ಕೋರ್ಸಗಳ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ವೆಬ್‌ಸೈಟ್ ವಿಳಾಸ: kmdcon-line.karnataka.gov.in ನಲ್ಲಿ ಡಿಸೆಂಬರ್ 03ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ನಂ.12-11-49,1 ನೇ ಮಹಡಿ ಅಮೀರ ಟ್ರೇಡಿಂಗ್ ಕಾಂಪ್ಲೆಕ್ಸ್, ಅರಬ್ ಮೋಹಲ್ಲಾ ರಾಯಚೂರು ದೂರವಾಣಿ ಸಂಖ್ಯೆ: 08532 250825ಗೆ ಸಂಪರ್ಕ ಮಾಡಬಹುದಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಸವಕಲ್ಯಾಣ:- ತಾಲೂಕಿನ ಸಿರಗಾಪೂರ ಗ್ರಾಮದ ಸಮಸ್ತ ಸದ್ಭಕ್ತರ ವತಿಯಿಂದ ಹಾರಕೂಡದ ಪೂಜ್ಯಶ್ರೀ ಡಾ. ಚೆನ್ನವೀರ ಶಿವಾಚಾರ್ಯರ 63ನೇ ಜನ್ಮದಿನೋತ್ಸವ ಹಾಗೂ ತುಲಾಭಾರ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿ-ತು. ಕಾರ್ಯಕ್ರಮಕ್ಕೂ ಮೊದಲು ಹೂವಿನಿಂದ ಅಲಂಕೃತ ಸಾರೋಟಿನ ಮೇಲೆ ಹಾರಕೂಡ ಶ್ರೀಗಳ ಅಡ್ಡ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ಜರುಗಿತು. ಹಾರಕೂಡ ಪರಮ ಪೂಜ್ಯರ ಅಸಂಖ್ಯಾತ ಭಕ್ತರು ಹುಟ್ಟು ಹಬ್ಬದಲ್ಲಿ ಭಾಗವಹಿಸಿ ದರ್ಶನ ಆಶೀರ್ವಾದ ಪಡೆದರು. (ಮಲ್ಲಮ್ಮ ನುಡಿ ಚಿತ್ರ)

# ಚಾಂಗಲೇರಾ ವೀರಭದ್ರೇಶ್ವರ ಮಹಿಮೆ ಅಪಾರ ಬೇಡಿದವರಿಗೆ ಬೇಡಿದ ವರ ನೀಡುವ ಚಾಂಗಲೇರಾ ಉದ್ಭವ ವೀರಭದ್ರೇಶ್ವರರು


**ರಾಜಕುಮಾರ ಆರ್. ಹಡಪದ**

(ಮಲ್ಲಮ್ಮ ನುಡಿ ವಾರ್ತೆ)

ಚಿಟಗುಪ್ಪ: ಕಲ್ಯಾಣ ಕರ್ನಾಟಕದ ಬೀದರ್ ಜಿಲ್ಲೆಯಲ್ಲಿರುವಷ್ಟು ಪುಣ್ಯ ಕ್ಷೇತ್ರಗಳು ಬೇರೆಡೆ ಕಾಣಸಿಗುವುದು ಅಪರೂಪ. ಸಕಲ ಜಾತಿ ಮತಗಳಿಗೆ ಸೇರಿದ ಪವಿತ್ರ ತಾಣಗಳು ಈ ಜಿಲ್ಲೆಯಲ್ಲಿವೆ ಜಾತಿ ಮತಗಳಿಗೆ ಸೇರಿದ ಎಲ್ಲರೂ ನಡೆದುಕೊಳ್ಳುವ ಪವಿತ್ರ ಕ್ಷೇತ್ರಗಳೂ ಇಲ್ಲವೆ ಶತಮಾನಗಳಿಂದ ಶ್ರದ್ಧೆಯಿಂದ ಭಜಿಸಿಕೊಳ್ಳುತ್ತ ಬಂದಿರುವ ಕ್ಷೇತ್ರಗಳಿಗೇನು ಕೊರತೆಯಿಲ್ಲ ಇಂತಹ ಪವಿತ್ರ ಹಾಗೂ ಜಾಗೃತ ಕ್ಷೇತ್ರಗಳಲ್ಲಿ ಚಿಟಗುಪ್ಪ ತಾಲೂಕಿನ ಚಾಂಗಲೇರಾದ ಶ್ರೀ ವೀರಭದ್ರೇಶ್ವರ ಕ್ಷೇತ್ರ ಪ್ರಮುಖವಾಗಿದೆ ಕನ್ನಡ ನಾಡಿನ ಮುಕುಟಮಣಿಯಾಗಿರುವ ಬೀದರ್ ಜಿಲ್ಲೆ ಸಾಧು ಸಂತರು, ಶರಣರು ಜನಿಸಿದ, ನಡೆದಾಡಿದ ಪುಣ್ಯಭೂಮಿಯಾಗಿದೆ. ಕ್ಷೇತ್ರದ ಆದಿಪತಿ ವಿ?ರಭದ್ರೆ?ಶ್ವರರು ನಾಡಿನ ಹಾಗೂ ಆಂಧ್ರ,ತೆಲಂಗಾಣ,ಮಹಾರಾಷ್ಟ್ರಸೇರಿ ದೇಶ್ಯಾದಂತ ಅಪಾರ ಭಕ್ತವೃಂದವನ್ನು ಹೊಂದಿದೆ.

ಚಾಂಗಲೇರಾ ಗ್ರಾಮದ ವಿ?ರಭದ್ರೆ?ಶ್ವರರ ಜಾತ್ರಾಮಹೋತ್ಸವ ಆರಂಭಗೊಂಡಿದೆ. ಹಲವು ದಿನಗಳಿಂದ ವಿ?ರಭದ್ರೆ?ಶ್ವರರಿಗೆ ವಿಶೇಷ ಪೂಜಾ ನೆರವೇರಿಸುವ ಕಾರ್ಯಗಳು ಆರಂಭವಾಗಿವೆ. ಚಾಂಗಲೇರಾದಲ್ಲಿ ಬೇಡಿ ಬರುವ ಭಕ್ತಾದಿಗಳ ಕಷ್ಟಗಳನ್ನು ಪರಿಹರಿಸಿ ಇಷ್ಟಾರ್ಥಗಳನ್ನು ನೀಡಿ ಹರಸುವ ಜಾಗೃತ ಪೀಠವಾಗಿದೆ. ಕೋಟ್ಯಂತರ ಭಕ್ತರ ಆರಾಧ್ಯದೇವರಾಗಿರುವ ವಿ?ರಭದ್ರೆ?ಶ್ವರರು ಪ್ರತಿ ದೀಪಾವಳಿ ಅಮಾವಾಸ್ಯೆಯ ಎರಡನೇ ಮಂಗಳವಾರದಿಂದ ಭವ್ಯ ಜಾತ್ರೆ ಜರುಗುತ್ತದೆ. ಇಲ್ಲಿನ ಪುಷ್ಕರಣಿಯಲ್ಲಿ ಸ್ನಾನ ಮಾಡಿದರೆ ಭವರೋಗಗಳು ದೂರವಾಗುವುದೆಂಬ ಅಚಲ ನಂಬಿಕೆಯಿಂದ ವಿ?ರಭದ್ರೆ?ಶ್ವರರ ದರ್ಶನಕ್ಕೆ ಮೊದಲು ಇಲ್ಲಿ ಸ್ನಾನ ಮಾಡಿ ಮಡಿಯಿಂದ ದರ್ಶನ ಪಡೆದುಕೊಳ್ಳುವುದು ಇಲ್ಲಿನ ಭಕ್ತರ ವಾಡಿಕೆಯಾಗಿದೆ.

ಭವ್ಯ ಇತಿಹಾಸ: ಹಿಂದೆ ಕಲಿಯುಗದ ಪೂರ್ವದಲ್ಲಿ ದಕ್ಷ ಪ್ರಜಾಪತಿ ದಕ್ಷ ಯಜ್ಞ ಮಾಡಲು ಯೋಜಿಸಿ ಎಲ್ಲ ದೇವಾನುದೇವತೆಗಳಿಗೆ ಆಹ್ವಾನ ಕೊಡುತ್ತಾರೆ. ಆದರೆ, ಉದ್ದೆ?ಶಪೂರ್ವಕವಾಗಿಯೇ ಶಿವ ಪಾರ್ವತಿಯರನ್ನು ಆಹ್ವಾನಿಸಿರುವುದಿಲ್ಲವಂತೆ. ಆದರೆ, ದಾಕ್ಷಾಯಣಿ ತವರು ಪ್ರಿ?ತಿಯಿಂದ ತಾವು ಯಜ್ಞಕ್ಕೆ ಹೋಗುವುದಾಗಿ ಹಠ ಹಿಡಿಯುತ್ತಾಳೆ. ಶಿವನು ಎಷ್ಟು ಪರಿಪರಿಯಾಗಿ ಹೇಳಿದರೂ ದಾಕ್ಷಾಯಣಿ ತನ್ನ ತವರು ಮನೆಯ ಪ್ರಿ?ತಿಯಿಂದ ಹೋಗಲು ಶಿವನಿಂದ ಅಪ್ಪಣೆ ಕೇಳುತ್ತಾಳೆ. ಆಗ ಶಿವನು ಮನಸ್ಸಿಲ್ಲದಿದ್ದರೂ ಕಳಿಹಿಸುತ್ತಾನೆ. ಆಗ ರಾಜನ ಆಸ್ಥಾನದಲ್ಲಿ ತಮ್ಮವರನ್ನು ಮಾತನಾಡಿಸುತ್ತಾಳೆ. ಆದರೆ, ಯಾರೂ ಮಾತನಾಡುವುದಿಲ್ಲ. ದಕ್ಷ ಪ್ರಜಾಪತಿಯೊಬ್ಬ ಪಾರ್ವತಿಯನ್ನು ಮೊದಲಿಗೆ ಮಾತನಾಡಿಸಿ



ಅಪಮಾನಿಸುತ್ತಾನೆ. ಇದರಿಂದ ದುಃಖಿತಳಾಗಿ ಪಾರ್ವತಿದೇವಿಯೂ ಯಜ್ಞಕುಂಡದಲ್ಲಿ ಹಾರುತ್ತಾಳೆ. ಇದು ಅರಿತ ಪರಶಿವನು ವಿ?ರಾವೇಶದಿಂದ ಅಜಾನುಬಾಹುವಾದ ಕೈಗಳಿಂದ ರುದ್ರ ನರ್ತನ ಮಾಡಿ ತನ್ನ ಜಡೆಯನ್ನು ಎಸೆಯುತ್ತಾನೆ. ಆಗ ಹುಟ್ಟಿ ಬಂದವನೇ ಶ್ರಿವಿ?ರಭದ್ರಸ್ವಾಮಿ ಎಂಬ ಪ್ರತೀತಿ ಇದೆ. ಚಾಂಗಲೇರಾದಲ್ಲಿ ವಿ?ರಭದ್ರೆ?ಶ್ವರರ ನೆಲೆ: ಸದ್ಯ ಗರ್ಭ ಗುಡಿಯಲ್ಲಿ ಪೂಜೆಗೊಳ್ಳುವ ವಿ?ರಭದ್ರಸ್ವಾಮಿ ಚಾಂಗಲೇರಾದಲ್ಲಿ ನೆಲೆಸಿದ್ದು ಇಲ್ಲಿನ ಸ್ಥಳ ಪುರಾಣದಲ್ಲಿದೆ. ಸಿದ್ದಪ್ಪ ಎಂಬ ರೈತ ತನ್ನ ಪತ್ನಿ ನಾಗಮ್ಮಳ ಜೊತೆಗೆ ಕೃಷಿ ಕಾಯಕ ಮಾಡುತ್ತಿದ್ದ. ಹೊಲದಲ್ಲಿ ಉಳಿಮೆ ಮಾಡುವಾಗ ನೇಗಿಲಿಗೆ ಭಾರ ಕಲ್ಲು ಬಳಸುತ್ತಿದ್ದ ನಂತರ ಪಕ್ಕದಲ್ಲಿ ಎಸೆದು ಹೋಗುತ್ತಿದ್ದ. ಬೆಳಗ್ಗೆ ರೈತ ಬಂದು ನೋಡಿದಾಗ ಆ ಶಿಲೆ ಮೊದಲಿನ ಸ್ಥಾನದಲ್ಲಿಯೇ ಇರುತಿತ್ತು. ಈ ವಿಸ್ಮಯ ರೈತನಿಗೆ ತಿಳಿಯಲಿಲ್ಲ. ಈ ಸಮಯದಲ್ಲಿ ದೇವಗಿರಿಯಲ್ಲಿ ಗುರುಲಿಂಗ ಮುನಿಪುಂಗವರು ತಪಸ್ಸುಗೈಯ್ಯುತ್ತಿದ್ದರು. ತನ್ನ ಶಿಷ್ಯೊ?ತ್ತಮ ಸಂಗ್ರಾಮ ದೇಶಮುಖ ದೇವಿಯ ಆರಾಧನೆಯಲ್ಲಿ ತೆ-ೂಡಗಿದ. ದೇವಿಯ ಭಕ್ತಿಯಿಂದ ಹರಸಿ ನೂರಾರು ಹಳ್ಳಿಗಳ ರಾಜನಾಗಿದ್ದ ಸಂಗ್ರಾಮನ ಕನಸ್ಸಿನಲ್ಲಿ ದೇವಿ ಬಂದು ಭಕ್ತ ಸಂಗ್ರಾಮ ಇಲಿಂದ ನಾಲ್ಕು ಕೂಗಳತೆಯಲ್ಲಿ ನನ್ನ ಮಂದಿರವಿದೆ. ಅಲ್ಲಿ ನನ್ನ ಪತಿ ವಿ?ರಭದ್ರದೇವರು ಇರಬಯಸಿದ್ದು, ಅವರನ್ನು ಹುಡುಕಿ ತಂದು ಪ್ರತಿಷ್ಠಾಪಿಸುವಂತೆ ಹೇಳುತ್ತಾಳೆ. ನಂತರ ವಿ?ರಭದ್ರೆ?ಶ್ವರರು ಜಂಗಮರೂಪದಲ್ಲಿ ಕಾಣಿಸಿಕೊಂಡು ಭಕ್ತ ಸಂಗ್ರಾಮನೇ ನನ್ನ ರೈತನೊಬ್ಬ ಹೊಲದಲ್ಲಿ ನೇಗಿಲಿಗೆ ಕಟ್ಟಿ ಹೊಲ ಹೊಡೆಯುತ್ತಿದ್ದು, ಆ ಮುಗ್ಧ ರೈತನಿಗೆ ಆ ಶಿಲೆಯಲ್ಲಿ ನಾನಿರುವುದು ಗೊತ್ತಿಲ್ಲ. ನೀನು ತಂದು ಮೂರ್ತಿ ಪ್ರತಿಷ್ಠಾಪಿಸು ಎಂದು ಹೇಳಿ ಅದೃಶ್ಯರಾಗುತ್ತಾರೆ. ಸಂಗ್ರಾಮ ದೇಸಾಯಿ ಅವರು ಗುರುಲಿಂಗ ಮುನಿಪುಂಗವರೊಂದಿಗೆ ಶಿಲೆಯ ಹುಡುಕಾಟದಲ್ಲಿ ತೊಡಗಿದ್ದಾಗ ರೈತ ಸಿದ್ಧಪ್ಪನ ಹೊಲದಲ್ಲಿನ ಶಿಲೆ ಇರುವುದನ್ನು ಕಂಡು ಭಕ್ತಿಭಾವದಿಂದ ಶಾಸ್ತ್ರೊ?ಕ್ತವಾಗಿ ಪೂಜೆಗೈದು ಪ್ರತಿಷ್ಠಾಪಿಸಲಾಗಿದೆ ಎಂದು ಇಲ್ಲಿನ ಸ್ಥಳ ಪುರಾಣದಲ್ಲಿ ಹಾಗೂ ಚಾಂಗಲೇರಾ ಚಿಟಗುಪ್ಪ ಮಠದ ಪೀಠಾಧಿಪತಿಗಳು ಚಾಂಗಲೇರಾ ವಿ?ರಭದ್ರೆ?ಶ್ವರ ಪುರಾಣದಿಂದ ತಿಳಿದು ಬರುತ್ತದೆ.

## ವಿವಿಧ ಕಾರ್ಯಕ್ರಮಗಳು

**4ರಂದು ಬೆಳಗ್ಗೆ 6ರಿಂದ ಚಿಟಗುಪ್ಪದ ಶ್ರೀ ಗುರುಲಿಂಗ ಶಿವಾಚಾರ್ಯರ ನೇತೃತ್ವದಲ್ಲಿ ದೇವರಿಗೆ ವಿಶೇಷಪೂಜೆ.ನಂತರ ಗುರುಗಳಿಂದ ವೇದ ಗೋಷಣೆಗಳೊಂದಿಗೆ ಅಗ್ನಿ ಪೂಜೆ ನೆರವೇರುವುದು. ದನಗಳ ಪ್ರದರ್ಶನ ಹಾಗೂ ಸಂಜೆ ಪಲ್ಲಕ್ಕಿ ಉತ್ಸವ, ರಾತ್ರಿ ಶಿವಾನುಭವಗೋಷ್ಠಿ, ಸಂಗೀತ ದರ್ಬಾರ ಕಾರ್ಯಕ್ರಮ ಜರುಗುವವು.05ರಂದು ಬೆಳಗ್ಗೆ ಅಗ್ನಿ ಪ್ರವೇಶ (ಅಗ್ಗಿ ತುಳಿಯುವುದು), ಸಂಜೆ ರಥೋತ್ಸವ ನೆರವೇರಲಿದೆ. 6ರಂದು ಬೆಳಗ್ಗೆ 8 ರಿಂದ 12ರ ವರೆಗೆ ಮಹಿಳೆಯರ ಮತ್ತು ಪುರುಷರ ಬಿರಿದು ಜಂಗಿ ಕುಸ್ತಿ ನಡೆಯಲಿವೆ. 07ರಂದು ಸಂಜೆ ದೇವರ ಪಲ್ಲಕ್ಕಿ ಮೆರವಣಿಗೆ ನಿರ್ಗಮನ.**

# ಕನ್ನಡ ಬದುಕಿನ ಭಾಗವಾಗಲಿ : ಸತ್ಯಾನಂದ ಪಾತ್ರೋಟ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.3-ಕನ್ನಡಬದುಕಿನ ಭಾಗವಾಗಬೇಕು, ಪ್ರಸ್ತುತ ಆಂಗ್ಲ ಭಾಷೆಯ ವ್ಯಾಮೋಹ ಎಲ್ಲ ಭಾಗದಲ್ಲೂ ಪಸರಿಸುತ್ತಿದೆ. ಮಾತೃ ಭಾಷೆ ನೀಡಿದಷ್ಟು ಆತ್ಮ ಸಂತೋಷ ಅನ್ಯ ಭಾಷೆಗಳು ನೀಡಲಾರವು. ಕನ್ನಡವಿದ್ದರೆ ನಾವು ಉಳಿಯಲು, ಬೆಳೆಯಲು ಸಾಧ್ಯವಾಗುತ್ತದೆ ಎಂದು ಖ್ಯಾತ ಕವಿ ಡಾ.ಸತ್ಯಾನಂದ ಪಾತ್ರೋಟ ಹೇಳಿದರು.

ಕನ್ನಡ ರಾಜ್ಯೋತ್ಸವ 2025 ಅಂಗವಾಗಿ ಕರ್ನಾಟಕ ಬಯಲಾಟ ಅಕಾಡೆಮಿ ಹಾಗೂ ಸರಕಾರಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು ಸಹಯೋಗದಲ್ಲಿ ಆಯೋಜಿಸಲಾಗಿದ್ದ ದೊಡ್ಡಾಟ, ತೊಗಲು ಗೊಂಬೆಯಾಟ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಮಾತೃಭಾಷೆ ವ್ಯಕ್ತಿಯಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಜಾತಿ ವಲಯಗಳನ್ನು ಮೀರಿ ಮಾತೃಭಾಷೆಯನ್ನು ಪ್ರೀತಿಸಿ, ಕನ್ನಡವೇ ನಮ್ಮ ಜಾತಿ ಕನ್ನಡವೇ ನಮ್ಮ ಧರ್ಮ ಎನ್ನುವಂತಾಗಬೇಕಿದೆ ಎಂದರು.

ನಾಡು ಸರ್ವ ಜನಾಂಗದ ಶಾಂತಿಯ ತೋಟ. ಸರ್ವ ಜನಾಂಗದವರ ಅಭಿವೃದ್ಧಿಯಾಗಬೇಕು. ಎಲ್ಲ ಸಮುದಾಯದವರು ಪರಸ್ಪರ ಪ್ರೀತಿಸುವಂತಿರಬೇಕು. ಅಲ್ಪಸಂಖ್ಯಾತರೊಂದಿಗೆ ಬಹುಸಂಖ್ಯಾತರು ಬೆರೆಯುವಂತಾಗಬೇಕು. ಕನ್ನಡ ಸಾಹಿತ್ಯಕ್ಕೆ ಅನ್ಯ ಧರ್ಮಿಯರು ಕೂಡ ಕೊಡುಗೆ ನೀಡಿದ್ದಾರೆ ಇದಕ್ಕೆ ಸಂತ ಶಿಶುನಾಳ ಶರೀಫರು ಉತ್ತಮ ಉದಾಹರಣೆ ಎಂದರು.

ವಿಶೇಷ ಉಪನ್ಯಾಸ ನೀಡಿದ ಸಂಸ್ಕೃತಿ ಚಿಂತಕ ಡಾ.ಸರ್ಜಾಶಂಕರ ಹರಳಿಮಠ, ಕನ್ನಡ ಸಾಹಿತ್ಯ ಅದು ಬದುಕಿನ ಭಾವನೆ. ಕನ್ನಡ ಸಾಹಿತ್ಯ ಕೇವಲ ಬರಹ ರೂಪಕ್ಕೆ ಸೀಮಿತವಾಗದೆ ಹೃದಯದ ಧ್ವನಿಯಾಗಿದೆ. ಕೆ.ಶಿವರಾಂ ಕಾರಂತರ ಚೋಮನ ದುಡಿ ಕಾದಂಬರಿ ಉಳುವವನೇ ಭೂಮಿಯ ಒಡೆಯ ಕಾಯ್ದೆ ಜಾರಿಗೆ ಪ್ರೇರಣೆಯಾಗಿದೆ. ಪಂಪ, ರನ್ನ, ಕುಮಾರವ್ಯಾಸ, ದ.ರಾ. ಬೇಂದ್ರೆ, ಕುವೆಂಪು ಮುಂತಾದ ಮಹನೀಯರು ಸಾಹಿತ್ಯ ಕ್ಷೇತ್ರದಲ್ಲಿ ಉಳಿಯುವಂತೆ ಮಾಡಿದ್ದೆ ಕನ್ನಡ ಭಾಷೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ. ಕೆ.ಆರ್.ದುರ್ಗಾದಾಸ ಮಾತನಾಡಿ, ಕಲೆ ಸಾಹಿತ್ಯ ಕೇವಲ ಒಂದು ಜಾತಿಗೆ ಅಥವಾ ವರ್ಣಕ್ಕೆ ಸೀಮಿತವಾಗಿಲ್ಲ. ದೊಡ್ಡಾಟ, ಬಯಲಾಟಗಳೆಲ್ಲ ಸಂತ್ರಸ್ತರ ಧ್ವನಿಯಾಗಿದ್ದವು. ಆದರೆ ಆಧುನಿಕತೆಯ ಭರಾಟೆಯಲ್ಲಿ ಕಲೆಗಳು ಮುಳುಗುತ್ತಿವೆ. ಇಂದು ಕನ್ನಡ ನಾಡಿನ ಕಲೆಗಳನ್ನು ಸಂರಕ್ಷಣೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿಯು ದೊಡ್ಡಾಟ, ಬಯಲಾಟ, ಪಾರಿಜಾತ ದಂತಹ ಕಲೆಗಳ ಪರಂಪರೆಯನ್ನು ಮುಂದಿನ ಪೀಳಿಗೆಯತ್ತ ಕೊಂಡೊಯ್ಯುತ್ತಿದೆ, ಎಂದರು.

ಬಾದಾಮಿ ತಾಲೂಕಿನ ಕಾಕನೂರ ದುರ್ಗಾ ಶಕ್ತಿ ಕಲಾ ಸಂಘದ ಕಲಾವಿದರು ಪ್ರದರ್ಶಿಸಿದ ತೊಗಲು ಗೊಂಬೆಯಾಟ ಜನಮನ ಸೂರೆಗೊಂಡರೆ, ಹುಬ್ಬಳ್ಳಿಯ ಸಂಕಲ್ಪ ಪ್ರದರ್ಶಕ ಕಲೆಗಳ ಹಾಗೂ ಸಂಶೋಧನಾ ಕೇಂದ್ರದ ವಿದ್ಯಾರ್ಥಿಗಳಾದ ವರ್ಷ ಬೀಳಗಿ, ಸೌಮ್ಯಾ ಹರಿಶೆಟ್ಟರ, ವಿನುತ ಹಿರೇಮಠ, ಜಾನ್ವಿ ಅಚ್ಚುನರಮಠ, ಸುಷ್ಮಿತಾ ಸುರಪುರ, ಸ್ವಾತಿ ಬಡಿಗೇರ, ಸೌಜನ್ಯಾ ಅತಡ್ಕರ, ಪಾವನಿ ಪಾಟೀಲ, ದೃತಿ ಬಗಲಿ ತಮ್ಮ ಮನೋಜ್ಞ ಅಭಿನಯದ ಮೂಲಕ ಪ್ರದರ್ಶಿದ ದೊಡ್ಡಾಟದ ಗಿರಿಜಾ ಕಲ್ಯಾಣ ಪ್ರಸಂಗವು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು.

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಶಿವಾನಂದ ಪಟ್ಟಣಶೆಟ್ಟಿ, ಬಯಲಾಟ ಅಕಾಡೆಮಿ ರಿಜಿಸ್ಟ್ರಾರ್ ಕಸ್ತೂರಿ ಪಾಟೀಲ, ಸದಸ್ಯ ಲಕ್ಷ್ಮಣ ದೇಸಾರಟ್ಟಿ, ನವನಗರ ಸರಕಾರಿ ಅಲ್ಪ ಸಂಖ್ಯಾತರ, ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿನ ಪ್ರಾಚಾರ್ಯ ಎಂ.ಎನ್.ಗರಗ, ಅಬ್ದುಲ್ ಕಲಾಂ ವಸತಿ ಶಾಲೆ ಪ್ರಾಚಾರ್ಯ ಆನಂದ ದದ್ದೂರ, ಇತಿಹಾಸ ಉಪನ್ಯಾಸಕ ಕೇಶವ ಸಾಲಮಂಟಿ ಹಾಗೂ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು. ರಾಜಶೇಖರ ಬುಳ್ಳಾ ನಿರೂಪಿಸಿದರು. ಶಿವಪ್ಪ ಬಿಂಗಿ ವಂದಿಸಿದರು.

# ಸ್ಥಾಯಿ ಸಮಿತಿ ಚುನಾವಣೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ನ.03: ಬಳ್ಳಾರಿ ಮಹಾನಗರ ಪಾಲಿಕೆಯ 24ನೇ ಅವಧಿಯ ಮೇಯರ್, ಉಪ ಮೇಯರ್ ಹಾಗೂ ಸ್ಥಾಯಿ ಸಮಿತಿ ಸ್ಥಾನಗಳಿಗೆ ನವೆಂಬರ್ 15 ರಂದು ಮಧ್ಯಾಹ್ನ 12.30 ಕ್ಕೆ ಪಾಲಿಕೆಯ ಶ್ರೀ ಕೃಷ್ಣದೇವರಾಯ ಸಭಾಂಗಣದಲ್ಲಿ ಕಲಬುರಗಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಚುನಾವಣೆ ನಡೆಸಲು ನಿಗದಿಪಡಿಸಲಾಗಿದೆ ಎಂದು ಬಳ್ಳಾರಿ ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ ಅವರು ತಿಳಿಸಿದ್ದಾರೆ.

# ಅಕ್ಕ ಪಡೆಗೆ ಗುತ್ತಿಗೆ ಆಧಾರದಡಿ ಮಹಿಳೆಯರ ಆಯ್ಕೆ: ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ನ.03:ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅಕ್ಕ ಪಡೆ ಯೋಜನೆಯಡಿ ಗುತ್ತಿಗೆ ಆಧಾರದ ಮೇರೆಗೆ 05 ಮಹಿಳಾ ಎನ್‌ಸಿಸಿ ಕೆಡೆಟ್ಸ್ ಅಭ್ಯರ್ಥಿಗಳ ಆಯ್ಕೆಗಾಗಿ ಅರ್ಹರಿಂದ ಆಹ್ವಾನಿಸಲಾಗಿದೆ.

ಅಪಾಯದಲ್ಲಿರುವ ಅಥವಾ ಸಂಕಷ್ಟದಲ್ಲಿರುವ ದುರ್ಬಲ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ ನೀಡುವುದು ಅಕ್ಕ ಪಡೆ ಯೋಜನೆಯ ಪ್ರಾಥಮಿಕ ಉದ್ದೇಶವಾಗಿದೆ. ಸಹಾನುಭೂತಿ ಮತ್ತು ಸಮುದಾಯ ಸೇವೆಯಲ್ಲಿ ಚಾಲಿತವಾಗಿರುವ ಅಕ್ಕ ಪಡೆ ಸಮಾಜದಲ್ಲಿ ಸ್ಪಂದಿಸುವ ಸುರಕ್ಷತಾ ಘಟಕವಾಗಿ ಮತ್ತು ಶೈಕ್ಷಣಿಕ ಶಕ್ತಿಯಾಗಿ ಕಾರ್ಯನಿರ್ವಹಿಸಬಲ್ಲವರು ಅರ್ಹರಾಗಿರುತ್ತಾರೆ.

**ಆಯ್ಕೆ ಮಾನದಂಡ:**

ಎನ್‌ಸಿಸಿ 'ಸಿ' ಸರ್ಟಿಫಿಕೇಟ್ ಹೊಂದಿರುವ 35-45 ವಯೋಮಾನದ ಮಹಿಳಾ ಎನ್‌ಸಿಸಿ ಕೆಡೆಟ್ಸ್ ಅರ್ಹರು. ಎಸ್‌ಎಸ್‌ಎಲ್‌ಸಿ, ಪಿಯುಸಿ, ಯಾವುದೇ ಪದವಿ ಪಾಸಾಗಿರಬೇಕು. ದೈಹಿಕ ಸದೃಢತೆ ಹೊಂದಿರಬೇಕು.

ಸ್ಥಳೀಯ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು. ಉತ್ತಮ ನಡವಳಿಕೆ ಸಂವಹನ ಕಲೆ, ಕಾರ್ಯದಕ್ಷತೆ ಉಳ್ಳವರಾಗಿರಬೇಕು. ಶಿಫ್ಟ್ ವೇಳೆ ಕೆಲಸ ನಿರ್ವಹಿಸಲು ಸಿದ್ಧರಿರಬೇಕು (7 ರಿಂದ ಸಂಜೆ 8 ರವರೆಗೆ 2 ಪಾಳಿಗಳಲ್ಲಿ ಅಂದರೆ ಬೆಳಿಗ್ಗೆ 7 ರಿಂದ ಮಧ್ಯಾಹ್ನ 2 ರವರೆಗೆ ಮತ್ತು ಮಧ್ಯಾಹ್ನ 2 ರಿಂದ ರಾತ್ರಿ 8 ರವರೆಗೆ).ಗುತ್ತಿಗೆ ಅವಧಿ 11 ತಿಂಗಳಿಗೆ ಸೀಮಿತವಾಗಿದ್ದು, ಕರ್ತವ್ಯ ನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ ಸೇವೆಯನ್ನು ಮುಂದುವರೆಸಲಾಗುವುದು.ಆಸಕ್ತ ಮಹಿಳಾ ಎನ್‌ಸಿಸಿ ಮಹಿಳಾ ಕೆಡೆಟ್ಸ್‌ಗಳು ನ.03 ರಿಂದ 10 ರ ವರೆಗೆ ನಗರದ ವಾಲ್ಮೀಕಿ ವೃತ್ತ(ಎಸ್.ಪಿ ವೃತ್ತ)ದ ಬಳಿಯ ದೇವಿನಗರದ ಸ್ತ್ರೀಸೇವಾನಿಕೇತನ ಆವರಣದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸ್ವ-ವಿವರವುಳ್ಳ ಬಯೋಡೇಟಾ, ಇತ್ತೀಚಿನ ಭಾವಚಿತ್ರ, ನಿಗದಿಪಡಿಸಿದ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು, ಎನ್‌ಸಿಸಿ 'ಸಿ' ಸರ್ಟಿಫಿಕೇಟ್ ಪ್ರಮಾಣ ಪತ್ರ, ಸೇವಾ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಸೇರಿದಂತೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ದೃಢೀಕರಿಸಿ ಸಲ್ಲಿಸಬೇಕು.ಹೆಚ್ಚಿನ ಮಾಹಿತಿಗಾಗಿ ಮೊ.7353901862 ಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಧರ್ಮದ ಕಾರ್ಯಕ್ಕೆ ಭಕ್ತರ ಸಹಕಾರ ಅವಶ್ಯ: ಮಹಾದೇವ ಶ್ರೀ



ಮಲ್ಲಮ್ಮ ನುಡಿ ವಾರ್ತೆ

ಕುಕನೂರ:ಸರ್ವ ಜನರ ಕಲ್ಯಾಣಕ್ಕಾಗಿ ಶರಣಬಸವೇಶ್ವರು ತಮ್ಮ ಜೀವನವನ್ನು ನಡೆಸಿದರು ಎಂದು ತಳಕಲ್ ಕುಕನೂರ ಶ್ರೀಮಠದ ಪೂಜ್ಯ ಮಹದೇವ ಸ್ವಾಮೀಜಿ ಹೇಳಿದರು.

ಅವರು ಕುಕನೂರ ತಾಲೂಕಿನ ತಳಕಲ್ ಗ್ರಾಮದ ಮುಂಡರಗಿ ಅನ್ನದಾನಿಶ್ವರ ಶಾಖಮಠದ ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಹಮ್ಮಿಕೊಂಡ ಕಲ್ಬುರ್ಗಿ ಶರಣಬಸವೇಶ್ವರ ಪುರಾಣವನ್ನ ಉದ್ಘಾಟಿಸಿ ಮಾತನಾಡುತ್ತಾ ಶರಣರ ನಡೆ-ನುಡಿಗಳು ಮಾನವ ಜೀವನಕ್ಕೆ ಮಾರ್ಗದರ್ಶನ ಶಕ್ತಿಯಾಗಿದೆ. ಗುರುತತ್ವ, ಸತ್ಯ, ತಾಳ್ಮೆ, ಪ್ರೀತಿ, ಸಹನೆ, ಸಮಾನತೆ, ದೈವಭಕ್ತಿ ಇವುಗಳ ಸಮ್ಮಿಶ್ರಣವೇ ಶರಣರ ಬದುಕಿನ ಮೂಲಾಧಾರ. ಶರಣರು ತಮ್ಮ ಜೀವನವನ್ನು ಕೇವಲ ತ್ಯಾಗಮಯವನ್ನಾಗಿಸದೆ, ಸಮಾಜಮುಖಿ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಿನ ಮಾದರಿಯನ್ನು ತೋರಿಸಿದ್ದಾರೆ ಎಂದರು.

ಬೆಟಗೇರಿ ಯುವ ಮುಖಂಡ ಬಸವರೆಡ್ಡಿ ಮಾತನಾಡಿ ತಳಕಲ ಗ್ರಾಮದ ಜನರು ಧರ್ಮವಂತರು, ಅನ್ನದಾನಿಶ್ವರ ಮಠದ ಅಭಿವೃದ್ಧಿಯನ್ನು ಕೇವಲ ಒಂದೇ ವರ್ಷದಲ್ಲಿ ಅತ್ಯಂತ ಭಕ್ತಿಯಿಂದ ಮಾಡಿದ ಭಕ್ತರ ಕಾರ್ಯ ಶ್ಲಾಘನೀಯ, ನಾವು ಧರ್ಮ ಮತ್ತು ಸದಾಚಾರವನ್ನು ಅನುಸರಿಸಿದರೆ, ಅದು ನಮ್ಮನ್ನು ಸಂಕಷ್ಟಗಳಿಂದ ರಕ್ಷಿಸುತ್ತದೆ ಎಂದರು.

ಪುರಾಣ ಪ್ರವಚನಕಾರ ಕುಮಾರ ಶಾಸ್ತ್ರಿ ತೊಳಲಿ ಮಾತನಾಡಿ ತಳಕಲ್ ಗ್ರಾಮದ ಸದ್ಭಕ್ತರು ಶರಣಬಸವೇಶ್ವರರ ಪುರಾಣವನ್ನ ಪ್ರಾರಂಭ ಮಾಡಿದ್ದು ತುಂಬಾ ಸಂತೋಷ ಸಂಗತಿ ಈ ಗ್ರಾಮದಲ್ಲಿ ಹಲವಾರು ಪುರಾಣಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದಂತ ಶಕ್ತಿ ಗ್ರಾಮಕ್ಕಿದೆ, ಶರಣರ ಪುರಾಣವನ್ನ ಕೇಳುವುದರಿಂದ ಮಾನಸಿಕ ನೆಮ್ಮದಿ ಸಿಗಲು ಸಾಧ್ಯ, ಭಕ್ತರು 21 ದಿನಗಳ ಕಾಲ ನಡೆಯುವ ಈ ಪುರಾಣದಲ್ಲಿ ಪ್ರತಿನಿತ್ಯ ಭಾಗವಹಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಹಿರಿಯರಾದ ಶಶಿಧರಯ್ಯ ಅರಲೆಲೆಮಠ, ಹಂಚ್ಯಾಲಪ್ಪ ಚಿಲವಾಡಿಗಿ, ಪಕ್ಕಪ್ಪ ಮುರಿಗಿ, ಮುದಿಯಪ್ಪ ಯೊಗೇಮ್ಮನವರ, ಮಲ್ಲಪ್ಪ ಬಂಗಾರಿ, ಶಿವಪ್ಪ ಬ್ಯಾಳಿ, ಶೇಖಪ್ಪ ಕರ್ಜಗಿ, ಪಕ್ಕಪ್ಪ ಅಳವಂಡಿ, ಮಲ್ಲಯ್ಯ, ರಾಮಣ್ಣ ನಿಟ್ಟಾಲಿ, ಬೆಟಗೇರಿ ಗ್ರಾಮದ ಮುತ್ತಯ್ಯ ಹಿರೇಮಠ, ಸೋಮಪ್ಪ ಮತ್ತೂರು, ಪ್ರಭು ಶಿವಸಿಂಪರ, ಬಸವರಾಜ ಕುರಹಟ್ಟಿ, ವೆಂಕರಡ್ಡಿ ಕವಲೂರ ಮತ್ತು ಇತರರು ಇದ್ದರು.

# 70ನೇ ಕನ್ನಡ ರಾಜ್ಯೋತ್ಸವ ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ತಾಲೂಕಿನ ಡಿಗ್ಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಆಚರಣೆ ಮಾಡಲಾಯಿತು.

ಮುಖ್ಯ ಅತಿಥಿಯಾಗಿ ದೇವೇಂದ್ರ ಪಾಟೀಲ, ಕನ್ನಡಾಂಬೆ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು, ಕನ್ನಡ ನಾಡು, ಭಾಷೆ ಮತ್ತು ಜಲಕ್ಕೆ ತನ್ನದ ಆದ ಇತಿಹಾಸ ಇದೆ. ಕನ್ನಡ ಒಕ್ಕೂಟ ಹೋರಾಟಗಾರರು ಕನ್ನಡ ಉಳಿಸುವತ್ತ ಕಾರ್ಯ ಮಾಡುತ್ತಿವೆ ಎಂದು ಹೇಳಿದರು. ಕರ್ನಾಟಕ ರಕ್ಷಣೆ ವೇದಿಕೆ ನೂತನ ಗ್ರಾಮ ಘಟಕದ ಅಧ್ಯಕ್ಷರಾದ ಸಂಗಮನಾಥ ಬಿರಾದಾರ ಮಾತನಾಡಿ, ಕನ್ನಡ ಬಗ್ಗೆ ಏಲ್ಲಾ ಅನ್ಯಾಯವಾದರೆ ಸಂಘ ತಳ ಮಟ್ಟದಿಂದ ಶಕ್ತಿಶಾಲಿಯಾಗಿದೆ ಎಂದು ಹೇಳಿದರು.

ಪತ್ರಕರ್ತ ಪರಮೇಶ ರಾಂಪುರೆ, ಮಾತನಾಡಿ ಕನ್ನಡ ಹೋರಾಟ ಮತ್ತು ಏಕೀಕರಣ ಬಗ್ಗೆ ಮಾತನಾಡಿದರು, ಎಸ್.ಡಿ.ಎಮ.ಸಿ ಅಧ್ಯಕ್ಷ ಸಂತೋಷ ಬನವಾಸೆ ಮಾತನಾಡಿ, ರಾಜ್ಯೋತ್ಸವ ಮಹತ್ವ ಮತ್ತು ಶಾಲಾ ಆಡಳಿತ ಬಗ್ಗೆ ಹೇಳಿದರು.

ಈ ಸಂದರ್ಭದಲ್ಲಿ ನೂತನ ಕರವೇ ಅಧ್ಯಕ್ಷ ರಿಗೆ ಶಾಲೆ ವತಿಯಿಂದ ಸನ್ಮಾನಿಸಲಾಯಿತು. ಹಿರಿಯರಾದ ಮಡಿವಾಳಪ್ಪ ಮುರ್ಕೆ ಅವರು ಎಲ್ಲಾ ಮಕ್ಕಳಿಗೆ ಪೆನ್ನುಗಳು ಕಾಣಿಕೆ ನೀಡಿದರು. ಕಾರ್ಯಕ್ರಮದಲ್ಲಿ ಬಾಬುರಾವ ಹರಪಾಳೆ, ಸಿಬ್ಬಂದಿಗಳಾದ, ಸತೀಶ ಕುಲಾಲ, ವಿಜಯಲಕ್ಷ್ಮಿ ಪಾಟೀಲ, ನೀಲಂಬಿಕಾ ಚಾಂಡೇಶ್ವರೆ, ಮಂಗಲಾ ಮಾನ್ಯ, ಅಂಗನವಾಡಿ ಕಾರ್ಯಕರ್ತೆ ಸವಿತಾ ರಾಂಪುರೆ, ಸುವರ್ಣ ಹಾಗೂ ಮಂಗಲಾ ಕುಂಬಾರ, ವಿಮಲಾ ಮೆಹತ್ರೆ ಇದ್ದರು.

# ಭಕ್ತ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ನ.03:ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಭಕ್ತ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ನ.08 ರಂದು ಮಧ್ಯಾಹ್ನ 01 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 09 ಗಂಟೆಗೆ ನಗರದ ಕನಕ ವೃತ್ತದಲ್ಲಿರುವ ಭಕ್ತ ಕನಕದಾಸರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ಬಳಿಕ ಬೆಳಿಗ್ಗೆ 10 ಗಂಟೆಗೆ ಭವ್ಯ ಮೆರವಣಿಗೆ ನಡೆಯಲಿದೆ.ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ಜೆ.ಎನ್.ಗಣೇಶ್, ಬಿ.ಎಂ.ನಾಗರಾಜ, ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತದ ಉಪಾಧ್ಯಕ್ಷ ಹೆಚ್.ಲಕ್ಷ್ಮಣ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಡಾ.ಪಿ.ಎಲ್. ಗಾದಿಲಿಂಗನಗೌಡ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ವೀರಶೈವ ಪದವಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ನೀಲಮ್ಮ ಕೆ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡುವರು. ಬಳ್ಳಾರಿಯ ಕವಿತಾ ಗಂಗೂರು ಅವರಿಂದ ದಾಸರ ಪದಗಳ ಸಂಗೀತ ಕಾರ್ಯಕ್ರಮ ಇರಲಿದೆ.

***ಮೆರವಣಿಗೆ:***

ಭಕ್ತ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಅಂಗವಾಗಿ ಮೆರವಣಿಗೆ ನಡೆಯಲಿದ್ದು, ಅಂದು ಬೆಳಿಗ್ಗೆ 10 ಗಂಟೆಗೆ ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ- ಬೆಂಗಳೂರು ರಸ್ತೆ- ಬ್ರೂಸ್‌ಪೇಟೆ ಹಳೆ ಪೊಲೀಸ್ ಠಾಣೆ- ತೇರುಬೀದಿ- ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆಯ ವರೆಗೆ ನಡೆಯಲಿದೆ.

ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಮಹಾನಗರ ಪಾಲಿಕೆಯ ಆಯುಕ್ತ ಮಂಜುನಾಥ ಪಿ.ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಬಿಇಡ್: ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿಕೊಳ್ಳಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.03.2025-26ನೇ ಸಾಲಿಗೆ ಎರಡು ವರ್ಷದ ಬಿಇಡ್ ಕೋರ್ಸಿನ್ ವ್ಯಾಸಂಗಕ್ಕಾಗಿ ರಾಜ್ಯದ ಸರಕಾರಿ, ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನರಹಿತ ಬಿಇಡ್ ಕಾಲೇಜಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಇಲಾಖೆಯ ವೆ???ಸೈ???ನಲ್ಲಿ ಆ???ಲೈನ್ ಮೂಲಕ ಅರ್ಜಿ ಸಲ್ಲಿಸಲು ನವೆಂಬರ್ 3 ರಂದು ಕೊನೆಯ ದಿನಾಂಕ ನಿಗದಿಪಡಿಸಲಾಗಿತ್ತು.

ಈ ಮುಂಚೆ ಅರ್ಜಿ ಸಲ್ಲಿಸಿ, ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಲಾಗುತ್ತಿತ್ತು. ಆದರೆ ಈ ಪ್ರಸಕ್ತ ಸಾಲಿನಿಂದ ಬಿಇಡ್ ದಾಖಲಾತಿಗಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ಏಳು ದಿನಗಳ ಒಳಗಾಗಿ ತಮ್ಮ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿಕೊಳ್ಳುವುದು ಕಡ್ಡಾಯವಾಗಿದ್ದು, ಇಲ್ಲವಾದಲ್ಲಿ ಸಂಬಂಧಪಟ್ಟ ಅಭ್ಯರ್ಥಿಗಳು ಹೊಣೆಗಾರರಾಗಿರುತ್ತಾರೆ.

ಡಯಟ್ ಕಮಲಾಪೂರ ಇದು ಕಲುಬುರಗಿ ನಗರಕ್ಕೆ ಸ್ಥಳಾಂತರಗೊಂಡಿದ್ದು, ಆಲೈನಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ನೋಡಲ್ ಕೇಂದ್ರ ಡಯಟ್ ಗುಲ್ಬರ್ಗಾ ಓ-19 ಎಂದು ಆಯ್ಕೆ ಮಾಡಿಕೊಂಡಿದ್ದಲ್ಲಿ ಅವರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಐವಾನ್ ಶಾಹಿ ಏರಿಯಾ, ಕಲಬುರಗಿ ದಕ್ಷಿಣ ಕೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಹತ್ತಿರ (ಸರಕಾರಿ ಬಿಇಡ್ ಕಾಲೇಜ್ ಹತ್ತಿರ) ಕಲಬುರಗಿ ಇಲ್ಲಿ ತಮ್ಮ ಮೂಲದಾಖಲೆಗಳನ್ನು ಅರ್ಜಿ ಸಲ್ಲಿಸಿದ ಏಳು ದಿನದೊಳಗಾಗಿ ಪರಿಶೀಲನೆ ಮಾಡಿಕೊಳ್ಳಬೇಕು. ಇಲ್ಲಿಯವರೆಗೆ 961 ಅರ್ಜಿಗಳು ನಮ್ಮ ನೋಡಲ್ ಕೇಂದ್ರಕ್ಕೆ ಸಲ್ಲಿಕೆಯಾಗಿದ್ದು, ಕೇವಲ 455 ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿಕೊಂಡಿದ್ದಾರೆ.

ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9448552283, 7259192442 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಕುಷ್ಠರೋಗ ಪ್ರಕರಣ ಪತ್ತೆಹಚ್ಚುವ ಅಭಿಯಾನ ಯಶಸ್ವಿಗೊಳಿಸಲು ಕರೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ನ.03:ಕುಷ್ಠರೋಗವು ಮಾರಣಾಂತಿಕ ಕಾಯಿಲೆಯಲ್ಲ. ಇದು ಗುಣಪಡಿಸುವಂತಹ ಕಾಯಿಲೆಯಾಗಿದ್ದು, ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಮನೆ ಭೇಟಿ ನೀಡಿದಾಗ ಮನೆಯ ಸದಸ್ಯರೆಲ್ಲರು ಪರೀಕ್ಷಿಸಿಕೊಳ್ಳಬೇಕು ಎಂದು ಮಹಾನಗರ ಪಾಲಿಕೆಯ ಸದಸ್ಯ ಇಬ್ರಾಹಿಂಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಸ್ಪತ್ರೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಹಾನಗರ ಪಾಲಿಕೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ ವಿಭಾಗ ಹಾಗೂ ಮಿಲ್ಲರ್‌ಪೇಟೆ ನಗರ ಆರೋಗ್ಯ ಕೇಂದ್ರ ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಮಿಲ್ಲರ್ ಪೇಟೆಯ ವಾರ್ಡ್ ನಂ.13 ರಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ (ನ.03 ರಿಂದ ನ.19 ರವರೆಗೆ 14 ದಿನಗಳ ಕಾಲ) ಕುಷ್ಠರೋಗ ಪತ್ತೆ ಹಚ್ಚುವ ಅಂದೋಲನಾ ಸಮೀಕ್ಷೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದಲ್ಲಿ ಸಾಂಕ್ರಾಮಿಕ ರೋಗಗಳಾದ ಪ್ಲೇಗ್, ಕಾಲಾರಾ ಇನ್ನೂ ಮುಂತಾದ ರೋಗಗಳನ್ನು ನಿರ್ಮೂಲನೆಗೊಳಿಸಿದ್ದೇವೆ. ಕುಷ್ಠರೋಗವನ್ನು ಸಹ 2027 ರೊಳಗೆ ನಿರ್ಮೂಲನೆಗೊಳಿಸಲು ನಾವೆಲ್ಲರೂ ಪಣತೊಡಬೇಕಿದೆ. ಹಾಗಾಗಿ ಆಶಾ ಕಾರ್ಯಕರ್ತೆಯರು ಸಮೀಕ್ಷೆಗೆ ಮನೆಗೆ ಬಂದಾಗ ಅವರಿಗೆ ಸಹಕರಿಸಿ ಸರಿಯಾದ ಮಾಹಿತಿ ನೀಡಬೇಕು. ಪ್ರಾಥಮಿಕ ಹಂತದಲ್ಲೇ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕುಷ್ಠರೋಗ ಸಾಂಕ್ರಾಮಿಕ ರೋಗವಾಗಿದ್ದು, ಮೈಕೋಬ್ಯಾಕ್ಟೀರಿಯಂ ಲೆಪ್ರೈ ಎಂಬ ರೋಗಾಣುವಿನಿಂದ ಬರುತ್ತದೆ, ಇದು ಚಿಕಿತ್ಸೆ ಪಡೆಯದೇ ಇರುವ ಕುಷ್ಠರೋಗಿಯು ಕೆಮ್ಮಿದಾಗ ಸೀನಿದಾಗ ತುಂತುರು ಹನಿಗಳು ಉಸಿರಾಡುವ ಗಾಳಿಯ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುವಂತಹ ರೋಗವಾಗಿದ್ದು, ಪ್ರಾರಂಭಿಕ ಹಂತದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದರಿಂದ ಅಂಗವಿಕಲತೆಯಾಗುವುದನ್ನು ತಪ್ಪಿಸಬಹುದು ಎಂದು ತಿಳಿಸಿದರು.

ಹೊಸದಾಗಿ ಕುಷ್ಠರೋಗ ಪ್ರಕರಣಗಳಿಗೆ ಉಂಟಾಗುವ ಅಂಗವಿಕಲತೆಯನ್ನು 10 ಲಕ್ಷ ಜನಸಂಖ್ಯೆಗೆ ಒಂದಕ್ಕಿಂತ ಕಡಿಮೆ ಮಾಡಲು ಮತ್ತು ಸುಪ್ತ ಕುಷ್ಠರೋಗ ಪ್ರಕರಣಗಳನ್ನು ಅತೀ ಶೀಘ್ರವಾಗಿ ಪತ್ತೆ ಹಚ್ಚಲು ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪ್ರಸ್ತುತ ಜಿಲ್ಲೆಯಲ್ಲಿ 77 ಪ್ರಕರಣಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದರು. ಆಶಾ ಕಾರ್ಯಕರ್ತೆಯರು ಮತ್ತು ಪುರುಷ ಸ್ವಯಂಸೇವಕರು ಮನೆ-ಮನೆ ಭೇಟಿ ಮಾಡಿ ಮನೆಯಲ್ಲಿರುವ 2 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರನ್ನು ತಪಾಸಣೆ ಮಾಡಿ ಕುಷ್ಠರೋಗದ ಬಗ್ಗೆ ಮಾಹಿತಿ ನೀಡಿ ಶಂಕಿತ ಪ್ರಕರಣಗಳನ್ನು ಪತ್ತೆಹಚ್ಚಿ ವೈದ್ಯಾಧಿಕಾರಿಗಳ ಹತ್ತಿರ ರೆಫರಲ್ ಫಾರಂ ನೀಡಿ ತಪಾಸಣೆ ಮಾಡಿಸಿಕೊಳ್ಳಲು ಕಳುಹಿಸಿಕೊಡುತ್ತಾರೆ. ವೈದ್ಯಾಧಿಕಾರಿಗಳು ತಪಾಸಣೆ ಮಾಡಿ ಕುಷ್ಠರೋಗ ಎಂದು ದೃಢಪಡಿಸಿದ ಮೇಲೆ ಅಗತ್ಯ ಚಿಕಿತ್ಸೆ ನೀಡುತ್ತಾರೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 187327 ಮನೆಗಳು ತಪಾಸಣಾ ಸಮೀಕ್ಷೆಗೆ ಒಳಪಡಿಸಲಾಗಿದ್ದು, ಸಮೀಕ್ಷೆ ಮಾಡಲು 667 ತಂಡಗಳನ್ನು ರಚಿಸಲಾಗಿದೆ. ಒಂದು ತಂಡದಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ಪುರುಷ ಸ್ವಯಂಸೇವಕರು ಒಳಗೊಂಡಿದ್ದು, ಈ ತಂಡಗಳ ಮೇಲ್ವಿಚಾರಣೆಗೆ 67 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ ಎಂದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ ಅವರು ಮಾತನಾಡಿ, ಮಹಾತ್ಮಗಾಂಧೀಜಿಯವರು ಕಂಡ ಕನಸು "ಕುಷ್ಠರೋಗ ಮುಕ್ತ ಭಾರತ" ನನಸು ಮಾಡಲು ಎಲ್ಲರ ಸಹಕಾರ ಮತ್ತು ಸಹಭಾಗಿತ್ವ ಅವಶ್ಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕುಷ್ಠರೋಗ ನಿಮೂರ್ಲನೆ ಕುರಿತ ಭಿತ್ತಿಪತ್ರಗಳನ್ನು ಗಣ್ಯರು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಆರ್.ಅಬ್ದುಲ್ಲಾ, ಮಿಲ್ಲರ್ ಪೇಟೆಯ ವೈದ್ಯಾಧಿಕಾರಿಗಳಾದ ಡಾ.ನವೀನ್ ಕುಮಾರ್, ಡಾ.ಶೋಭ, ಬಿಸಿಲಹಳ್ಳಿಯ ನಮ್ಮ ಕ್ಲಿನಿಕ್ ವೈದ್ಯಾಧಿಕಾರಿ ಡಾ.ಹರೀಶ, ಯುನಾನಿ ವೈದ್ಯಾಧಿಕಾರಿ ಡಾ.ಜೈನುಲ್ಲಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಷಿದ್ ಬೇಗಂ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮುಸ್ತಕ್, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಮಾನಪ್ಪ, ಪಂಪಯ್ಯ ಸೇರಿದಂತೆ ಆರೋಗ್ಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಅಗ್ನಿವೀರ್ ನೇಮಕಾತಿ ರ್‍ಯಾಲಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ನ.03:ಬೆಂಗಳೂರು ಪ್ರಧಾನ ಕಚೇರಿ ನೇಮಕಾತಿ ವಲಯದಿಂದ ನವೆಂಬರ್ 13 ರಿಂದ 19 ರ ವರೆಗೆ ಬಳ್ಳಾರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಅಗ್ನಿವೀರ್ ನೇಮಕಾತಿ ರ್‍ಯಾಲಿ ಏರ್ಪಡಿಸಲಾಗಿದೆ.

ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ 30 ಜೂನ್ 2025 ರಿಂದ 10 ಜುಲೈ 2025 ರವರೆಗೆ ನಡೆಸಲಾದ ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಗ್ನಿವೀರ್ ವರ್ಗಗಳ ಅರ್ಜಿದಾರರನ್ನು (ಅನ್ವಯವಾಗುವಂತೆ) ವರ್ಗವಾರು ರ್‍ಯಾಲಿಗೆ ಕರೆಯಲಾಗಿದೆ.

*ಶಾರ್ಟ್ ಲಿಸ್ಟ್ ಮಾಡಿದ ಅಭ್ಯರ್ಥಿಗಳ ರಾಜ್ಯ ಮತ್ತು ಜಿಲ್ಲೆಗಳ ವಿವಿಧ ವರ್ಗ:*ಅಗ್ನಿವೀರ್ ಸಾಮಾನ್ಯ ಕರ್ತವ್ಯ ಮಾತ್ರ(ಅಗ್ನಿವೀರ್ ಸಾಮಾನ್ಯ ಕರ್ತವ್ಯ ವರ್ಗಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು):*

ಕರ್ನಾಟಕ ರಾಜ್ಯದ ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ತುಮಕೂರು, ಮಂಡ್ಯ, ಮೈಸೂರು, ಬಳ್ಳಾರಿ, ಚಾಮರಾಜನಗರ, ರಾಮನಗರ, ಕೊಡಗು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಚಿತ್ರದುರ್ಗ, ವಿಜಯನಗರ ಜಿಲ್ಲೆಗಳು.*ಅಗ್ನಿವೀರ್ ಜನರಲ್ ಡ್ಯೂಟಿ ವರ್ಗ (ಅಗ್ನಿವೀರ್ ಟೆಕ್ನಿಕಲ್, ಅಗ್ನಿವೀರ್ ಕ್ಲರ್ಕ್/ಸ್ಟೋರ್ ಕೀಪರ್ ಟೆಕ್ನಿಕಲ್, ಅಗ್ನಿವೀರ್ ಟ್ರೇಡ್ಸ್ ಮ್ಯಾನ್ (10ನೇ ಪಾಸ್) ಮತ್ತು ಅಗ್ನಿವೀರ್ (8ನೇ ತೇರ್ಗಡೆ) ಟ್ರೇಡ್ಸ್ ಮ್ಯಾನ್ ಹೊರತುಪಡಿಸಿ ಒಂದೇ ವರ್ಗಕ್ಕೆ ಮಾತ್ರ ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳಿಗೆ):*ಬೆಂಗಳೂರು ಪ್ರಧಾನ ಕಚೇರಿಯ ಆರ್‌ಓ ವ್ಯಾಪ್ತಿಯ ಕರ್ನಾಟಕ ರಾಜ್ಯದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಮಂಡ್ಯ, ಮೈಸೂರು, ಬಳ್ಳಾರಿ, ಚಾಮರಾಜನಗರ, ರಾಮನಗರ, ಕೊಡಗು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಚಿತ್ರದುರ್ಗ, ವಿಜಯನಗರ ಜಿಲ್ಲೆಗಳು.*ಬಹು ವಿಭಾಗಗಳಿಗೆ ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳು:*

ಎಆರ್‌ಓ ಮಂಗಳೂರು ವ್ಯಾಪ್ತಿಯ ಕರ್ನಾಟಕ ರಾಜ್ಯದ ವಿಜಯಪುರ, ಬಾಗಲಕೋಟೆ, ಗದಗ, ಧಾರವಾಡ, ಉತ್ತರ ಕನ್ನಡ, ಹಾವೇರಿ, ದಾವಣಗೆರೆ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು.

ಸೈನ್ಯದಲ್ಲಿ ಎಲ್ಲಾ ವರ್ಗಗಳ ನೋಂದಣಿಗಾಗಿ ರ್‍ಯಾಲಿಯನ್ನು ಆಯೋಜಿಸಲಾಗಿದೆ. ಸೇನೆಯಲ್ಲಿ ನಿರ್ದಿಷ್ಟಪಡಿಸಿದ ವಿಭಾಗಗಳಲ್ಲಿ ದಾಖಲಾತಿಗಾಗಿ ವಯಸ್ಸು, ಶಿಕ್ಷಣ ಅರ್ಹತೆ ಇತರ ಮಾನದಂಡಗಳ ವಿವರಗಳನ್ನು ಜೆಐಎ ವೆಬ್‌ಸೈಟ್‌ನಲ್ಲಿ 12 ಮಾರ್ಚ್ 2025 ರಂದು ಪ್ರಕಟಿಸಲಾದ ಅಧಿಸೂಚನೆಯ ಪ್ರಕಾರ ನೀಡಲಾಗಿದೆ.

www.joinindianarmy.nic.in ನಲ್ಲಿ ಪ್ರಕಟವಾದ ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶ, ಪ್ರವೇಶ ಕಾರ್ಡ್ ಗಳನ್ನು ಶಾರ್ಟ್ ಲಿಸ್ಟ್ ಮಾಡಿದ ಅಭ್ಯರ್ಥಿಗಳಿಗೆ ಅವರ ಇಮೇಲ್ ನಲ್ಲಿ ರವಾನಿಸಲಾಗಿದೆ. ಅವರ ವೈಯಕ್ತಿಕ ಖಾತೆ ಮತ್ತು ನೋಂದಾಯಿತ ಇಮೇಲ್ ಐಡಿಯನ್ನು ಲಾಗಿನ್ ಮಾಡುವ ಮೂಲಕ ಪ್ರವೇಶಿಸಬಹುದಾದ ಭಾರತೀಯ ಸೇನೆಯ ವೆಬ್‌ಸೈಟ್‌ನಲ್ಲಿಯೂ ಸಹ ಲಭ್ಯವಿದೆ.

ಅಭ್ಯರ್ಥಿಗಳು ಯಾವುದೇ ವಂಚಕರು ಅಥವಾ ಮಧ್ಯವರ್ತಿಗಳಿಗೆ ಕಿವಿಗೊಡಬಾರದು. ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆ ಸಮಯದಲ್ಲಿ ಅಭ್ಯರ್ಥಿಗಳ ಕಾರ್ಯಕ್ಷಮತೆ, ನೇಮಕಾತಿ ರ್‍ಯಾಲಿಯ ಸಮಯದಲ್ಲಿ ನಡೆಸುವ ಪರೀಕ್ಷೆಗಳು ಮತ್ತು ಅಂತಿಮ ಅರ್ಹತೆಯ ಮೇಲೆ ಆಯ್ಕೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

### ಕನ್ನಡಕ್ಕಾಗಿ ಕನ್ನಡ ಪ್ರಾಧ್ಯಾಪಕರಷ್ಟೇ ಹೋರಾಡುವುದಲ್ಲ

# ನಾಡುನುಡಿ ರಕ್ಷಣೆ ನಮ್ಮೆಲ್ಲ ಕರ್ತವ್ಯ ಪ್ರೊ.ಸುರೇಶ ಕಳ್ಳಿಮನಿ.



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟಡೆ: ಕನ್ನಡಕ್ಕಾಗಿ ಸಮಸ್ಯೆಗಳು ಬಂದಾಗ ಕನ್ನಡ ಪ್ರಾಧ್ಯಾಪಕರು ಮತ್ತು ಕನ್ನಡ ಸಂಘಟನೆಗಳವರಷ್ಟೇಹೋರಾಡುವುದಲ್ಲ. ಎಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕು ಅದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಬಾಗಲಕೋಟೆಯ ಸರಕಾರಿ ಪದವಿ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಪ್ರೊ ಸುರೇಶ ಕಳ್ಳಿಮನಿಯವರು ಹೇಳಿದರು.

ಎಪ್ಪತ್ತನೆಯ ಕನ್ನಡ ರಾಜ್ಯೋತ್ಸವದ ಅಂಗವಾಗಿ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಮುಖ್ಯ ಅಥಿ–ತಿಯಾಗಿ ಭಾಗವಹಿಸಿ ಮಾತನಾಡಿದ ಅವರು ಭಾಷಾವಾರು ಪ್ರಾಂತಗಳ ರಚನೆ, ಕರ್ನಾಟಕದ ಏಕೀಕರಣ–ಕ್ಕಾಗಿ ಹೋರಾಡಿದ ಮಹನೀಯರ ಸ್ಮರಣೆ ಅಗತ್ಯವಾಗಿದ್ದು ಕನ್ನಡ ನಾಡು ನುಡಿಯ ರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯೆ ಪ್ರೊ.ಶ್ರೀಮತಿ ಎಸ್. ಆರ್. ಸಬರದ ಅವರು ಮಾತನಾಡಿ ಕನ್ನಡದ ಕೆಲಸಕ್ಕಾಗಿ ನಾವೆಲ್ಲರು ಕೈ ಜೋಡಿಸಬೇಕೆಂದರು. ವೇದಿಕೆಯಲ್ಲಿ ಐಕ್ಯೂಎಸಿ ಸಂಯೋಜಕ ಡಾ. ಡಿ ಎಸ್. ಲಮಾಣಿಯವರು, ಪ.ಪೂ.ಪ್ರಾಚಾರ್ಯ ಡಾ. ಎನ್. ಎಚ್.ಬೇವಿನಹಳ್ಳಿಯವರು,ವಿದ್ಯಾರ್ಥಿ ಕಲ್ಯಾಣಾಧಿಕಾರಿ ಪ್ರೊ.ಶ್ರೀಮತಿ ಎಸ್. ಆರ್. ದೇಶಪಾಂಡೆ ಉಪಸ್ಥಿತರಿದ್ದರು. ವಿದ್ಯಾರ್ಥಿ ಶಿವಾನಂದ ಮಡಿವಾಳ ಅವರಿಂದ ಪ್ರಾರ್ಥನೆ, ಡಾ.ಎ ಎಮ್ ಸತ್ಯನಾಯಕ ಅವರಿಂದ ಸ್ವಾಗತ ಪರಿಚಯ , ಪ್ರೊ. ವಿ.ಎಸ್. ಚಿಗರಿಯವರಿಂದ ವಂಧಿಸಲ್ಪಟ್ಟ ಈ ಕಾರ್ಯಕ್ರಮವವನ್ನು ಪ್ರೊ.ಕು.ಪಲ್ಲವಿ ಬಿ. ಅವರು ನಿರ್ವಹಿಸಿದರು.

## ಅವಧಿ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು 03: ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ 2025–26ನೇ ಸಾಲಿನಲ್ಲಿ ಅಸಾಧಾರಣ ಪ್ರತಿಭೆಯುಳ್ಳ ಮಕ್ಕಳಿಗೆ ಜಿಲ್ಲಾ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ನವೆಂಬರ್ 15ರವರೆಗೆ ವಿಸ್ತರಿಸಲಾಗಿದೆ. ನಾವೀನ್ಯತೆ, ತಾರ್ಕಿಕ, ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 05ರಿಂದ 18ವರ್ಷ ವಯೋಮಿತಿಯ ಮಕ್ಕಳ ಸಾಧನೆಯನ್ನು ಗುರುತಿಸಿ ಪ್ರೋತ್ಸಾಹಿಸಲಾಗುತ್ತದೆ. ಆಸಕ್ತ ಅರ್ಜಿಸಲ್ಲಿಸುವ ಮಗು ಅರ್ಜಿ ನಮೂನೆಯೊಂದಿಗೆ ಇತ್ತೀಚಿನ ಭಾವಚಿತ್ರ ಲಗತ್ತಿಸಬೇಕು. ಅಸಾಧಾರಣಾ ಪ್ರತಿಭೆ ಹೊಂದಿರುವ ಬಗ್ಗೆ ಪತ್ರಿಕಾ ಪ್ರಕಟಣೆಯ ತುಣುಕು/ ಪ್ರಮಾಣ ಪತ್ರ ಲಗತ್ತಿಸಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು ಉಪ ನಿರ್ದೇಶಕರ ಕಚೇರಿ ಮಂತ್ರಾಲಯ ರೋಡ್ ಐ.ಡಿ.ಎಸ್. ಎಮ್.ಟಿ ಲೇಔಟ್ ಎದುರುಗಡೆ ರಾಯಚೂರು ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ದೂರವಾಣಿ ಸಂಖ್ಯೆ: 08532295646ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನವ್ವಂಬರ 1 ರ ಕನ್ನಡಿಗರಾಗೋದು ಬೇಡ: ಶಂಕರ ಯಡಹಳ್ಳಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.2–ನಾವುಗಳು ನವ್ವಂಬರ್ 1ರ ಕನ್ನಡಿಗರಾಗದೇ ನಿತ್ಯ ಕನ್ನಡ ಭಾಷೆಯನ್ನು ಬಳಸಿ, ಮಾತಾಡಿ, ಬೇರೆಯವರಿಗೆ ಕಲಿಸಿ ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ನಿರ್ವಹಿಸೋಣ ಎಂದು ಶಿಕ್ಷಣ ಚಿಂತಕ ಶಂಕರಗೌಡ ಯಡಹಳ್ಳಿ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕ ಘಟಕ ಬಾಗಲಕೋಟೆ ಇವರ ಸಹಯೋಗದಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ ಕನ್ನಡ ಗೀತೆಗಳ ನೃತ್ಯ ಸ್ಪರ್ಧೆ ಹಾಗೂ ಕನ್ನಡ ರಾಜ್ಯೋತ್ಸವ ಸಂಭ್ರಮ–ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇವಲ ನವ್ವಂಬರ 1 ರಂದು ಕನ್ನಡದ ಬಗ್ಗೆ ಅಭಿಮಾನ ತೋರದೇ ನಿತ್ಯ ಮಾತೃ ಭಾಷೆಯ ಬಳಕೆ ಮಾಡಿ ಉಳಿಸಿ ಬೆಳೆಸುವ ಕಾರ್ಯ ನಡೆಯಬೇಕು ಎಂದರು.

ನಾನು ನಿತ್ಯ ಕನ್ನಡದಲ್ಲೇ ಮಾತನಾಡುತ್ತೇನೆ, ವ್ಯವಹರಿಸುತ್ತೇನೆ, ಕನ್ನಡ ನಾಡು, ನುಡಿ, ಸಂಸ್ಕೃತಿ, ಪರಂಪರೆ ಉಳಿವಿಗೆ ಶ್ರಮಿಸಲು ಕಟಿಬದ್ಧನಾಗಿದ್ದೇನೆ ಎಂಬ ಪ್ರತಿಜ್ಞೆಯನ್ನು ಪ್ರತಿಯೊಬ್ಬ ಕನ್ನಡಿಗ ಮಾಡಬೇಕು. ಅಂದಾಗ ಭಾಷೆ ಶ್ರೀಮಂತಗೊಳ್ಳುತ್ತದೆ ಎಂದು ಯಡಹಳ್ಳಿ ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿ, ಕನ್ನಡ ನಾಡು ಶ್ರೀಗಂಧದ ನಾಡು, ಸಂಪತ್ಭರಿತ ಹಾಗೂ ಸಮೃದ್ಧಿಯ ಬೀಡಾಗಿದೆ. ಹಿರಿಯರು ಹೋರಾಟದ ಮೂಲಕ ಕಟ್ಟಿಕೊಟ್ಟಿರುವ ಕರ್ನಾಟಕ ರಾಜ್ಯ ಹಾಗೂ ಕನ್ನಡ ಭಾಷೆಯನ್ನು ಉಳಿಸುವ, ಬೆಳೆಸುವ ಕೆಲಸ ಆಗಬೇಕು ಎಂದು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿ ಮಹಾಂತೇಶ ನಾಲತ್ತವಾಡ ಮಾತನಾಡಿ, ಕನ್ನಡ ಗೀತೆಗಳ ನೃತ್ಯ ಸ್ಪರ್ಧೆ ಆಯೋಜನೆ ಮಾಡಿರುವುದು ಯುವ ಸಮೂಹದವರಲ್ಲಿ ಕನ್ನಡ ಪ್ರೇಮವನ್ನು ಬೆಳೆಸಲು ಪೂರಕವಾಗಿದೆ. ಶಾಲಾ ಕಾಲೇಜುಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಕನ್ನಡ ಭವ್ಯ ಪರಂಪರೆ, ಸಂಸ್ಕೃತಿ ಸಂಪ್ರದಾಯಗಳನ್ನು ಉಳಿಸಿ, ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ .ಅರಣುಕುಮಾರ, ಕನ್ನಡ ಭಾಷೆ, ನಾಡು, ನುಡಿಯ ಬಗ್ಗೆ ಹೆಮ್ಮೆ, ಪ್ರೀತಿಯನ್ನು ಬೆಳೆಸಿಕೊಳ್ಳಬೇಕು ಎಂದರು. ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಾಂಡುರಂಗ ಸಣ್ಣಪ್ಪನವರ ಆಶಯ ನುಡಿ ಹೇಳಿ, ಕನ್ನಡ ಭಾಷೆ ವಿಶ್ವದಲ್ಲಿಯೇ ಶ್ರೀಮಂತವಾಗಿದೆ. ನಮ್ಮ ಕನ್ನಡದ ಕವಿಗಳು ಸಾಹಿತ್ಯ, ಸಂಗೀತ, ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿರುವುದರಿಂದ ಕನ್ನಡ ಸಮೃದ್ಧಿಯಾಗಿ ಬೆಳೆದಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಡಾ.

ಚಂದ್ರಶೇಖರ ಕಾಳನ್ನವರ, ಐಕ್ಯೂಎಸಿ ಸಂಚಾಲಕ ಡಾ.ಬಸವರಾಜ ಬೀಳಗಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ನಂತರ ಜಿಲ್ಲಾ ಮಟ್ಟದ ಕನ್ನಡ ಗೀತೆಗಳ ನೃತ್ಯ ಸ್ಪರ್ಧೆ ಜರುಗಿದವು. ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಡಾ.ಸುಮಂಗಲಾ ಮೇಟಿ ನಿರೂಪಿಸಿದರು.

ಪ್ರೊ.ಸಂಪತ್ತ ಲಮಾಣಿ ವಂದಿಸಿದರು.

# ಮೇದಾರ ಕೇತಯ್ಯನವರ ಜಯಂತ್ಯೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.3–ಮೇದಾರ (ಎಸ್.ಟಿ.) ಅಲೆಮಾರಿ ಬುಡಕಟ್ಟು ಜನಾಂಗದ ಕ್ಷೇಮಾಭಿವೃದ್ಧಿ ಸಂಘ ಹಾಗೂ ಮೇದಾರ ಕೇತೇಶ್ವರ ಸಂಘದ ಆಶ್ರಯದಲ್ಲಿ ಶಿವಶರಣ ಮೇದಾರ ಕೇತಯ್ಯನವರ 895ನೇ ಜಯಂತ್ಯೋತ್ಸವ ಹಾಗೂ ಬೃಹತ್ ಸಮಾಜ ಸಮಾವೇಶ ನವೆಂಬರ್ 5ರಂದು ಅದ್ದೂರಿಯಾಗಿ ಜರುಗಲಿದೆ ಎಂದು ಸಂಘದ ಉಪಾಧ್ಯಕ್ಷ ಸಂಗಮೇಶ ಬಯ್ಯಾರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾಡಳಿತ ಭವನದಿಂದ ಮೇದಾರ ಸಮಾಜದ ನಿವೇಶನದವರೆಗೆ ಕುಂಭಮೇಳ ಮೆರವಣಿಗೆ ನಡೆಯಲಿದೆ. ನಂತರ ಬೆಳಗ್ಗೆ 11 ಗಂಟೆಗೆ ಲಿಂ. ಬಸವಪ್ರಭು ಕೇತೇಶ್ವರ ಮಹಾಸ್ವಾಮಿಗಳ ವೇದಿಕೆಯಲ್ಲಿ ಮುಖ್ಯ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಮೇದಾರ ಗುರುಪೀಠದ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ವಿಜಯಮಹಾಂತೇಶ್ವರ ಮಠದ ಗುರುಮಹಾಂತ ಸ್ವಾಮೀಜಿ, ಶಿರೂರಿನ ಡಾ.ಬಸವಲಿಂಗ ಸ್ವಾಮೀಜಿ ಹಾಗೂ ಕಮತಗಿಯ ವೀರೇಶ್ವರಸ್ವಾಮೀಜಿ ವಹಿಸಲಿದ್ದಾರೆ.

ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಉದ್ಘಾಟನೆ ನೆರವೇರಿಸಲಿದ್ದು, ಶಾಸಕ ಎಚ್.ವೈ. ಮೇಟಿ ಅಧ್ಯಕ್ಷತೆ ವಹಿಸುವರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಶಾಸಕ ಪಿ.ಹೆಚ್.ಪೂಜಾರ, ಮಾಜಿ ಶಾಸಕ ವೀರಣ್ಣ ಚರಂತಿಮಠ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಸಂಗಮೇಶ ಹೇಳಿದರು.

ಜಿಲ್ಲಾ ಮೇದಾರ ಅಲೆಮಾರಿ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಜೈನಾಪುರ ಮಾತನಾಡಿ, ಮೇದಾರ ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಸರ್ಕಾರ ಹೆಚ್ಚಿನ ಅನುದಾನ ಮೀಸಲಿಡಬೇಕು. ಪ್ರತಿ ಗೌರಿ ಹುಣ್ಣಿಮೆ ದಿನ ರಾಜ್ಯಾದ್ಯಂತ ಕೇತಯ್ಯನವರ ಜಯಂತಿಯನ್ನು ಅಧಿಕೃತವಾಗಿ ಆಚರಿಸಬೇಕು. ಪ್ರತಿ ಜಿಲ್ಲೆಯಲ್ಲೂ ಕೇತೇಶ್ವರ ಭವನ ನಿರ್ಮಾಣಕ್ಕೆ ಕನಿಷ್ಠ ಎರಡು ಎಕರೆ ಜಾಗ ನೀಡಬೇಕು ಎಂದು ಒತ್ತಾಯಿಸಿದರು.

ಬಾಗಲಕೋಟೆ ಮುಳುಗಡೆ ಪ್ರದೇಶದ ಮೇದಾರರ ಪುನರ್ವಸತಿ ಹಾಗೂ ವ್ಯಾಪಾರಕ್ಕಾಗಿ ಬಂಬೂ ಬಜಾರ ನಿರ್ಮಾಣ ಅಗತ್ಯವಿದೆ. ನವನಗರದ ಒಂದು ಸರ್ಕಲ್‌ಗೆ ಮೇದಾರ ಕೇತಯ್ಯನವರ ಹೆಸರಿ 'ಬೇಕು. ಅಲ್ಲದೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಿಗಮದ ಪ್ರತ್ಯೇಕ ಕಚೇರಿ ತೆರೆಯಬೇಕು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಚನ್ನಬಸು ಬುಡ್ಡರ, ರೇವಣ್ಣಪ್ಪ ಮೇದಾರ, ಅಯ್ಯಪ್ಪ ಮೇದಾರ ಉಪಸ್ಥಿತರಿದ್ದರು.

# ಮಹಿಳಾ ಮಂಡಳ ಕಟ್ಟಡಕ್ಕೆ ನೆರವು ನಂಜಯ್ಯನಮಠ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.3–ತಾಲೂಕಿನ ಶಿರೂರ ಪಟ್ಟಣದಲ್ಲಿ ಅಪೂರ್ಣಗೊಂಡಿರುವ ಅಕ್ಕಮಹಾದೇವಿ ಮಹಿಳಾ ಮಂಡಳದ ಸಮುದಾಯ ಭವನದ ಕಟ್ಟಡಕ್ಕೆ ಅನುದಾನ ನೀಡುವುದಾಗಿ ಕೈಗಾರಿಕೆ ಮತ್ತು ಮೂಲಸೌಕರ್ಯ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಭರವಸೆ ನೀಡಿದರು.

ಮಹಿಳಾ ಮಂಡಳದ ಸದಸ್ಯರು ತಮಗೆ ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನ್ನ ನಿಗಮದ ವತಿಯಿಂದ ಮಹಿಳಾ ಮಂಡಳಕ್ಕೆ ಮೂಲಭೂತ ಸೌಕರ್ಯ ಒದಗಿಸುವುದಲ್ಲದೇ



ಕಟ್ಟಡ ಪೂರ್ಣಗೊಳಿಸಲು ನೆರವು ನೀಡುವುದಾಗಿ ಹೇಳಿದರು.

ಮಹಿಳಾ ಮಂಡಳದ ಅಧ್ಯಕ್ಷೆ ಗುರಮ್ಮ ಸಂಕೀನಮಠ, ಉಪಾಧ್ಯಕ್ಷೆ ಲಲಿತಮ್ಮ ಪಾಟೀಲ, ನಂದಾ ಹೊಸಮಠ, ರಾಮಣ್ಣ ಕೋಟಿಕಲ್ಲ, ಸುರೇಶ ದೇಸಾಯಿ, ಗಿರಿಜಾ ಎಮ್ಮಿಮಠ, ಅಹಿಂದ ಜಿಲ್ಲಾ ಅಧ್ಯಕ್ಷ ಸಿದ್ದಪ್ಪ ಮೇಳಿ, ಮಂಜುಳಾ ಪಾಟೀಲ, ಲತಾ ಪಟ್ಟಣಶೆಟ್ಟಿ, ಮಂಜುಳಾ ಬುಳ್ಳಾ ಮತ್ತಿತರರು ಇದ್ದರು.

### ಊರುತುಂಬಾ ಉಸಾಬರಿ' ಸಂಕಲನ ಲೋಕಾರ್ಪಣೆ

# ಬೆಂದವರ ಬರಹಕ್ಕೆ ಪ್ರಜ್ಞಾಶಕ್ತಿ ಹೆಚ್ಚು :ಡಾ.ದಳವಾಯಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.3: ಜೀವನದಲ್ಲಿ ನೊಂದು ಬೆಂದರೂ ಹಿಂಜರಿಯದೆ, ಛಲಬಿಡದೆ ಬದುಕು ರೂಪಿಸಿಕೊಂಡು ಬರಹಕ್ಕಿಳಿಯುವವರ ಬರಹದಲ್ಲಿ ಸಮುದಾಯ ಪ್ರಜ್ಞೆಯ ಶಕ್ತಿ ಇರುತ್ತದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ವಿಮರ್ಶಕ ಡಾ.ವೆಂಕಟಗಿರಿ ದಳವಾಯಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ವಿದ್ಯಾಗಿರಿಯ ತೆಗ್ಗಿ ಲೇಔಟ್‌ನ ಮಲ್ಲಿಕಾರ್ಜುನ ದೇವಸ್ಥಾನದ ಸಭಾಭವನದಲ್ಲಿ ಜರುಗಿದ ಡಾ.ಬಸವರಾಜ ಕುಂಬಾರ ಅವರ 'ಊರುತುಂಬಾ ಉಸಾಬರಿ' ಲಲಿತ ಪ್ರಬಂಧ ಸಂಕಲನ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಿಂದಲೂ ಬಸವರಾಜ ಕುಂಬಾರ ಶಾಂತ ಸ್ವಭಾವದ ಮಿತಭಾಷಿ ಹಾಗೂ ಗಂಭೀರವಾಗಿ ತರಗತಿಯಲ್ಲಿ ತೊಡಗಿಕೊಳ್ಳುತ್ತಿದ್ದರು. ಮನೆಯಲ್ಲಿ ತೀವ್ರವಾದ ಬಡತನ. ಆದರೂ ಓದಲೇಬೇಕೆಂಬ ಹಂಬಲ ಎರಡನ್ನೂ ಒಟ್ಟೊಟ್ಟಿಗೆ ಎದುರಿಸಿ ಸಾಹಿತ್ಯ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಕೊಂಡಿದ್ದರು ಎಂದರು.

ಕುಂಬಾರ ಅವರ ಪ್ರಬಂಧ ವಿಶ್ವವಿದ್ಯಾಲಯ ಪಠ್ಯಕ್ಕೆ ಅಳವಡಿಕೆಯಾಗಿರುವುದು ಸಂತಸದ ಸಂಗತಿ. ನನ್ನ ವಿದ್ಯಾರ್ಥಿಯ ಈ ಸಾಧನೆಗೆ ಅತ್ಯಂತ ಹೆಮ್ಮೆ ಎನಿಸುತ್ತದೆ ಎಂದ ದಳವಾಯಿ, ಒಂದು ಕಾಲಕ್ಕೆ ಕೇವಲ ಸಂಶೋಧಕರಷ್ಟೇ ಇದ್ದ ಬಾಗಲಕೋಟೆ ನೆಲದಲ್ಲಿ ಈಗ ಸೃಜನಶೀಲ ಲೇಖಕರಾಗಿಯೂ ಯುವ ಸಮುದಾಯ ಗುರುತಿಸಿಕೊಳ್ಳುತ್ತಿರುವುದು ಸಂತಸ ತಂದಿದೆ ಎಂದರು.

ಕೃತಿ ಪರಿಚಯಿಸಿ ಮಾತನಾಡಿದ ಸರ್ಕಾರಿ ಪ್ರಥಮದರ್ಜೆ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಜಿ.ಜಿ.ಹಿರೇಮಠ, ಕುಂಬಾರರ ಪ್ರಬಂಧಗಳಲ್ಲಿ ಸಮುದಾಯದ ನಾಡಿಮಿಡಿತಗಳ ಸೂಕ್ಷ್ಮ ಪರಿಚಯವಿದೆ. ಅವುಗಳನ್ನು ಓದಿ ಮನನ ಮಾಡಿಕೊಳ್ಳುವ ಅಗತ್ಯತೆ ಇಂದಿನ ಓದುಗರಿಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ವಿದ್ವಾಂಸ ಡಾ.ವಿಜಯಕುಮಾರ ಕಟಗಿಹಳ್ಳಿಮಠ ಮಾತನಾಡಿ, ವ್ಯಕ್ತಿ ಸಾಯಬಹುದು ಆದರೆ ಆತನ ಕೃತಿ ಶಾಶ್ವತವಾಗಿ ಉಳಿಯುತ್ತದೆ. ಹೀಗಾಗಿ ನಮ್ಮ ಸುತ್ತಮುತ್ತಲಿನ ಕವಿ, ಕಲಾವಿದರನ್ನು ನಿರ್ಲಕ್ಷಿಸದೆ ಗೌರವಿಸುವ ಪರಿಪಾಠ ಬೆಳೆಸಿಕೊಳ್ಳಬೇಕು ಎಂದರು. ಬಿವಿವಿ ಸಂಘದ ಪಾಲಿಟೆಕ್ನಿಕ್ ಕಾಲೇಜಿನ ಪ್ರೊ.ಲಿಂಗರಾಜ ವೈದ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಮಹಾದೇವ ಬಸರಕೋಡ ಹಾಗೂ ಲೇಖಕ ಡಾ.ಬಸವರಾಜ ಕುಂಬಾರ ವೇದಿಕೆಯಲ್ಲಿದ್ದರು. ಭವ್ಯಶ್ರೀ ಗಡಗಿ ಪ್ರಾರ್ಥಿಸಿದರು. ವಸುಂಧರ ವೈದ್ಯ ಸ್ವಾಗತಿಸಿದರು. ಡಾ. ಎಸ್.ಡಿ. ಕೆಂಗಲಗುತ್ತಿ ನಿರೂಪಿಸಿದರು. ಡಾ.ಬಸವರಾಜ ಕುಂಬಾರ ವಂದಿಸಿದರು.

# ಲಿಪಿಕ ನೌಕರರು ಶಿಕ್ಷಕರ ಕೆಲಸ ಶೀಘ್ರ ಮಾಡಿಕೊಡಬೇಕು: ಮನ್ನಿಕೇರಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.3–ಲಿಪಿಕ ನೌಕರರು ಸೌಹಾರ್ದಯುತವಾಗಿ ಸಾರ್ವಜನಿಕರು ಮತ್ತು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಕೆಲಸಗಳನ್ನು ಶೀಘ್ರ ಇತ್ಯರ್ಥಗೊಳಿಸಲು ಮುಂದಾದಲ್ಲಿ ತಮ್ಮ ವೃತ್ತಿ ಬದುಕನ್ನು ಸುಗಮವಾಗಿ ಕಳೆಯಲು ಹಾಗೂ ಮಾನಸಿಕವಾಗಿ ನೆಮ್ಮದಿಯಿಂದ ಇರಲು ಸಾಧ್ಯವೆಂದು ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಅಜಿತ ಮನ್ನಿಕೇರಿ ಹೇಳಿದರು.

ನಗರದ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಶಾಲಾ ಶಿಕ್ಷಣ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಗ್ರೂಪ್ 'ಡಿ' ನೌಕರರ ಸಂಘದ ಬಾಗಲಕೋಟೆ ಜಿಲ್ಲಾ ಘಟಕ ಹಮ್ಮಿಕೊಂಡಿದ್ದ ಬೋಧಕೇತರ ನೌಕರರಿಗೆ ವಿದ್ಯುನ್ಮಾನ ಸೇವಾ ವಹಿಯ ತಂತ್ರಾಂಶ ನಿರ್ವಹಣೆ ಕುರಿತ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ರಾಜ್ಯಾದ್ಯಂತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಶಿಕ್ಷಕರ, ನೌಕರರ, ಅಧಿಕಾರಿಗಳ ಸೇವಾ ವಿವರಗಳನ್ನು ಇಎಸ್‌ಆರ್ ತಂತ್ರಾಂಶದಲ್ಲಿ ದಾಖಲಿಸಲು ಅವಕಾಶ ನೀಡಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸಾವಿರಾರು ನೌಕರರು, ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಸೇವಾ ವಿವರಗಳನ್ನು ಆನ್‌ಲೈನ್‌ದಲ್ಲಿ ದಾಖಲಿಸುವುದರಿಂದ ಮುಂದಿನ ದಿನಗಳಲ್ಲಿ ಪಿಂಚಣಿ, ವೇತನ ಬಡ್ತಿಗಳು ಸೇರಿದಂತೆ ಇನ್ನಿತರೆ ಸೌಲಭ್ಯಗಳಿಗೆ ಅನುಕೂಲವಾಗುವ ಉದ್ದೇಶದಿಂದ ಈ ವ್ಯವಸ್ಥೆಯನ್ನು ಸರ್ಕಾರ ಜಾರಿಗೆ ತಂದಿರುತ್ತದೆ ಎಂದು ಅವರು ಹೇಳಿದರು.

ಈಗಾಗಲೇ ಎಲ್ಲ ಅಧಿಕಾರಿಗಳಿಗೆ ಸೂಚನೆ ನಿಡಲಾಗಿದ್ದು, ನಿಖರವಾಗಿ ಇರುವಂತೆ ಮಾಹಿತಿ ಹಾಗೂ ಪೂರಕ ದಾಖಲೆಗಳನ್ನು ತಂತ್ರಾಂಶದಲ್ಲಿ ಇಂದ್ರೀಕರಿಸುವಂತೆ ಉಪನಿರ್ದೇಶಕ ಅಜಹಿತ ಮನ್ನಿಕೇರಿ ತಿಳಿಸಿದರು. ಶಿಕ್ಷಣಾಧಿಕಾರಿ ಹೆಚ್.ಜಿ.ಮಿರ್ಜಿ ಮಾತನಾಡಿ, ಶಿಕ್ಷಕರ ಸೇವಾ ಪುಸ್ತಕಗಳು ಆಕಸ್ಮಿಕ ಕಳೆದು ಹೋದಲ್ಲಿ ಹಾಗೂ ಬಹು ವರ್ಷಗಳ ನಂತರ ಕೆಲವು ಸೇವಾ ಪುಸ್ತಕಗಳು ಹರಿದು ಹೋದ ಪ್ರಕರಣಗಳಲ್ಲಿ ಇಎಸ್‌ಆರ್ ತಂತ್ರಾಂಶದಲ್ಲಿನ ದಾಖಲೆಗಳು ಉಳಿದುಕೊಂಡು ಆಗಿನ ಸಮಯದಲ್ಲಿ ಎಲ್ಲರಿಗೂ ಅನುಕೂಲವಾಗಲಿದೆ ಎಂದು ತಿಳಿಸಿದರು.

ತರಬೇತಿ ಸಂಸ್ಥೆಯ ಪ್ರಾಂಶುಪಾಲ ಎ.ಎಸ್.ನಟರಾಜ ಮಾತನಾಡಿ, ಈಗಾಗಲೇ ರಾಜ್ಯಾದ್ಯಂತ ಶಿಕ್ಷಣ ಇಲಾಖೆ ಈ ಯೋಜನೆಯನ್ನು ರೂಪಿಸಿ ಮಾದರಿಯಾಗಿದ್ದು, ಇದೊಂದು ಹೊಸ ಬೆಳವಣಿಗೆಯಾಗಲಿದೆ. ಇದಕ್ಕಾಗಿ ಆನ್‌ಲೈನ್‌ದಲ್ಲಿ ನೌಕರರ ಎಲ್ಲ ಸೇವಾ ವಿವರಗಳು, ಸೇವೆಗೆ ಸೇರಿದ ದಿನದಿಂದ ನಿವೃತ್ತಿ ಹೊಂದುವ ದಿನಾಂಕದವರೆಗೂ ದಾಖಲೆಗಳು ಶಾಶ್ವತವಾಗಿ ಉಳಿದುಕೊಂಡಿರುತ್ತವೆ ಎಂದು ಹೇಳಿದರು.

ಸಂಘದ ಜಿಲ್ಲಾಧ್ಯಕ್ಷ ವೆಂಕಟೇಶ ಇನಾಮದಾರ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘದ ಮೂಲಕ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸಲಾಗಿದೆ. ಮುಂಬರುವ ದಿನಗಳಲ್ಲಿ ನೌಕರರಿಗೆ ಉಪಯುಕ್ತವಾಗುವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆ ಇದ್ದು, ಇಎಸ್‌ಆರ್ ನಿರ್ವಹಣೆಯ ಈ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕೆಂದು ಕೋರಿದರು.

ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಉಪನಿರ್ದೇಶಕ ಅಜಿತ ಮನ್ನಿಕೇರಿ ಅವರನ್ನು ಜಿಲ್ಲಾ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಂಗಮೇಶ ಸಣ್ಣತಂಗಿ ಯೋಜನೆಯ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಿದರು. ಪ್ರಧಾನ ಕಾರ್ಯದರ್ಶಿ ಶ್ರೀಶೈಲ ಹುನ್ನೂರ ನಿರೂಪಿಸಿದರು. ಸಹ ಕಾರ್ಯದರ್ಶಿ ಅಮೀನಸಾಬ ಹಳ್ಳೂರ ವಂದಿಸಿದರು. ಸಂಸ್ಥೆಯ ಬೋಧಕ ಮಲ್ಲಿಕಾರ್ಜುನ ಗುಡೂರ, ಜಿಲ್ಲಾ ಉಪಾಧ್ಯಕ್ಷೆ ಸುವರ್ಣಾ ಕೊಳಚಿ, ಕೋಶಾಧ್ಯಕ್ಷ ಸಿ.ಎಂ. ಕುಲಕರ್ಣಿ, ಸಂಘಟನಾ ಕಾರ್ಯದರ್ಶಿ ಸುರೇಶ ದಡ್ಡಿ, ಹುನಗುಂದ ತಾಲೂಕಾಧ್ಯಕ್ಷ ಮಲ್ಲಿಕ ವಾಲಿಕಾರ, ಮಹೇಶ ತಳ್ಳಿಕೇರಿ, ರಾಜು ನಾಯಕ, ರೇಖಾ ಬೀಳಗಿ, ಸಾವಿತ್ರಿ ಯರಗಾ, ಎಸ್.ಎಸ್.ಹಾಲವರ ಮತ್ತಿತರರು ಉಪಸ್ಥಿತರಿದ್ದರು.

# ನಿಮ್ಮ ಹಣ ನಿಮ್ಮ ಹಕ್ಕು ಅಭಿಯಾನಕ್ಕೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.3–ಮೂರು ತಿಂಗಳ ಕಾಲ ಹಕ್ಕು ಪಡೆಯುವ ಠೇವಣಿಗಳ ಇತ್ಯರ್ಥಪಡಿಸುವ 'ನಿಮ್ಮ ಹಣ ನಿಮ್ಮ ಹಕ್ಕು' ರಾಷ್ಟ್ರವ್ಯಾಪ್ತಿ ಅಭಿಯಾನಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಲೆಕ್ಕಾಧಿಕಾರಿ ಸಿದ್ಧರಾಮೇಶ್ವರ ಉಕಲಿ ಚಾಲನೆ ನೀಡಿದರು.

ನಗರದ ಬಿವಿವ ಸಂಘದ ಕೋಟಕ್ ಮಹಿಂದ್ರಾ ಆರ್‌ಸೆಟ್ ಸಂಸ್ಥೆಯ ಸಭಾಭವನದಲ್ಲಿ ಸೋಮವಾರ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಹಣಕಾಸು ಸಚಿವಾಲಯದ ಆದೇಶದಂತೆ ಮೂರು ತಿಂಗಳುಗಳ ಹಕ್ಕು ಪಡೆಯದ ಠೇವಣಿಗಳ ಇತ್ಯರ್ಥಪಡಿಸುವ ನಿಮ್ಮ ಹಣ ನಿಮ್ಮ ಹಕ್ಕು ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿರುವ 2,55,573 ಠೇವಣಿಗಳಲ್ಲಿ ಸುಮಾರು 70.42 ಕೋಟಿ ರೂ.ಗಳ ವಾರಸುದಾರರಹಿತ ಠೇವಣಿ ಇದ್ದು, ಎಲ್ಲಾ ಬ್ಯಾಂಕುಗಳು ಎಲ್.ಐ.ಸಿ, ಎಸ್‌ಇಬಿಐ, ಪಿ.ಎಫ್.ಆರ್.ಡಿ.ಎ ಸಂಸ್ಥೆಗಳಿಂದ ಠೇವಣಿದಾರರನ್ನು ಸಂಪರ್ಕಿಸಿ ಕೆವೈಸಿ ವಿಳಾಸದ ಪುರಾವೆ ದಾಖಲೆಗಳನ್ನು ಕ್ಲೇಮ್ ಫಾರ್ಮ್ ಪಡೆದು ಅವರಿಗೆ ಮರಳಿಸುವ ಮತ್ತು ತ್ವರಿತ ಇತ್ಯರ್ಥಪಡಿಸುವಂತೆ ಸೂಚಿಸಿದ ಅವರು, ಇದಕ್ಕಾಗಿ ಕಾಲಮಿತಿ ಮತ್ತು ಗುರಿ ಸಾಧನೆ ವಿವರಗಳನ್ನು ಜಿಲ್ಲಾ ಮಾರ್ಗದರ್ಶಿ ಬ್ಯಾಂ–ಕಿಗೆ ಒದಗಿಸಲು ಕೋರಿ 15 ದಿನಕೊಮ್ಮೆ ಪ್ರಗತಿ ಪರಶೀಲನೆ ಸಭೆ ನಡೆಸಲು ತಿಳಿಸಿದರು.

ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ರಾಜಕುಮಾರ ಹೂಗಾರ ಮಾತನಾಡಿ, ಕಳೆದ ಹತ್ತು ವರ್ಷಗಳಿಗಿಂತ ಹೆಚ್ಚು ಕಾಲ ನಿಷ್ಕ್ರಿಯವಾದ ಅಥವಾ ಕ್ಲೇಮ ಮಾಡದ ಖಾತೆ ಮತ್ತು ಠೇವಣಿ ವಿವರ ನೀಡಿದರು. ಎಲ್ಲಾ ಬ್ಯಾಂಕ್ ವಿಮೆ ಮತ್ತು ಇತರ ಇಲಾಖೆ ಖಾತೆಗಳಲ್ಲಿ ಡಿಸೆಂಬರ್ 31 ರ ವರೆಗೆ ಶಿಬಿರ ಮುಂದುವರೆಯಲಿದ್ದು ಹಕ್ಕುದಾರರು ತಮ್ಮ ಸಂಬಂಧಿತ ಬ್ಯಾಂಕ್ ಶಾಖೆಗಳಿಗೆ ಭೇಟಿ ನೀಡಿ ಅಗತ್ಯ ದಾಖಲೆಗಳನ್ನು ನೀಡಿ ಬ್ಯಾಂಕ್ ಠೇವಣಿಗಳನ್ನು ವಸೂಲಿ ಮಾಡಿಕೊಳ್ಳಬಹುದೆಂದು ಹೇಳಿದರು.

ಅಭಿಯಾನದಲ್ಲಿ ಉಪಸ್ಥಿತರಿದ್ದ ಬೆಂಗಳೂರು ರಿಸರ್ವ್ ಬ್ಯಾಂಕ್ ಅಧಿಕಾರಿ ಶ್ರೀಮತಿ ವಿಜಯಶ್ರೀ ಸರಕಾರದ ಈ ಅಭಿಯಾನದ ಸದುಪಯೋಗವನ್ನು ಸಾರ್ವಜನಿಕರು ಪಡೆದು ಬ್ಯಾಂಕಿನ ಪ್ರಬಂಧಕರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಠೇವಣಿ ಇತ್ಯರ್ಥಪಡಿಸಲು ಅವಕಾಶ ಕೊಡಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಬಾರ್ಡ್ ಪ್ರಬಂಧಕ ಮಂಜುನಾಥ್ ರೆಡ್ಡಿ. ಆರ್‌ಸೆಟ್ ಸಂಸ್ಥೆಯ ಅಧಿಕಾರಿ ಬಿ.ಎಸ್.ಅಂಗಡಿ ಹಾಗೂ ಶರಣ್ ಉಪಸ್ಥಿತರಿದ್ದರು.

## ಮಹಾಳಪ್ಪಯ್ಯ ಜಾತ್ರೆ ಯಾವುದೇ ಅಹಿತಕರ ಘಟನೆ ನೆಡೆಯಂತೆ ಆಚರಿಸಿ:ಸಿ.ಪಿ.ಐ ಅಲ್ಲಾಪುರೆ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ತಾಲೂಕಿನ ಡೋಣಗಾಂವ(ಎಮ್) ಹತ್ತಿರದ ಮಾಳಪ್ಪಯ್ಯ ದೇವಸ್ಥಾನದಲ್ಲಿ ನಡೆಯುವಜಾತ್ರಾ ಮಹೋತ್ಸವ ಸುತ್ತಮುತ್ತಲಿನ ವಿವಿಧ ಹಳ್ಳಿಯ ಮತ್ತುಗಡಿರಾಜ್ಯದಭಕ್ತರುಸೇರುವ ಐತಿಹಾಸಿಕ ಸಂಭ್ರಮವಾಗಿದ್ದು, ಭಕ್ತರುಯಾವುದೇಅಹಿತಕರಘಟನೆ ನಡೆದಂತೆಜಾತ್ರೆ ಯಶಸ್ವಿಗೊಳಿಸಬೇಕು ಎಂದು ಸಿ.ಪಿ.ಐ. ಶ್ರೀಕಾಂತ ಅಲ್ಲಾಪುರೆ ಹೇಳಿದರು.

ಮಾಳಪ್ಪಯ್ಯ ದೇವಾಲಯದಲ್ಲಿ ಕಮಲನಗರ ಪೊಲೀಸ್ ಠಾಣೆ ವತಿಯಿಂದ ಸೋಮವಾರ ಆಯೋಜಿಸಿದಶಾಂತಿಸಭೆಯಲ್ಲಿ ಅವರು ಮಾತನಾಡಿದರು.

ಮಾಳಪ್ಪಯ್ಯ ದೇವಸ್ಥಾನಕ್ಕೆ ಬರುವ ಭಕ್ತರು,

ತಮ್ಮ ವಾಹನಗಳನ್ನು ಪಾರ್ಕಿಂಗೆ ನಿಗದಿಮಾಡಿದಸ್ಥಳದಲ್ಲಿನಿಲ್ಲಿಸಿ, ಕಾನೂನುಸುವೆವಸ್ಥೆಕಾಪಾಡಬೇಕು ಎಂದು ಹೇಳಿದರು.

ಪಿ.ಎಸ್.ಐ ಆಶಾ ರಾಠೋಡ ಮಾತನಾಡಿ, ಧಾರ್ಮಿಕ ಕಾರ್ಯಕ್ರಮದಲ್ಲಿ ಎಲ್ಲರೂ ಕಾನೂನುಪಾಲನೆಮಾಡಬೇಕು, ಜನರಿಗೆತೊಂದರೆಉಂಟುಮಾಡುವ ವ್ಯಕ್ತಿಗಳವಿರುದ್ಧಕಾನೂನುಕ್ರಮ ಕೈಗೊಳಲಾಗುವುದು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಡೋಣಗಾಂವ(ಎಮ್) ಮಠದ ಪೀಠಾಧಿಪತಿ ಡಾ.ಶಂಭೋಲಿಂಗ ಶಿವಾಚಾರ್ಯರು ಮಾತನಾಡಿ, ಜಾತ್ರಾ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದು ಕಾರ್ಯಕ್ರಮಯಶಸ್ವಿಗೊಳಿಸಬೇಕು ಎಂದು ಹೇಳಿದರು.

## ವಿದ್ಯಾರ್ಥಿಗಳಿಗೆ ಅಪ್ರೆಂಟಿಸ್‌ಶಿಪ ಅವಕಾಶ

ಕಲಬುರಗಿ: ಕರ್ನಾಟಕರಾಜ್ಯ ವಕ್ಫಮಂಡಳಿಯ ಅಧ್ಯಕ್ಷರಾದಜನಾಬ ಸಯ್ಯದಮುಹಮ್ಮದಅಲಿಅಲಹುಸ್ಸೇನಿಯವರನಿರ್ದೇಶನದಂತೆ ಒಇಇಆಕೇಂದ್ರ ಪೋರ್ಟಲ್ (ಏಕೀಕೃತವಕ್ಫ್‌ನಿರ್ವಹಣೆ, ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ) ಮೂಲಕ ವಕ್ಫ್ ಆಸ್ತಿಗಳ ಡಿಜಿಟಲೀಕರಣ ಮತ್ತು ನಿರ್ವಹಣೆಯಲ್ಲಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಡೇಟಾ ಅಪ್‌ಲೋಡ್ ಮತ್ತು ನಿರ್ವಹಣೆ ಪ್ರಕ್ರಿಯೆಯಲ್ಲಿ ಅಪ್ರೆಂಟಿಸ್‌ಶಿಪ ಅವಕಾಶ ನೀಡಲಿದೆ ಎಂದು ಜಿಲ್ಲಾ ವಕ್ಫ್ ಅಧಿಕಾರಿ ಅಬ್ದುಲ್ ಮನ್ನಾನ ಹೇಳಿದರು. ಭಾಗವಹಿಸಿದವರಿಗೆ ಸಂಭಾವನೆ ಮತ್ತು ಪ್ರಮಾಣಪತ್ರವನ್ನು ನೀಡಲಾಗುತ್ತದೆ ಎಂದರು. ನೋಂದಣಿ ಬಗ್ಗೆ ಮಾಹಿತಿ ನೀಡಿದರು.

ಖಾಜಾ ಬಂದೆನವಾಜ ವಿಶ್ವವಿದ್ಯಾನಿಲಯವು ಈ ಕಾರ್ಯಕ್ರಮದಲ್ಲಿ ಭಾಗವಹಿಸಲುಸಂತೋಷವಾಗಿದೆ ಎಂದು ವಿವಿ ಉಪಕುಲಪತಿ ಪ್ರೊ ಅಲಿ ರಜಾ ಮೂಸ್ವಿ ವಿದ್ಯಾರ್ಥಿಗಳಿಗೆ ಹುರಿದುಂಬಿಸಿದರು. ಕೆಬಿಎನ್ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದ ಕಂಪ್ಯೂಟರ್ ಲ್ಯಾಬ್‌ನಲ್ಲಿ ಡೇಟಾ ಅಪ್‌ಲೋಡ್ ಮಾಡಲಾಗುತ್ತದೆ

ಈ ಕಾರ್ಯಕ್ರಮದಲ್ಲಿ ಹಜರತ್ ಅಲಿನದಾಫ್ - ಜಿಲ್ಲಾ ವ್ಯವಸ್ಥಾಪಕರು ಕೆಎಂಡಿಸಿ ಕಲಬುರಗಿ, ಪರ್ವೇಜ್ ಆಲಂ, ಲೆಕ್ಕ ಪರಿಶೋಧಕ, ಕೆ ಬಿ ಎನ್ ಕುಲಸಚಿವ ಮಿರ ವಿಲಾಯತ ಅಲಿ, ಐ ಕ್ಯೂ ಏ ಸಿ ನಿರ್ದೇಶಕ ಡಾ ಅಬ್ದುಲ ಬಷೀರ, ವಿದ್ಯಾರ್ಥಿ ಕಲ್ಯಾಣ ಡೀನ ಡಾ ಅನೂಪ, ಡಾ. ಸಿದ್ದೇಶ್ ಸಿರವಾರ, ಎಲ್ಲ ನಿಕಾಯದ ಡೀನ, ಡಾ ಆಜಾಮ, ಎಲ್ಲ ವಿಭಾಗದ ಮುಖ್ಯಸ್ಥರು ಹಾಗೂ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು. ಗುಲ್ಬರ್ಗಾ ಜಿಲ್ಲೆಯಡಿ ಅಂದಾಜು 6000 ವಕ್ಫ್ ಆಸ್ತಿಗಳು ಇದ್ದು ಅವುಗಳ ನೋಂದಣಿಯನ್ನು 5 ಟಿ ಡಿಸೆಂಬರರೊಳಗೆ ಪೂರ್ಣವಾಗ ಬೇಕಾಗಿದೆ.

## ಕೆಂಭಾವಿಯಲ್ಲಿ ಕೇಸರಿಮಯ ವಾತಾವರಣ.!




ಕೆಂಭಾವಿ, ಪಟ್ಟಣದಲ್ಲಿ (ನವೆಂಬರ್ 4) ನಡೆಯಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಪಥಸಂಚಲನಕ್ಕೆ ಕೊನೆಗೂ ಯಾದಗಿರಿಜಿಲ್ಲಾಡಳಿತವುಷರತ್ತುಬದ್ಧ ಅನುಮತಿ ನೀಡಿದೆ.

ಪಥಸಂಚಲನದ ಹಿನ್ನೆಲೆಯಲ್ಲಿ ಪಟ್ಟಣದ ಪ್ರಮುಖ ಬೀದಿಗಳು ಕೇಸರಿ ಧ್ವಜಗಳು, ಬ್ಯಾನರ್‌ಗಳು ಹಾಗೂಘೋಷಣಾ ಫಲಕಗಳಿಂದ ಕಂಗೊಳಿಸುತ್ತಿವೆ. ಸ್ವಯಂಸೇವಕರು ತಮ್ಮ ಪರಂಪರೆಯಉಡುಪಿನೊಂದಿಗೆ ಪಥಸಂಚಲನದ ಸಿದ್ಧತೆಗಳಲ್ಲಿ ತೊಡಗಿಕೊಂಡಿದ್ದಾರೆ. ಆರ್‌ಎಸ್‌ಎಸ್ ಕಾರ್ಯಕರ್ತರುಕಳೆದಕೆಲವು ದಿನಗಳಿಂದಪಥಸಂಚಲನದಮಾರ್ಗ ಸ್ವಚ್ಛತೆ, ಅಲಂಕಾರ ಹಾಗೂ ಶಿಸ್ತಿನ ಅಭ್ಯಾಸನಡೆಸುತ್ತಿದ್ದರು. ನಾಳೆಬೆಳಗ್ಗೆ ಪಥಸಂಚಲನವು ನಗರದಮುಖ್ಯ ಮಾರ್ಗಗಳಲ್ಲಿ ಸಾಗುವ ಸಾಧ್ಯತೆ ಇದೆ. ಜಿಲ್ಲಾಡಳಿತವುಪಥಸಂಚಲನಕ್ಕೆ ಕೆಲವು ಷರತ್ತುಗಳನ್ನು ವಿಧಿಸಿದೆ. ಸಾರ್ವಜನಿಕಶಾಂತಿಕದಡುವಂತಹ ಯಾವುದೇಘಟನೆಗಳುಸಂಭವಿಸದಂತೆ ಪೊಲೀಸರು ವ್ಯಾಪಕ ಭದ್ರತಾ ವ್ಯವಸ್ಥೆಕೈಗೊಂಡಿದ್ದಾರೆ. ಟ್ರಾಫಿಕ್ ನಿಯಂತ್ರಣಕ್ಕಾಗಿ ಟ್ರಾಫಿಕ್‌ಪೊಲೀಸ್ ಸಿಬ್ಬಂದಿ ನಿಯೋಜನೆಯಾಗಿದ್ದು, ಅಗತ್ಯವಿದ್ದಲ್ಲಿ ವಾಹನಸಂಚಾರಕ್ಕೆ ಪರ್ಯಾಯಮಾರ್ಗಕಲ್ಪಿಸಲಾಗಿದೆ. ಸ್ಥಳೀಯರುಪಥಸಂಚಲನದವೇಳೆ ಶಾಂತಿಯುತವಾತಾವರಣಕಾಪಾಡುವಂತೆ ಮನವಿಮಾಡಿದ್ದಾರೆ. ಕೆಲವ್ಯಾಪಾರಿಗಳು ಮತ್ತು ನಾಗರಿಕರು ಈ ಸಂದರ್ಭ ಅಂಗಡಿಗಳಿಗೆ ಕೇಸರಿ ಧ್ವಜಗಳನ್ನು ಅಲಂಕರಿಸುವಮೂಲಕತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ಪಥಸಂಚಲನದ ಕೊನೆಯಲ್ಲಿ ಸಂಘದ ಹಿರಿಯ ಕಾರ್ಯಕರ್ತರುರಾಷ್ಟ್ರಭಕ್ತಿ, ಏಕತೆ ಮತ್ತು ಸಮಾಜಸೇವೆ ಕುರಿತಾಗಿ ಭಾಷಣಮಾಡುವನಿರೀಕ್ಷೆಯಿದೆ.

## ಒಂದು ತಿಂಗಳಲ್ಲಿ ಪರಿಹಾರ ನೀಡದಿದ್ದರೇ ಉಗ್ರ ಹೋರಾಟ: ಬೀರನಕಲ್ ಎಚ್ಚರಿಕೆ.




ಯಾದಗಿರಿ: ಸತತ ಮಳೆ ಮತ್ತು ಪ್ರವಾಹದಿಂದಜಿಲ್ಲೆಯಲ್ಲಿಹಾನಿಯಾದ ಬೆಳೆಗೆ ಒಂದು ತಿಂಗಳಲ್ಲಿ ಪರಿಹಾರ ನೀಡದಿದ್ದರೇ ಬರುವ ಡಿ.3 ರಿಂದ ಜಿಲ್ಲೆಯಲ್ಲಿ ಉಗ್ರ ಹೋರಾಟ ನಡೆಸಲಾಗುವುದೆಂದು ಹಿರಿಯ ರೈತಹೋರಾಟಗಾರಹಣುಮೇಗೌಡ ಬೀರನಕಲ್ ಎಚ್ಚರಿಸಿದ್ದಾರೆ.

ಸೋಮವಾರಜಿಲ್ಲಾಧಿಕಾರಿಕಚೇರಿ ಬಳಿನಡೆದರೈತಪರಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಪರಿಹಾರ ವಿಳಂಬದಿಂದರೈತರುಆತ್ಮಹತ್ಯೆದಾರಿ ತುಳಿದರೇಸರ್ಕಾರವೇನೇರಹೊಣೆ ಎಂದುಆರೋಪಿಸಿದರು. ಬೆಳೆಹಾನಿ, ಮನೆ ಮತ್ತು ಜಾನುವಾರುಗಳನ್ನು ಕಳೆದುಕೊಂಡಬಗ್ಗೆವೈಮಾನಿಕಸಮೀಕ್ಷೆ ಮತ್ತು ಜಿಲ್ಲಾಡಳಿತದಿಂದ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಿಯೇ ಒಂದು ತಿಂಗಳಾಯಿತು. ಆದರೂಪರಿಹಾರ ನೀಡುವನಿಟ್ಟಿನಲ್ಲಿಯಾವುದೇಕ್ರಮ ಆಗುತ್ತಿಲ್ಲ ಎಂದು ದೂರಿದರು.

ಜಿಲ್ಲೆಯಲ್ಲಿಲಕ್ಷಾಂತರ ಎಕರೆ ಬೆಳೆ ಹಾನಿಯಾಗಿದೆ. ಸುಮಾರು 500 ಕ್ಕೂ ಹೆಚ್ಚು ಮನೆಗಳು ಹಾಳಾಗಿವೆ. ಜಾನುವಾರು ಸತ್ತಿವೆ. ಮೂರಕ್ಕೂ ಹೆಚ್ಚು ಜನರ ಪ್ರಾಣ ಹೋಗಿವೆ. ಆದರೂ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ ಎಂದೂ ದೂರಿದರು.

ಜಿಲ್ಲಾಧಿಕಾರಿಗಳ ಮುಖಾಂತರ ಸಿಎಂ ಅವರಿಗೆ ಮನವಿ ಸಲ್ಲಿಸಿದರು.

ಈವೇಳೆ ರುದ್ರಾಂಬಿಕಾಪಾಟೀಲ್, ಐಕೂರ ಅಶೋಕ್, ರಾಜಶೇಖರ್ ಹಾಲಗೇರ, ಹಣಮಂತ್ರಾಯ್‌ಗೌಡ ತೇಕರಳ, ಅಶೋಕವಾಟಕರ್, ವಿಜಯ ಕುಮಾರ, ಕಾಶೀನಾಥ್ ನಾಟೆಕಾರ್, ವಿಶ್ವನಾಥ್ ನಾಯಕ, ವಿಜಯ ಕುಮಾರ್, ಸಿಮಾನತುಮಕೂರ್, ಶರಣು, ನಾಗರಾಜ್ ರಾಮಸಮುದ್ರ, ವಿಜಯ ಕುಮಾರ ಮುಷ್ಟೂರ್. ಸೋಯಾಬ್, ಮಲ್ಲುತುಮಕೂರು ಸೇರಿದಂತೆಯೇ ಇತರರಿದ್ದರು.

### ಡಿಸಿ ಕಚೇರಿ ಯಾರ ಸ್ವತಃ ಆಸ್ತಿ ಅಲ್ಲ: ಹಣುಮೇಗೌಡ ಕಿಡಿ

ಹೊಸದಾಗಿಬಂದಿರುವಜಿಲ್ಲಾಧಿಕಾರಿಗಳುಜನರಸಮಸ್ಯೆಗಳಿಗೆಸ್ಪಂದಿಸಬೇಕೆಂದ ಹಣುಮೇಗೌಡ ಬೀರನಕಲ್, ಅವರ ಭೇಟಿಗೆ ಬಂದವರನ್ನು ಆಮೇಲೆ ಬನ್ನಿ ಎಂದು ಹೇಳಿದರೇ ನಡೆಯುವುದಿಲ್ಲ ಎಂದರು.

ಇತ್ತೀಚಿಗೆ ತಾವೇ ಜನರ ಸಮಸ್ಯೆ ಬಗೆಹರಿಸುವ ಕುರಿತಾಗಿ ಡಿಸಿ ಚೆಂಬರ್ ಕಾಯುತ್ತಿದ್ದಾಗ, ಆಮೇಲೆಬನ್ನಿ ಎಂದುಹೇಳಿದ್ದನ್ನು ಪ್ರಸ್ತಾಪಿಸಿದ ಅವರು, ನಾವೇನು ಸುಮ್ಮನ್ನೇ ಬಂದು ತಮ್ಮ ಸಮಯ ಹಾಳು ಮಾಡುವುದಿಲ್ಲ. ಜನರು ಸಮಸ್ಯೆ ಅಂತ ನನ್ನ ಬಳಿಗೆ ಬಂದಾಗ ಅವರನ್ನು ಕರೆದುಕೊಂಡು ತಮ್ಮ ಭೇಟಿಗೆ ಬರುತ್ತವೆ ಅಷ್ಟೆ. ಆದರೇ ಸಮಯ ಕೊಡದಿದ್ದರೇ ಹೇಗೆ? ನಾವು, ನೀವು ಇಬ್ಬರುಕೆಲಸಮಾಡುವುದು ಜನರಿಗಾಗಿಯೇ ಎಂಬುವುದನ್ನು ಅರ್ಥ ಮಾಡಿಕೊಳ್ಳಿ. ಡಿಸಿ ಕಚೇರಿ ಯಾರ ಸ್ವತಃ ಆಸ್ತಿ ಎಂದು ಕಿಡಿಕಾರಿದರು.

## ಪಾನೀಯ ಪೂರೈಕೆ ಸರಪಳಿಯಲ್ಲಿನ ಶ್ರೇಷ್ಠತೆಗಾಗಿ ಎನ್ ಜೆ ಬೆವರೇಜಸ್ ನಾಯಕತ್ವ ಪ್ರಶಸ್ತಿಯನ್ನು ಗೆದ್ದಿದೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್: ಕೆಯ್ಝೀಬ್ರ್ಯಾಂಡ್‌ಹೆಸರಿನಲ್ಲಿ ತಂಪುಪಾನೀಯಗಳನ್ನು ಉತ್ಪಾದಿಸುವ ಮೂಡುಬಿದಿರೆಮೂಲದಪಾನೀಯ ಉದ್ಯಮವಾದ ಸ್ವದೇಶಿ ಎನ್.ಜೆ. ಬೆವರೇಜಸ್ ಇಖಿಓತಿ.ಟಿ ಬಿಸಿನೆಸ್ ಕಾನ್ಕ್ಲೇವ್ ಮತ್ತು ಅವಾರ್ಡ್‌ನಲ್ಲಿ ಪಾನೀಯ ಪೂರೈಕೆ ಸರಪಳಿ ಮತ್ತು ವಿತರಣೆಯಲ್ಲಿ ಅತ್ಯುತ್ತಮ ನಾಯಕತ್ವವನ್ನು ಗೆದ್ದಿದೆ.

ಮಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ, ಉದ್ಯಮಿಗಳಾದ ಶ್ರೀ ಜೆ. ನಿಗೆಲ್ ಮತ್ತು ಶ್ರೀಮತಿ ಶಿವಾನಿ ಅವರು ಎಂಎಲ್‌ಸಿ ಇವಾನ್ ಡಿ'ಸೋಜಾ ಅವರಿಂದಪ್ರಶಸ್ತಿಯನ್ನು ಪಡೆದರು. ಕಂಪನಿಯುನಾಲ್ಕುವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಅವರು ಕುಶಲಕರ್ಮಿಗಳಿಂದತಯಾರಿಸಿದ ಆಲ್ಕೊಹಾಲ್ಯುಕ್ತವಲ್ಲದಪಾನೀಯಗಳು, ಖನಿಜಮತ್ತು ಗಾಳಿತುಂಬಿದನೀರು, ಕೆಯ್ಝೀಬ್ರ್ಯಾಂಡ್‌ಹೆಸರಿನಲ್ಲಿಹಣ್ಣಿನ ಪಾನೀಯಗಳನ್ನುಉತ್ಪಾದಿಸುತ್ತಾರೆ. ಈ ಘಟಕವು ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯಲ್ಲಿನೆಲೆಗೊಂಡಿದೆ. ಇದು ಹುಬ್ಬಳ್ಳಿಯಲ್ಲಿ ಶಾಖಾ ಕಚೇರಿಯನ್ನು ಹೊಂದಿದೆ. ಇದು ತನ್ನ ನವೀನ ಉತ್ಪನ್ನಗಳು ಅಥವಾ ಆಲೋಚನೆಗಳಿಂದಾಗಿ ಕಡಿಮೆ ಸಮಯದಲ್ಲಿಯಶಸ್ಸನ್ನುಸಾಧಿಸಿದೆ.

ಕಂಪನಿಯುಒಂದುಮಿಲಿಯನ್ ಗಿಂತಲೂ ಹೆಚ್ಚು ಸಂತೋಷದ ಗ್ರಾಹಕರನ್ನು ಗಳಿಸಿದೆ. ಭಾರತದಲ್ಲಿ ಮೊದಲಬಾರಿಗೆರೂ.5 ಎಂಆರಿಪಿಯ ಕ್ಲಬ್‌ಸೋಡಾವನ್ನು ಪ್ರಾರಂಭಿಸುವ ನವೀನಕಲ್ಪನೆಯೊಂದಿಗೆ ಅದು ಬಂದಿತು.

ಈ ಘಟಕವು ಎಚ್ಚರಿಕೆಯಿಂದ ಆಯ್ಕೆ ಮಾಡಿದ ಪದಾರ್ಥಗಳು ಮತ್ತು ಸಮಯ-ಪರೀಕ್ಷಿತ ಪಾಕವಿಧಾನಗಳನ್ನು ಬಳಸಿದೆಇದು ವಿವಿಧಗುಣಮಟ್ಟದಉತ್ಪನ್ನಗಳನ್ನು ಹೊಂದಿದೆ. ನಿಯಮದಂತೆ, ಎಲ್ಲಾ ಕಚ್ಚಾವಸ್ತುಗಳುಮತ್ತುಪದಾರ್ಥಗಳು ನೈಸರ್ಗಿಕವಾಗಿವೆ. ಇದುದೇಶದ50ಕ್ಕೂ ಹೆಚ್ಚುನಗರಗಳುಮತ್ತುಪಟ್ಟಣಗಳಲ್ಲಿ 500 ಏಜೆನ್ಸಿಗಳಬಲವಾದವಿತರಣಾ ಜಾಲವನ್ನು ಹೊಂದಿದೆ. ಜೆ. ನಿಗೆಲ್ ಹಾಗೂ ಶಿವಾನಿ ಅವರು ಬೀದರಿನ ಪ್ರತಿಷ್ಠಿತತಡಪಳ್ಳಿಕರ್ ಕುಟುಂಬದ ಸದಸ್ಯರಾಗಿದ್ದಾರೆ.



ಬಸವಕಲ್ಯಾಣ :- ತಾಲೂಕಿನ ಅಲಗುಡ ಸರ್ಕಾರಿ ಪ್ರೌಢ ಶಾಲೆ ಯಲ್ಲಿ ಹಮ್ಮಿಕೊಂಡ ರಾಜ್ಯೋತ್ಸವ ಸಮಾರಂಭ ದಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರಾದ ನಾಗಪ್ಪಾ ನಿಣ್ಣೆ ಯವರಿಗೆ ಮುಖ್ಯ ಗುರುಗಳಾದ ರಮೇಶ್ ರಾಜೋಳೆ ಯವರು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಹಿರಿಯ ಶಿಕ್ಷಕಿಯಾದ ಸುಜಾತಾ ಖೈರಾಟಕರ ರಾಜಕುಮಾರ ಬಿರಾದಾರ. ಬೌದ್ಧಪ್ರಕಾಶಸಿಂಗ. ಸುಲಭಾ ಪೋದ್ದಾರ್. ಭೋಮಲಿಂಗಪ್. ಕೆ. ದೇವಿಕಾ ರಾಜೋಳೆ. ರಾಮ ಅಲಗೂಡೆ. ಸರಸ್ವತಿ ಗೌಡೆ. ಸುಚಿತ್ರಾ ಮೇತ್ರೆ ಹಾಗೂ ಸಿಬ್ಬಂದಿ. ಎಸ್ಡಿಎಂಸಿ. ಉಪಾಧ್ಯಕ್ ದತ್ತು ಪಾಟೀಲ. ಸದಸ್ಯರಾದ. ವಿಜಯ್ ಕುಮಾರ್.ಜಾನವಾಲೆ . ಶಿಕ್ಷಣ ಪ್ರೇಮಿ . ಜೈ ಹಿಂದ್ ಹೊಂಟಾಳೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## ಬೀದರ್ ಪೌರಾಯುಕ್ತರಾಗಿ ಮುಕುಲ್ ಜೈನ್ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಬೀದರ್, ಇಲ್ಲಿನ ಪೌರಾಯುಕ್ತರ ಹುದ್ದೆಗೆ ಐಎಎಸ್ ಅಧಿಕಾರಿ. ಬಸವಕಲ್ಯಾಣದಲ್ಲಿಸಹಾಯಕ ಆಯುಕ್ತರಾಗಿ ಸೇವೆ ಸಲ್ಲಿಸಿದ್ದ ಮುಕುಲ್ ಜೈನ್ ರವರನ್ನು ಬೀದರ್ ಮಹಾನಗರ ಪಾಲಿಕೆಯ ಆಯುಕ್ತ ರನ್ನಾಗಿ ನೇಮಕ ಮಾಡಲಾಗಿದೆ.

## ಎಸ್. ಎಮ್ ಕೃಷ್ಣ ಗ್ರಾಮದಲ್ಲಿ ಗ್ಯಾರಂಟಿ ಯೋಜನೆಗಳ ಕ್ರಾಂತಿ



ಬೀದರ್. ನ. 04 :- ರಾಜ್ಯ ಸರ್ಕಾರದ ಜನಪರ ಕಾರ್ಯಕ್ರಮಗಳಾದ ಗ್ಯಾರಂಟಿ ಯೋಜನೆಗಳನ್ನು ಪ್ರತಿಮನೆಗೂ ತಲುಪಿಸುವನಿಟ್ಟಿನಲ್ಲಿ ಮಾನ್ಯ ★ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಅಶೋಕ ಖೇಣಿ★ ಸರ್ ರವರ ಮಾರ್ಗದರ್ಶನದಲ್ಲಿ ಬೀದರ ದಕ್ಷಿಣ ಕ್ಷೇತ್ರದ ತಾಲ್ಲೂಕ ಪಂಚ ಗ್ಯಾರಂಟಿ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ಮಡಕಿ ಹಾಗೂ ಸದಸ್ಯರ ನೇತೃತ್ವದಲ್ಲಿ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಬೀದರ ದಕ್ಷಿಣ ವಿಧಾನಸಭಾ ಕ್ಷೇತ್ರದ ಯದಲಾಪೂರ್ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಎಸ್. ಎಮ್ ಕೃಷ್ಣ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳಾದ,

ಶಕ್ತಿ ಯೋಜನೆ: ಮಹಿಳೆಯರಿಗೆ ಉಚಿತ ಪ್ರಾಮಾಣದ ಸೌಲಭ್ಯ ಕಲ್ಪಿಸುವುದು. ಮತ್ತು ಮಹಿಳೆಯರಿಗೆ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣ ನೀಡುವುದು.

★ಗೃಹ ಲಕ್ಷ್ಮಿ:★ ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ಆರ್ಥಿಕ ನೆರವು ನೀಡಿ, ಅವರ ಸಬಲೀಕರಣ ಮಾಡುವುದು, ಗೃಹ ಜ್ಯೋತಿ: ರಾಜ್ಯದ ಪ್ರತಿ ಮನೆಗೆ ಉಚಿತ ವಿದ್ಯುತ್ ಒದಗಿಸಿ, ವಿದ್ಯುತ್ ಬಿಲ್ ಹೊರೆಯಿಂದ ಮುಕ್ತಿ ನೀಡುವುದು. ಮತ್ತು ಯುವನಿಧಿ, ಅನ್ನಭಾಗ್ಯ ಯೋಜನಗಳ ಮಹತ್ವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿ ತಿಳಿಸಲಾಯಿತು... ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರಾದ ಶಿವಕುಮಾರ ಕುತ್ತಾಬಬಾದ್, ಸೇವಾದಳ್ ಅಧ್ಯಕ್ಷರಾದ ಮೋಹಿನ್ ಪಾಠಣ್, ಮುಖಂಡರಾದ ಸ್ವಾಮಿದಾಸ ಮುಗನೂರೆ, ಮೊಹಮ್ಮದ್ ಅನ್ಸರ್, ಶ್ರೀಧರ್, ಸೇರಿ ಅನೇಕ ಗ್ರಾಮಸ್ಥರು ಪಾಲ್ಗೊಂಡಿದರು.



ಬಿಳ್ವಾರ : ಗ್ರಾಮದ ಮಹಿಳಾ ಭಕ್ತರಿಂದ ಶ್ರೀ ಶಂಕರಲಿಂಗೇಶ್ವರ ದೇವಸ್ಥಾನದಲ್ಲಿ 2ನೇ ಕಾರ್ತಿಕ ಸೋಮವಾರದ ದೀಪೋತ್ಸವ ಕಾರ್ಯಕ್ರಮವನ್ನು ನೇರವೇರಿಸಲಾಯಿತು. (ಮಲ್ಲಮ್ಮ ನುಡಿ ಚಿತ್ರ)

## ನ.7ರಂದು ಕನ್ನಡ ದೀಕ್ಷೆ ಪ್ರತಿಜ್ಞಾ ಸ್ವೀಕಾರ ಸಮಾರಂಭ: ಸೋಮನಾಥ ಮುಧೋಳ




ಮಲ್ಲಮ್ಮ ನುಡಿ ವಾರ್ತೆ

ಬೀದರ್. ನ. 04 :- ಈ ತಿಂಗಳ 7ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಗರದ ಡಾ.ಚನ್ನಬಸವ ಪಟ್ಟದ್ದೇವರ ರಂಗಮಂದಿರದಲ್ಲಿ ಕರ್ನಾಟಕರಕ್ಷಣಾವೇದಿಕೆಜಿಲ್ಲಾಘಟಕ ಹಾಗೂವಿವಿಧಕನ್ನಡಪರಸಂಘಟನೆಗಳ ಒಕ್ಕೂಟದ ಸಹಯೋಗದಲ್ಲಿ ಕನ್ನಡ ದೀಕ್ಷೆ ಪ್ರತಿಜ್ಞಾ ಸ್ವೀಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕರವೆ ಜಿಲ್ಲಾಧ್ಯಕ್ಷಸೋಮನಾಥಮುಧೋಳ ತಿಳಿಸಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿಸೋಮವಾರಪತ್ರಿಕಾಗೋಷ್ಠಿ ಉದ್ದೇಶಿಸಿಮಾತನಾಡಿರುವಅವರು, ಆಕ್ಟೋಬರ್ 6ರಂದು ಹಾಸನ, ಆ.12ರಂದು ಬೆಳಗಾವಿಯಲ್ಲಿ ಕನ್ನಡ ದೀಕ್ಷೆ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ ಜರುಗಿದೆ. ಈ ತಿಂಗಳು ನಮ್ಮ ಜಿಲ್ಲೆಯಲ್ಲಿ ಕಾರ್ಯಕ್ರಮ ಜರುಗಲಿದ್ದು, ಈ ತಿಂಗಳ 28ರಂದು ಯಾದಗಿರಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತದೆ ಎಂದರು.

ಈ ತಿಂಗಳು 7 ರಂದು ಜರುಗಲಿರುವ ಈ ಕಾರ್ಯಕ್ರಮದ ಸಾನಿಧ್ಯವನ್ನು ಅನುಭವ ಮಂಟಪದ ಅಧ್ಯಕ್ಷರಾದ ನಾಡೋಜ ಪೂಜ್ಯ.ಡಾ.ಬಸವಲಿಂಗ ಪಟ್ಟದ್ದೇವರುಹಾಗೂಭಾಲ್ಕಿಹಿರೇಮಠ ಸಂಸ್ಥಾನದಪೂಜ್ಯಮ.ಘ.ಚಗುರುಬಸವ ಪಟ್ಟದ್ದೇವರು ಸಾನಿಧ್ಯ ವಹಿಸಲಿದ್ದು, ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ಸಮಾರಂಭ ಉದ್ಘಾಟಿಸುವರು. ಕರ್ನಾಟಕರಕ್ಷಣಾವೇದಿಕೆರಾಜ್ಯಾಧ್ಯಕ್ಷ ಟಿ.ಎ ನಾರಾಯಣಗೌಡರು ಅಧ್ಯಕ್ಷತೆ ವಹಿಸುವರು. ರಾಜ್ಯದ ಪೌರಾಡಳಿತ ಸಚಿವ ರಹಿಮ್ ಖಾನ್ ಮುಖ್ಯ ಅತಿಥಿಗಳಾಗಿಭಾಗವಹಿಸುವರು. ಏಕತಾ ಪೌಂಡೇಷನ್ ಅಧ್ಯಕ್ಷ ರವಿಂದ್ರಸ್ವಾಮಿ, ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಬಸವರಾಜ ಧನ್ನೂರ್, ಜೆಸ್ ಇನ್ಫಾ ವ್ಯವಸ್ಥಾಪಕ ನಿರ್ದೇಶಕ ಸೂರ್ಯಕಾಂತ ಅಲಮಾಜೆ ವಿಶೇಷ ಅಹ್ವಾನಿತರಾಗಿಪಾಲ್ಗೊಳ್ಳುವರುಎಂದು ವಿವರಿಸಿದರು. ಔರಾದ್ ತಾಲೂಕಾಧ್ಯಕ್ಷ ಅನಿಲ ಹೇಡೆ, ಹುಮನಾಬಾದ್ ತಾಲೂಕಾಧ್ಯಕ್ಷ ವಿರೇಶರಡ್ಡಿ, ಕಮಲನಗರ ತಾಲೂಕಾಧ್ಯಕ್ಷಮಂಜುನಾಥಸ್ವಾಮಿ, ಭಾಲ್ಕಿ ತಾಲೂಕಾಧ್ಯಕ್ಷ ಬಂಡೆಪ್ಪಕರಸಣ್ಣ, ಜಿಲ್ಲಾ ಪ್ರಧಾನಕಾರ್ಯದರ್ಶಿ ವಿಶ್ವನಾಥಗೌಡ, ಜಿಲ್ಲಾಉಪಾಧ್ಯಕ್ಷರಾದಸೋಮಶೇಖರ ಸಜ್ಜನ್ ಹಾಗೂ ವಿಶ್ವನಾಥ ತೀರ್ಥಾ ಪತ್ರಿಕಾಗೋಷ್ಠಿಯಲ್ಲಿದ್ದರು.



ಬಿಹಾರ್ ವಿಧಾನಸಭೆ ಚುನಾವಣೆ ನಿಯಮಿತ ಚುನಾವಣೆ ನಿಮಿತ್ತ ಕರ್ನಾಟಕ ರಾಜ್ಯ ಲೋಕ ಜನಶಕ್ತಿ ಪಾರ್ಟಿಯ ಕಾರ್ಯಕರ್ತರ ದಂಡು ಬಿಹಾರ್ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ತೊಡಗಿರುತ್ತಾರೆ ಕರ್ನಾಟಕ ಲೋಕ ಜಯ ಶಕ್ತಿ ಪಾರ್ಟಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ನಾಗಶೆಟ್ಟಿ ಪಾಟೀಲ್ ಸುಂಕನಾಳ್ ಬೀದರ್ ಜಿಲ್ಲಾ ಅಧ್ಯಕ್ಷರಾದ ರಾಕೇಶ್ ಕುಲಕರ್ಣಿ ಬೀದರ್ ಜಿಲ್ಲಾ ಮೈನಾರಿಟಿ ಅಧ್ಯಕ್ಷರಾದಂತಹ ಜಾನ್ಸನ್ ನಾಗರಕಾರ್ ಬೆಂಗಳೂರು ಗ್ರಾಮೀಣ ಅಧ್ಯಕ್ಷರಾದಂತ ಕೃಷ್ಣಮೂರ್ತಿ ಮೈನಾರಿಟಿ ಕಾರ್ಯ ಕಾರಣಿ ಸದಸ್ಯರಾದಂತಹ ಶೇಖ ಅಲಿ ಮುದ್ದಿನ್ ಬೆಳಗಾವಿ ಜಿಲ್ಲಾ ಅಧ್ಯಕ್ಷರಾದಂತಹ ಕಾರ್ತಿಕ್ ಜಿಕಾತೆ ಅನೇಕ ಕಾರ್ಯಕರ್ತರು ಬಿಹಾರ್ ವಿಧಾನಸಭಾ ಚುನಾವಣೆ ಎಲ್ಲಿ ಎನ್ ಡಿ ಎ ಅಭ್ಯರ್ಥಿಗಳ ಪ್ರಚಾರದಲ್ಲಿ ತೊಡಗಿರುತ್ತಾರೆ

(ಮಲ್ಲಮ್ಮ ನುಡಿ ಚಿತ್ರ)

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)